ಜನವರಿ : ೧೯೭೮ ಸಂಚಿಕೆ : ೯

ಕಲ್ಯಾಣ ಕಿರಣ



Digitalized by e-Sahithya Documentation Forum
Sponsored by Sarayu Foundation Trust

೧೯೭೮ ರ ಸಾಲಿನ ಶರಣರ ಜಯಂತಿಗಳು ಮತ್ತು ಹಬ್ಬಗಳು

೧.	ಸಿದ್ಧರಾಮ ಜಯಂತಿ	(ಮಕರ ಸಂಕ್ರಮಣ)	೧೪-೧-೧೯೭೮
೨.	ಸ್ವಾಮಿ ವಿವೇಕಾನಂದ ಜಯಂತಿ		೩೧-೧-೧೯೭೮
೩	ಮಾಧ್ವ ನವಮಿ		೧೬-೨-೧೯೭೮
೪.	ಸರ್ವ ಶರಣರ ದಿನಾಚರಣೆ	(ಮಹಾಶಿವ ರಾತ್ರಿ)	೭-೩-೧೯೭೮
೫.	ಮಾತಾಜಿ ಜಯಂತಿ		೧೩-೩-೧೯೭೮
೬.	ಅಲ್ಲಮ ಪ್ರಭು ಜಯಂತಿ	(ಯುಗಾದಿ ಪ್ರತಿಪದೆ)	೮-೪-೧೯೭೮
೭.	ಮಹಾವೀರ ಜಯಂತಿ		೨೧-೪-೧೯೭೮
೮.	ಅಕ್ಕಮಹಾದೇವಿ ಜಯಂತಿ	(ದವನದ ಹುಣ್ಣಿಮೆ)	೨೩-೪-೧೯೭೮
೯.	ಬಸವ ಜಯಂತಿ	(ಅಕ್ಷಯ ತೃತೀಯ)	೯-೫-೧೯೭೮
೧೦.	ರಾಮಾನುಜ ಜಯಂತಿ		೧೧-೫-೧೯೭೮
೧೧.	ಶಂಕರ ಜಯಂತಿ		೧೨-೫-೧೯೭೮
೧೨.	ವಾಸವಿ ಜಯಂತಿ		೧೭-೫-೧೯೭೮
೧೩.	ಬುದ್ಧ ಜಯಂತಿ		೨೨-೫-೧೯೭೮
೧೪.	ಬಸವ ಲಿಂಗೈಕ್ಯ ದಿನಾಚರಣೆ	(ಶ್ರಾವಣ ಶುದ್ಧ ಪ್ರತಿಪದ)	೪-೮-೧೯೭೮
೧೫.	ಸ್ವಾತಂತ್ರ್ಯೋತ್ಸವ		೧೫-೮-೧೯೭೮
೧೬.	ಸ್ವಾಮಿ ಲಿಂಗಾನಂದ ಜಯಂತಿ	(ಗಣೇಶ ಚತುರ್ಥಿ)	೬-೯-೧೯೭೮
೧೭.	ಗಾಂಧೀ ಜಯಂತಿ		೨-೧೦-೧೯೭೮
೧೮.	ಕಲ್ಯಾಣ ಕ್ರಾಂತಿ ದಿನಾಚರಣೆ	(ಮಹಾನವಮಿ)	೧೦-೧೦-೧೯೭೮
೧೯.	ಚನ್ನಬಸವ ಜಯಂತಿ	(ಬಲಿಪಾಡ್ಯಮಿ)	೧-೧೧-೧೯೭೮
೨೦.	ನಿಜಗುಣ ಶಿವಯೋಗಿ ಜಯಂತಿ		೨೪-೧೧-೧೯೭೮
೨೧.	ಮಾದಾರ ಚನ್ನಯ್ಯ ಜಯಂತಿ		೧೪-೧೨-೧೯೭೮

(ಬೆಂಗಳೂರು ಮುದ್ರಣಾಲಯವನ್ನು ಆಧರಿಸಿ)

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ

೨೪, ಕಾರ್ಡ್‌ರೋಡ್, ಎರಡನೆ ಬ್ಲಾಕ್, ರಾಜಾಜಿನಗರ, ಬೆಂಗಳೂರು-೧೦

ಕಲ್ಯಾಣ ಕಿರಣ

ಶ್ರೀ ಸಾಮಾನ್ಯರಿಗೆ — **ನುಡಿ ನೈವೇದ್ಯ**

ಎಲೆ ಮನುಜ ನೀನಲ್ಲ ನಿಜಕು ನಿರ್ಗತಿಕ
ಬಳಲದಿರು ನಿನಗೇನು ಇಲ್ಲೆಂಬ ಮರವೆಯಿಂ ||
ಭುವಿಯ ನೋಡುವ ಬೆಳಕಿಂಡಿಗಳು ನಿನ್ನ ನಕ್ಷತ್ರ ನೇತ್ರಗಳು
ಇಳೆಯ ಸೊಬಗನು ಸವಿವ ಬಾಳ ಜ್ಯೋತಿಗಳು.
ಕೋಕಿಲೆಯ ಕುಕಿಲವ, ಶುಕಪಿಕದ ಕಲರವವ
ಮೂಕ ತಾವರೆಗೆರಗುವ ಅಳಿಯ ಗುಂಜಾರವವ,
ಜುಳಜುಳನೆ ಹರಿಯುವ ಮಂಜುಳ ತರಂಗಿಣಿಯ
ನಾದವನು ಸವಿಯಲು ಕರ್ಣದ್ವಾರಗಳಿಹವು.
ತಿರುಗಲಿರಲಿಕ್ಕಿಲ್ಲ ನಿನಗೆ ಇಂಫಾಲ ಕಾರು
ಒರಗಲಿರಲಿಕ್ಕಿಲ್ಲ ಮನೆಯೊಳು ಆರಾಮ ಛೇರು
ನಿಸರ್ಗ ಮಾತೆಯ ಮಡಿಲ ಸಿರಿ ಮಮತೆಯನು
ಮನದಣಿಯೆ ಸವಿವ ಪುಣ್ಯವಿಹ ನಿನಗೆ ಎಣೆಯಾರು ?
ಸಕಲ ಜೀವಕೆ ಮೂಲ ಸರುವ ವ್ಯಾಪಕ ಶೀಲ
ಜಗದೊಡೆಯ ಪರಮ ದಯಾನಿಧಿ ದೇವನ
ಸೆರೆ ಹಿಡಿವ ಗಂಹ್ವರ ನಿನ್ನೆದೆಯ ಮಂದಿರ !
ಇದನರಿತು ನೀ ದುಡಿ, ನಡೆ-ನುಡಿಯ ಮೇಳೈಸಿ
ಒಡೆಯ ಸಚ್ಚಿದಾನಂದನ ಋಣಿಯಾಗಿ ಸ್ಮರಿಸಿ ||

Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣ ಕಿರಣ

ಸಂಪುಟ : ೩ — **ಜನವರಿ : ೧೯೭೮**
ಸಂಚಿಕೆ : ೯ — **ಬಸವ ಶಕೆ : ೮೭೧**

ಪುಟ ತೆರೆದಾಗ

ಮುಖಪುಟ : ಧೀರ ಸನ್ಯಾಸಿ ಸ್ವಾಮಿ ವಿವೇಕಾನಂದ
ಹಿಂಬದಿಯ ಹೊದ್ದಿಕೆ : ಅರಸೀಕೆರೆಯಲ್ಲಿ ಅಭಿಮಾನದ ಸ್ವಾಗತದ ಛಾಯಾ ಚಿತ್ರ.

ಕಲ್ಯಾಣ ಕಿರಣ
ಮಾಸಪತ್ರಿಕೆ
ಸಂಸ್ಕೃತಿ, ಸಾಹಿತ್ಯ, ನೀತಿ ಆಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :
ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು:

ಕೇಂದ್ರ ಕಾರ್ಯಾಲಯ :
ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್ ರಾಜಾಜಿನಗರ.
ಬೆಂಗಳೂರು–೫೬೦೦೧೦

ಕಲೆ :
ಬಿ. ಪಿ. ಕೃಷ್ಣಯ್ಯ

ಮುದ್ರಣ : ಸೂಪರ್ ಪ್ರಿಂಟರ್ಸ್,
ಬೆಂಗಳೂರು–೫೬೦೦೫೩.

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು:

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟ್ಯಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.


* ಹೊಸ ಚಂದಾದಾರರು ೧೨-೦೦ (ಹನ್ನೆರಡು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ).

* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

Digitalized by e-Sahithya Documentation Forum
Sponsored by Sarayu Foundation Trust

ನಿಮ್ಮ ಅನಿಸಿಕೆ



VICE-PRESIDENT
INDIA
NEW DELHI
November 14, 1977

Poojya Swamiji.,

I have received a copy of your magazine under caption 'Kalyana Kiran', I am glad that you have started it for the benefit of the people of Karnataka. I hope you are sending a copy to Basava Samiti. Bangalore for its perusal.

With Pranams.

Your's Sincerely,
(B. D. Jatti)

Shri. Lingananda Swamiji,
24, chord Road, 2nd Block,
Rajajinagar, BANGALORE-10.

ಪೂಜ್ಯರ ಸನ್ನಿಧಿಯಲ್ಲಿ ಪ್ರಣಾಮ

ಕಲ್ಯಾಣ ಕಿರಣ ವಿಶ್ವಧರ್ಮದ ಕಂಪು ಹೊತ್ತು ಬರುವ ಮಂದ ಮಾರುತವಾಗಿದೆ. ತ್ರೀನೇತ್ರಿಯವರ ಮೂವರು ಮಿತ್ರರು ತುಂಬಾ ಚೆನ್ನಾಗಿದೆ. ಕತೆಯು ಕೇವಲ ಬಿಸಿಲ್ಗುದರೆಯಲ್ಲ, ತತ್ತ್ವಜ್ಞಾನದ ಆಗರ ಎಂಬುದನ್ನು ಅವರ ಶೈಲಿಯಲ್ಲಿ ಮನಗಂಡೆ

– ಹೋ. ಪು. ಕೆಂಪಯ್ಯ, ಕನ್ನಡ ಪಂಡಿತರು.

ಕಲ್ಯಾಣ ಕಿರಣ ಪುನರಾರಂಭವಾಗಿ ನಮಗೆಲ್ಲ ಹಬ್ಬದೂಟವನ್ನು ಹೊತ್ತು ತರುತ್ತದೆ. ಬರಡು ಭುವಿಗೆ ತಣ್ಣೀರನ್ನು ವರ್ಷಿಸುವ ಮೇಘಧಾರೆಯಂತೆ ಜ್ಞಾನಾಮೃತವನ್ನು ಹೊತ್ತು ತರುತ್ತದೆ. ಸಂಪಾದಕರ 'ಮಾತೃಹರಕೆ', ಶ್ರೀಗಳ 'ವಚನ ನವನೀತ' ಪಾರಮಾರ್ಥ ಸರಸಿಗಳು. ಈ ಅರಿವಿನ ಅಮೃತವಾಹಿನಿ ಚಿರಕಾಲ ಹರಿಯಲಿ.

ಸಿ. ಬಾಲಪಗೋಳ. ಮಹಾಗಾಂವ



ಮಾತೃಹರಕೆ

ಜಾತಿಗಳ ಅಳಿವು-ಉಳಿವು.

ಪೃಥ್ವಿಯ ಅದಾವ ಭಾಗದಲ್ಲಿಯೂ (ಹಿಂದೂ ಸಂಸ್ಕೃತಿಯ ಪ್ರಭಾವವಿಲ್ಲದ ಭಾಗ) ಇಲ್ಲದ ಅತ್ಯಂತ ವಿಚಿತ್ರ ರೀತಿಯ ಸಾಮಾಜಿಕ ವಿಭಜನೆ. ಭಾರತದಲ್ಲಿದೆ : ಅದರಲ್ಲೂ ವಿಶೇಷತಃ ಹಿಂದೂ ಸಮಾಜದಲ್ಲಿದೆ. ಪಾಶ್ಚಿಮಾತ್ಯರಲ್ಲಿ ಹಣದ ಮೇಲೆ ಮನುಷ್ಯನ ಮಟ್ಟವನ್ನಳೆಯುವ ವರ್ಗ ವಿಭಜನೆ ಇದ್ದರೆ, ಹಿಂದೂಗಳಲ್ಲಿ ಜನ್ಮ ಜಾತಿಗಳ ಮೇಲೆ ಮೆಟ್ಟಿಲು ಮೆಟ್ಟಿಲಾಗಿ ಸಮಾಜವನ್ನು ವಿಂಗಡಿಸಿ ರಚಿಸಿದ ವರ್ಣ ಮತ್ತು ಜಾತಿಯ ವಿಭಜನೆ ಪ್ರಚಲಿತವಿದೆ. ವರ್ಗವೈಷಮ್ಯ, ವರ್ಗಭೇದವೂ ಒಂದು ಅಪರಾಧವೇ ಆದರೂ ನಿರ್ಗತಿಕ ಒಮ್ಮೆಯಲ್ಲಾ ಒಮ್ಮೆ ಸಿರಿವಂತನಾಗುವೆನೆಂಬ ಭರವಸೆಯನ್ನಾದರೂ ತಾಳಬಹುದು. ಆದರೆ ಇಲ್ಲಿ, ಹುಟ್ಟಿದ ಜಾತಿಯನ್ನು ತೊಡೆದುಕೊಳ್ಳಲು ಬರಲೇ ಆಗದು ಎಂಬ ನಂಬುಗೆ ತಲೆಯಲ್ಲಿ ಅಚ್ಚೊತ್ತಿದೆ. ಹೀಗಾಗಿ ಯಾವುದಾದರೊಂದು ಜಾತಿಯಲ್ಲಿ ಹುಟ್ಟಿದವನು ಅ ಜಾತಿಯ ತಲೆಪಟ್ಟಿ ತೆಗೆದುಹಾಕಿ ಬಾಳುವುದೇ ಕಷ್ಟಕರ, ಆಥವಾ ಆಸಾಧ್ಯ ಎಂಬ ನಂಬುಗೆ ಮೇಲು ಜಾತಿಯವರೆಂದು ಭಾವಿಸಿಕೊಳ್ಳವವರಿಂದ ಹಿಡಿದು ಕೀಳುಜಾತಿಯವರೆಂದು ನಂಬಿರುವವರೆಗೂ ಹಾಸುಹೊಕ್ಕಾಗಿದೆ.

ಹೀಗಿರುವಾಗ, "ಜಾತಿಯು ವಿನಾಶಕಾರಿ, ಜಾತಿ ಪದ್ಧತಿ ಅಮಾನುಷವಾದುದು, ಇದು ತೊಲಗಿದ್ದಲ್ಲದೆ ಸಮಾಜ-ನಾಡುಗಳ ಉದ್ಧಾರವಿಲ್ಲ." ಎಂಬ ವಿಚಾರವಾದಿಗಳ ಘೋಷಣೆ ಒಂದೆಡೆ ಜಾಗೃತವಾಗುತ್ತಿದ್ದರೆ, ಬಲವನ್ನು ಪಡೆಯುತ್ತಲಿದ್ದರೆ ; "ವರ್ಣ ವ್ಯವಸ್ಥೆ ಸೂಕ್ತ ಸಮಾಜ ವ್ಯವಸ್ಥೆ, ಅದು ಪರಿಪೂರ್ಣ ಸಮಾಜ ರಚನೆಗೆ ಉಪಯುಕ್ತ" ಎಂದು ಸಮರ್ಥಿಸುವವರು ಮತ್ತೊಂದೆಡೆ ; ಇಷ್ಟೇ ಅಲ್ಲ ಕರ್ಮವಾದದ ವಿಚಾರ ಮುಂದೊಡ್ಡಿ, ಹಿಂದಿನ ಜನ್ಮಗಳ ಕರ್ಮಗಳ ಪ್ರತಿಫಲವಾಗಿಯೇ ಬೇರೆ ಬೇರೆ ಜಾತಿಗ

Digitalized by e-Sahithya Documentation Forum
Sponsored by Sarayu Foundation Trust

ಳಲ್ಲಿ ಜನ್ಮಧಾರಣೆ. ಆದ್ದರಿಂದ ಅದನ್ನು ವಿಧಿಯಿತ್ತ ವರವೆಂದು ನಂಬಬೇಕೇ ವಿನಾ ವಿರೋಧಿಸ ತಕ್ಕುದಲ್ಲ" ಎಂಬ ವಾದವನ್ನೂ ಅವರು ಮುಂದೊಡ್ಡದಿರರು.

ಜಾತಿ ವ್ಯವಸ್ಥೆ ಉತ್ತಮ ವ್ಯವಸ್ಥೆಯೆಂದು ಒಪ್ಪಿಕೊಳ್ಳುವವರು ಒಡ್ಡುವ ವಾದಗಳು ಇವು: "ದೇವರಿಂದಲೇ ಜಾತಿಗಳು ನಿರ್ಮಾಣವಾಗಿವೆ. ಅವುಗಳನ್ನು ಉಲ್ಲಂಘಿಸುವುದು ಮಹಾನ್ ಅಪರಾಧ." "ಜನರು ಬೇರೆ ಬೇರೆ ತಂಡಗಳಾಗುವ ಜಾತಿಕ್ರಮವು ಸಾವಿರಾರು ವರ್ಷಗಳಿಂದ ಬಾಳಿ ಬಂದಿದೆಯಾದ್ದರಿಂದ ಅದು ನಮ್ಮ ಸಮಾಜದ ಯಾವುದೋ ಮುಖ್ಯ ಅವಶ್ಯಕತೆಯನ್ನು ಅತಿ ಚನ್ನಾಗಿ ಪೂರೈಸಿ ಜನರಿಗೆ (ಯಾವ ಜನರಿಗೆ?) ಅನುಕೂಲ ಉಂಟು ಮಾಡಿರಬೇಕೆಂಬುದು ಖಂಡಿತ. ಇಲ್ಲವಾದರೆ ಶಾಸ್ತ್ರದ ಮತ್ತು ಸರಕಾರದ ಬೆಂಬಲವಿಲ್ಲದೆಯೇ ಅವು ಹೀಗೆ ಬಾಳಿ ಬರುತ್ತಿದ್ದವೆ?" ಎನ್ನುತ್ತಾರೆ ಮಂಗಳೂರಿನ ವಾಸುದೇವ ಕಾರಂತರು. ತಮ್ಮ ಜಾತಿಧರ್ಮ ಮಹತ್ವ ಎಂಬ ಪುಸ್ತಕದಲ್ಲಿ, ಅಂತರ್ಜಾತೀಯ ವಿವಾಹಗಳು ಯಶಸ್ವಿಯಾಗವು ಮತ್ತು ಒಂದೇ ಜಾತಿಯಲ್ಲಾದಾಗ ಅವು ಸಫಲವಾಗುವವು ಎಂದು ಒಂದು ವಾದವನ್ನು, ಧಾರ್ಮಿಕ ಸಾಧನೆಗೆ ವರ್ಣಾಶ್ರಮ ಪದ್ಧತಿಯೇ ಅತ್ಯಂತ ಸೂಕ್ತವೆಂಬ ವಾದವನ್ನು ಮಂಡಿಸುತ್ತಾರೆ. "ವೃತ್ತಿಯಿಂದ ವರ್ಣವನ್ನು ನಿರ್ಧರಿಸಬೇಕೇ ವಿನಾ. ಜಾತಿಯಿಂದಲ್ಲ" ಎಂಬ ನೂತನ ವಿಚಾರಧಾರೆಯನ್ನು, ಅಂದರೆ ಯಾವ ತಾಯಿತಂದೆಗಳಲ್ಲಿ ಹುಟ್ಟಿದರೇನಂತೆ ಕಬ್ಬಿಣ ಕಾಸಿದವ ಕಮ್ಮಾರ, ಬಟ್ಟೆ ತೊಳೆದವ ಮಡಿವಾಳ ಎಂದು ವಿಂಗಡಿಸುವುದನ್ನು, ಕಾರಂತರು ಕಟುವಾಗಿ ಟೀಕಿಸುತ್ತಾರೆ. "ವರ್ಣ ವ್ಯವಸ್ಥೆಯನ್ನು ಬಿಟ್ಟ ಧರ್ಮಗಳು ಕೆಳಮಟ್ಟಕ್ಕಿಳಿದವು." ಎಂದು ಅಭಿಪ್ರಾಯ ಪಡುತ್ತಾರೆ. "ಆದ್ದರಿಂದ ನಮ್ಮ ಸುಮಾರು 500 ಮಿಲಿಯ ಹಿಂದೂ ಜನರಿಗೆ 3000 ಜಾತಿಗಳೇನು ವಿಪರೀತವಲ್ಲ (ಪುಟ 12)" ಎಂದು ನಂಬುತ್ತಾರೆ. "ಅಸ್ಪೃಶ್ಯತೆಯೇನೂ ದ್ವೇಷದ ಪ್ರತಿಕ್ರಿಯೆಯಲ್ಲ ; ಅದು ಸವರ್ಣೀಯನು ತನ್ನ ಪರಿಶುದ್ಧತೆ ಕಾಪಾಡಿಕೊಳ್ಳಲಿಕ್ಕೆ ಮಾತ್ರ. (ಪುಟ 54) ಎಂದು ಬರೆಯುವ ಕಾರಂತರು, ಅಸ್ಪೃಶ್ಯತೆಯ ಆಚರಣೆ ದ್ವೇಷದ ಪರಿಣಾಮವಲ್ಲ ಎಂಬುದಕ್ಕೆ ಒಂದು ಉದಾಹರಣೆ ಕೊಡುತ್ತಾರೆ. ಅದೇಂದರೆ, ಬ್ರಾಹ್ಮಣರಿಗೆ ಅಸ್ಪೃಶ್ಯನ ದರ್ಶನವಾದಾಗ ಅವರೇ ಪುನಃ ಸ್ನಾನ ಮಾಡುತ್ತಿದ್ದರಲ್ಲದೆ ಅವನನ್ನೇನು ಶಿಕ್ಷಿಸುತ್ತಿದ್ದರೆ ? ಅಸ್ಪೃಶ್ಯನ ಮೇಲೆ ದ್ವೇಷವಿದ್ದರೆ ಅವನಿಗೆ ಉಗ್ರಶಿಕ್ಷೆ ಕೊಡುತ್ತಿದ್ದರು."

ಮಹಾತ್ಮಾಜಿಯವರು ಒಮ್ಮೆ ಡಾ|| ಅಂಬೇಡ್ಕರರೊಡನೆ ವಾದವೆದ್ದಾಗ ನುಡಿಯುತ್ತಾರೆ : "ಜಾತೀಯತೆ, ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಅಂಟಿದ ಮಹಾಕಳಂಕ. ನನಗೂ ಈ ಬಗ್ಗೆ ಬೇಸರವಿದೆ. ಆದರೆ ಮನುಷ್ಯನೋರ್ವನಿಗೆ ಒಂದು ಹುಣ್ಣಾದ ಮಾತ್ರಕ್ಕೆ ಆ ಹುಣ್ಣು ತೆಗೆಯುವುದು ಬಿಟ್ಟು ಮನುಷ್ಯನ ಅವಸಾನ ಬಯಸುವುದು ಎಷ್ಟು ತಪ್ಪು? (ಇದುವಿಚಾರದ ಸಾರಾಂಶ ಮಾತ್ರ, ನೇರ ಹೇಳಿಕೆಯಲ್ಲ) ಹಾಗೆ ವರ್ಣ

ಜಾತಿ ಪದ್ಧತಿಯ ಪುರುಷನಿಗೆ ಅಸ್ಪೃಶ್ಯತೆಯು ಹುಣ್ಣು ಆಗಿದೆ. ಅಸ್ಪೃಶ್ಯತೆಯ ಹುಣ್ಣನ್ನು ತೆಗೆಯಬೇಕೇ ವಿನಾ ವರ್ಣಾಶ್ರಮ ಸಮಾಜ ವ್ಯವಸ್ಥೆಯನ್ನೇ ವಿರೋಧಿಸಬಾರದು."

ಡಾ|| ಅಂಬೇಡಕರರು ಮಹಾತ್ಮಾಜಿಯವರ ಈ ವಾದವನ್ನು ಅಲ್ಲಗಳೆದರು. "ಅಸ್ಪೃಶ್ಯತೆಯು ದೇಹದ ಒಂದು ಭಾಗಕ್ಕೆ ಅದು ಹುಣ್ಣೆನಂತಲ್ಲ. ವರ್ಣ–ಜಾತಿ ವ್ಯವಸ್ಥೆ ಎಂಬ ವಿಷವೃಕ್ಷವು ಬಿಡುವ ಕಹಿ ಫಲ. 'ಗಿಡವು ಇರುವಂತೆಯೇ ಇರಲಿ', ಎಂದರೆ ವಿಷಫಲಗಳನ್ನು ಪುನಃ ಪುನಃ ಬಿಡದೆ ಇರದು. 'ಅದು ಫಲಗಳನ್ನು ಬಿಡಲಿ, ತಿನ್ನದೆ ಎಚ್ಚರ ವಹಿಸಿ' ಎಂದು ಪ್ರಚಾರಮಾಡಬೇಕು ಎಂದಂತಾಯಿತು. ಹಣ್ಣುಗಳಿದ್ದಾಗ ಉದ್ದೇಶ ಪೂರ್ವಕವಾಗಿಯೋ, ಅಜ್ಞಾನದಿಂದಲೋ ತಿನ್ನುವಂತೆ ಅಸ್ಪೃಶ್ಯತೆಯ ಪಿಡುಗನ್ನು ಉಳಿಯಗೊಟ್ಟರೆ ಜನತೆ ಹಾಳಾಗುವುದು ಖಂಡಿತ. ಆದ್ದರಿಂದ ಹಣ್ಣು ಬಿಡುವ ವೃಕ್ಷವನ್ನೇ ಸಮೂಲಾಗ್ರವಾಗಿ ಕಿತ್ತುಬಿಸುಡಿದರೆ ಹಣ್ಣು ತಿನ್ನುವ ಪ್ರಶ್ನೆಯೇ ಏಳದು. ಅಂತೆಯೇ ವರ್ಣ–ಜಾತಿ ಪದ್ಧತಿಯನ್ನು ಸಂಪೂರ್ಣ ನಾಶ ಮಾಡಬೇಕು." ಈ ವಿಚಾರವನ್ನು ತಳೆದರು ಡಾ|| ಅಂಬೇಡಕರ್. ಜೀವನ ಪರ್ಯಂತರ ಅವರು ಹೋರಾಡಿದರೂ ಸಹ ಬೇರುಬಿಟ್ಟ ರಕ್ಕಸ ವೃಕ್ಷವನ್ನು ಅಲ್ಲಾಡಿಸಲು ಅಸಮರ್ಥರಾದರೇನೋ ಎಂಬಂತೆ ಕಡೆಗೆ ಬೌದ್ಧ ಧರ್ಮವನ್ನು ಸ್ವೀಕರಿಸಿದರು, ಜಾತಿ ಪದ್ಧತಿ–ಅಸ್ಪೃಶ್ಯತೆಗಳ ವಿಷ ವರ್ತುಲದಿಂದ ಪಾರಾಗಲು.

ಅಂತೂ ವರ್ಣವ್ಯವಸ್ಥೆಯ ಬೀಜ ಎಂದು ಬಿತ್ತ್ರೋ, ಯಾರಿಂದ ಬಿತ್ತ್ರೋ, ಅದನ್ನು ನೀರೆರೆದು ಪೋಷಿಸಿಕೊಂಡು ಬಂದವರು ಬಹಳ ಜನ. ಕೆಲವು ಸಮಾಜ ಸುಧಾರಕ ಪ್ರವಾದಿಗಳು ಅದನ್ನು ಎದುರಿಸಿ ಕೊಂಬೆರೆಂಬೆಗಳನ್ನು ಕಡಿಯ ಹೋದರು, ಇನ್ನು ಕೆಲರು ಅದರ ವಿಷಗಾಳಿಯೇ ಬೇಡೆಂದು ಕ್ಷೇತ್ರದ ಕಕ್ಷೆಯನ್ನೇ ಬಿಟ್ಟು ಹೋದರು. ಸಹಸ್ರಾರು ವರುಷಗಳಿಂದ ಭಾರತೀಯನ ಮತಿಗೆ, ಕೃತಿಗೆ, ನೀತಿಗೆ ಸವಾಲು ಒಡ್ಡಿರುವ ಈ ಜಾತಿಪದ್ಧತಿ ತಪ್ಪೋ–ಒಪ್ಪೋ ? ಅಳಿಯಬೇಕೇ–ಉಳಿಯಬೇಕೆ ? ಯಥಾರೂಪದಲ್ಲಿರಬೇಕೆ ? ಮಾರ್ಪಾಡಾಗಬೇಕೆ ? ಈ ಬಗ್ಗೆ ಓದುಗರು ಚಿಂತಿಸಿ, ತಮ್ಮ ಅಭಿಪ್ರಾಯಗಳನ್ನು "ಕಲ್ಯಾಣ ಕಿರಣಕ್ಕೆ" ಕಳಿಸಬೇಕು. ಪರ ಮತ್ತು ವಿರೋಧ ಎರಡೂ ವಿಚಾರಗಳನ್ನು ಮಂಡಿಸಲು ಅವಕಾಶವಿದೆ. ಜಾತಿಗಳು ಉಳಿಯಬೇಕು ಎಂಬುವರು, ಇಂದಿನ ಸಮಾಜದಲ್ಲಿ ಮಾರ್ಪಾಡು ಅವಶ್ಯಕವಾಗಿ ಬೇಕು, ಹೇಗಾಗಬೇಕು ಎಂಬುವವರು ಸಕಾರಣಗಳೊಡನೆ ಮುಕ್ತಮನದಿಂದ ಅಭಿಪ್ರಾಯ ಬರೆಯಿರಿ.

ಮಾತೆ ಮಹಾದೇವಿ

★★★

Digitalized by e-Sahithya Documentation Forum
Sponsored by Sarayu Foundation Trust




—ಮಾತಾಜಿ

ಒಂದು ದಿನ ಬೆಳಿಗ್ಗೆ ಪೂಜ್ಯ ಸ್ವಾಮೀಜಿಯವರು ಹೊರಗೆ ಅಡ್ಡಾಡುತ್ತಲಿದ್ದರು. ಅಲ್ಲೇ ಸನಿಹದಲ್ಲಿ ಒಂದು ಕಟ್ಟಡದ ಕಾರ್ಯನಡೆದಿತ್ತು. ಗೋಡೆಯ ಗಿಲಾವು ಮಾಡುತ್ತಿದ್ದರು. ಕಾಳಜಿಯಿಂದ ಗೋಡೆಗೆ ನೀರನ್ನು ಕೆಲಸಗಾರರು ಹೊಡೆಯದೆ ಇದ್ದುದನ್ನು ಕಂಡು ಬುದ್ಧಿವಾದ ಹೇಳಿದರು : "ಏನಪ್ಪ ಎಷ್ಟು ಸಿಮೆಂಟು ಹಾಕಿ ಗಿಲಾವು ಮಾಡಿದರೆ ಏನಂತೆ ? ನಂತರ ನೀರು ಹೊಡೀದಿದ್ದರೆ ಎಲ್ಲವೂ ಬೂದಿಯಾಗಿ ಉದುರುವುದು, ಗಟ್ಟಿಯಾಗಿ ನಿಲ್ಲದು." ತಕ್ಷಣವೇ ಒಂದು ವಿಷಾದದೊಡನೆ ಹೇಳಿದರು : "ಅದೇ ರೀತಿ ನಾವು ತಿಂಗಳು ಗಟ್ಟಳೆ ಪ್ರವಚನ ಮತ್ತು ಜ್ಞಾನೋಪದೇಶ ಮಾಡಿ ಮನಸ್ಸಿಗೆ ತತ್ತ್ವಜ್ಞಾನದ ಪ್ಲಾಸ್ಟರ್ ಮಾಡಿ ಹೋಗುತ್ತೇವೆ. ನಂತರ ಅದಕ್ಕೆ ಭಕ್ತಿ–ಸಂಸ್ಕಾರಗಳನ್ನೆರೆಯುವ ಸದ್ಗುರುಗಳು, ಬೋಧಕರು, ಪ್ರಾರ್ಥನಾ ಮಂದಿರ, ಬಸವ ಮಂಟಪಗಳು ಇರದಿದ್ದರೆ ಅಥವಾ ಶ್ರೋತೃಗಳು ಸ್ವಪ್ರಯತ್ನದಿಂದಲಾದರೂ ಭಕ್ತಿನೀರನ್ನೆರೆಯದಿದ್ದರೆ ಗಳಿಸಿದ ಜ್ಞಾನವೂ ಬೂದಿಯಾಗದಿರದು."

★★★

ಒಂದು ದಿನ ಹವಾಸೇವನೆಗೆ ಅಡ್ಡಾಡುತ್ತಿದ್ದೆ. ತಿಪಟೂರಲ್ಲಿ ಪ್ರವಚನ ನಡೆಯುತ್ತಿತ್ತು. ತಿಪಟೂರು–ಅರಸೀಕೆರೆಗಳು ಕಲ್ಪತರುವಿನ ನಾಡಷ್ಟೆ. ತೆಂಗಿನ ಸಸಿಯೊಂದು ಒಣಗರಿಗಳಿಂದ ಸುತ್ತಲ್ಪಟ್ಟಿತ್ತು. ತಕ್ಷಣವೇ ಶಿಷ್ಯಳಿಗೆ ನುಡಿದೆ. "ಒಣಗರಿಯನ್ನು ಕಟ್ಟಿ, ಎಳೆಯ ಗಿಡವನ್ನು ರಕ್ಷಿಸುತ್ತಿದ್ದಾರಷ್ಟೆ. ಮಿದುವಾದ ಎಳೆಯಗರಿಯನ್ನು ಯಾವ ದನವಾದರೂ ಜಗಿಯಬಹುದು. ಒಣಗರಿಯನ್ನು ತಿನ್ನಲಾರದು. ತಿನ್ನ ಹೋದರೆ ನಾಲಿಗೆ ತರೆಯುವುದು. ಹಾಗೆಯೇ ಅಪರಿಪಕ್ವ ಮತಿಯ, ಬೆಳವಣಿಗೆ ಹೊಂದುತ್ತಿರುವ ಸಾಧಕರನ್ನು ಸಿದ್ಧಪುರುಷರೆಂಬ ಒಣಗರಿಗಳೇ ತಮ್ಮ ಮಧ್ಯೆ ಇರಿಸಿಕೊಂಡು ರಕ್ಷಿಸಿದರೆ ಮಾತ್ರ ದೈವೀ ಜೀವನ ಸಾಧನೀಯ.

★★★



— ಸದ್ಗುರು ಶ್ರೀ ಲಿಂಗಾನಂದ ಸ್ವಾಮಿಗಳು.

ಸತ್ಯ ಮತ್ತು ದೇವರು

ದಿಟವ ನುಡಿವುದು ನುಡಿದಂತೆ ನಡೆವುದು ;
ಹುಸಿಯ ನುಡಿದು ತಪ್ಪುವ ಪ್ರಪಂಚಿಯನೊಲ್ಲ
ಕೂಡಲ ಸಂಗಮದೇವಾ.

ಸತ್ಯವನ್ನು ಗುರಿಯಾಗಿ ಅಹಿಂಸೆಯನ್ನು ಸಾಧನವಾಗಿ ಇರಿಸಿಕೊಂಡವರು ಪೂಜ್ಯ ಬಾಪೂಜಿ. ಅಂತೆಯೇ ಸಾಧನಾ ಪಥದಲ್ಲಿ ಮುಂದುವರಿಯುತ್ತ ಹೋದಂತೆ, 'ದೇವರು ಸತ್ಯ ಎಂದು ಇಲ್ಲಿಯವರೆಗೆ ನಂಬಿದ್ದೆ, ಈಗೀಗ ಸತ್ಯವೇ ದೇವರು (Truth is God) ಎಂದು ನಂಬಲಾರಂಬಿಸಿದ್ದೇನೆ' ಎಂದು ನುಡಿದರು. ಇದನ್ನು ಬಹಳಷ್ಟು ಜನ ನಂಬಿದ್ದಾರಲ್ಲದೆ, ಸತ್ಯ ಮತ್ತು ದೇವರ ಬಗ್ಗೆ ಗೊಂದಲಮಯವಾದ ತಿಳುವಳಿಕೆ ಹೊಂದಿದ್ದಾರೆ.

ಸತ್ಯವೆಂಬುದು ನೀತಿಶಾಸ್ತ್ರದ ಕೇಂದ್ರ ತತ್ತ್ವ. ಸತ್ ಎಂಬುದು ಸೇಶ್ವರವಾದೀ ಸಿದ್ಧಾಂತದ ಕೇಂದ್ರವಾದ ದೇವರು. ಅಧ್ಯಾತ್ಮ ಶಾಸ್ತ್ರದ ಪ್ರಮುಖ ಗುರಿಯಾದ ಸತ್ ಅನ್ನು ತಲುಪಲು ಸತ್ಯವೊಂದು ಸಾಧನ. ಪಥವೇ ಗುರಿಯಲ್ಲ, ಗುರಿಯೇ ಪಥವಲ್ಲ. ಹಾಗೇ ಸತ್ಯವೇ ಸತ್ ಅಲ್ಲ. ಅದನ್ನು ಬಸವಣ್ಣನವರ ಮೇಲಿನ ವಚನದಲ್ಲಿ ಮನಗಾಣುತ್ತೇವೆ. ದಿಟವ ನುಡಿದು, ನುಡಿದಂತೆ ನಡೆದರೆ ಕೂಡಲ ಸಂಗನ ಒಲಿಮೆಯುಂಟು. ದಿಟವ ನುಡಿಯದೆ, ನುಡಿದಂತೆ ನಡೆಯದೆ ಇದ್ದರೆ ಸಂಗನ ಒಲಿಮೆ

Digitalized by e-Sahithya Documentation Forum
Sponsored by Sarayu Foundation Trust

ಇಲ್ಲ. ದಿಟವ ನುಡಿವುದೊಂದು ಸಾಧನ, ದೇವನ ಒಲಿಮೆಯೊಂದು ಸಿದ್ಧಿ. ನಮ್ಮಲ್ಲಿ ಸ್ವಾಭಾವಿಕವಾಗಿ ಅಥವಾ ಕೆಲವೊಮ್ಮೆ ವಿಶೇಷ ಪ್ರಸಂಗಗಳಲ್ಲಿ ತಾಯಿಯೇ ದೇವರು, ತಂದೆಯೇ ದೇವರು,- ಪತಿಯೇ ದೇವರು, ಗುರುವೇ ದೇವರು, ಸತ್ಯವೇ ದೇವರು – ಈ ಮುಂತಾದ ಉಕ್ತಿಗಳು ಆಯಾ ವಸ್ತುಗಳ ಮಹತ್ವವನ್ನು, ವಿಶೇಷತೆಯನ್ನು ವಿವರಿಸಲು ಬಳಸಿದ ಉಕ್ತಿಗಳೇ ವಿನಾ ಅವೇ ಸೃಷ್ಟಿಕರ್ತ ದೇವರೆಂದು ಅರ್ಥವಲ್ಲ. ವ್ಯಕ್ತಿಗೆ ಜನ್ಮವಿತ್ತ ತಾಯಿ ಜಗತ್ತಿನ ಕರ್ತಳೆಂತಾದಾಳು? ವ್ಯಕ್ತಿಗೆ ಅರಿವನ್ನಿತ್ತ ಗುರುವು ಲೋಕದ ನಿರ್ಮಾಪಕನೆಂತಾದಾನು? ಈ ವ್ಯಕ್ತಿಗಳು ಸಂಬಂಧಿಸಿದವನಿಗಷ್ಟೇ ಪೂಜ್ಯರಷ್ಟೆ!

ಸತ್ ರೂಪಿ ಪರಮಾತ್ಮನನ್ನೊಲಿಸಲು ಸತ್ಯವೆಂಬ ಅಸ್ತ್ರವೊಂದೇ ಸಾಲದು ಅಹಿಂಸಾ, ಸತ್ಯ, ಅಸ್ತೇಯ, ಅಪರಿಗ್ರಹ, ಬ್ರಹ್ಮಚರ್ಯ, ಶಮದಮಾದಿ ಷಟ್ ಸಂಪತ್ತು ಅತ್ಯಾವಶ್ಯಕ. ಉಳಿದೆಲ್ಲಕ್ಕಿಂತ ಪ್ರಮುಖ ಸಾಧನ 'ಸತ್ಯ', ಏಕೆಂದರೆ ಬಸವಣ್ಣನವರ ಪ್ರಕಾರ ಹುಸಿಯನಾಡಿ ಲಿಂಗವ ಪೂಜಿಸಿದರೆ ಜೊಳ್ಳ ಬಿತ್ತಿ ಫಲವನರಸಿದಂತೆ, ಆದರೂ ಸತ್ಯದ ಒಡನಾಡಿಗಳಾಗಿ ಮೇಲಿನವು ಬೇಕೇ ಬೇಕು.

ಹೀಗೆ ಸತ್ಯವು ವ್ಯಕ್ತಿ-ಸಮಾಜಗಳ ನೈತಿಕ ಜೀವನಕ್ಕೆ ಸಂಬಂಧಿಸಿದ ತತ್ತ್ವವಾದರೆ, ಸತ್ ಅಥವಾ ದೇವರು, ಯಾವುದಾನೊಂದು ವ್ಯಕ್ತಿಗೆ, ಸಮಾಜಕ್ಕೆ ಸೀಮಿತವಾಗದ, ಸಚರಾಚರದ ಪರಮ ಕರ್ತೃವಾದ ತತ್ತ್ವವು.

ಇಂಥಾ ಪರಮಾತ್ಮನ ಸ್ವರೂಪ ಸತ್-ಚಿತ್-ಆನಂದವಾದರೆ, ಗುಣಗಳು ಕರುಣೆ, ಸತ್ಯ, ಮಾತೃತ್ವ, ದಯೆ ಇತ್ಯಾದಿ. ಸುಗಂಧ ಮಿಶ್ರಿತ ದ್ರವ್ಯವಾದ ಪನ್ನೀರನ್ನು ತೆಗೆದುಕೊಳ್ಳುವಾ. ನೀರಿನ ಮೂಲ ರೂಪ ಆಮ್ಲಜನಕ, ಜಲಜನಕ. ಅವುಗಳ ಆಶ್ರಯದಲ್ಲಿ ಕೆಲವು ಸುವಾಸಿತ ವಸ್ತುಗಳು ಇವೆ. ಸತ್ ಎಂದರೆ ಇರುವಿಕೆ, ಚಿತ್ ಎಂದರೆ ಜ್ಞಾನ, ಆನಂದವೆಂದರೆ ಪರಮ ಸಂತಸ ಇವು ದೇವನ ಮೂಲರೂಪಗಳು. ಉಳಿದ ಮಂಗಲಮಯ ಸದ್ಗುಣಗಳು ಈ ಸಚ್ಚಿದಾನಂದನ ಆಶ್ರಯದಲ್ಲಿ ಶೋಭಿಸುವಂತಹವು.

ಆದ್ದರಿಂದ ಸತ್ಯವೆಂಬ ಸದ್ಗುಣ ಐಹಿಕ ರಂಗದಲ್ಲಿ ವ್ಯಕ್ತಿ-ಸಮಾಜಗಳ ವಲಯದಲ್ಲಿ ಶೋಭಿಸುವಂತಹುದು. ಸತ್ ಆದರೋ ದೇವರ ಸಹಜ ಸ್ವರೂಪ. ಮಾನವ ಜನಾಂಗದ ಇತಿಹಾಸ-ವಿಕಾಸಗಳಲ್ಲಿ ಬಿಟ್ಟ ಅಮೃತ ಫಲಗಳು ಸದ್ಗುಣಗಳ ಕಲ್ಪನೆ–ನಂಬುಗೆಗಳು. ವೃಕ್ಷದ ಆಶ್ರಯವಿರದ ಹಣ್ಣು ಅರ್ಥರಹಿತ; ಬಂಜೆಯ ಮಗ. ಮಾನವ ಸಮಾಜವೇ ಇಲ್ಲದಿದ್ದರೆ ಈ ಗುಣಗಳಿಗೇನೂ ಅರ್ಥವಿಲ್ಲ. ಆದರೆ ದೇವರು ಅಥವಾ ಸತ್ ಹಾಗಲ್ಲ; ಈ ಸೃಷ್ಟಿಯ ಪೂರ್ವದಲ್ಲೂ ಅದಿತ್ತು, ಸೃಷ್ಟಿ ಮೈದಾಳಿದಾಗಲೂ ಉಂಟು, ಸೃಷ್ಟಿ ಮೈಮುದುಡಿಕೊಂಡಾನಂತರವೂ ಇರುವುದುಂಟು. ಸಮಸ್ತ

ಸಚರಾಚರ, ಮಾನವ ಜನಾಂಗ ಇಲ್ಲದಿದ್ದರೂ ಸ್ವಾವಲಂಬಿಯಾಗಿ, ಸ್ವತಂತ್ರವಾಗಿ ಇರಬಲ್ಲುದು ಸತ್.

ಸತ್ಯವು ಎರಡುಗುರಿಗಳಿಗೆ ಸಾಧನವಾಗಬಲ್ಲದು. ಒಂದು ಪಾರಮಾರ್ಥಿಕ ಗುರಿಯಾದ ದೈವೀ ಸಾಕ್ಷಾತ್ಕಾರ–ಆತ್ಮೋದ್ಧಾರಕ್ಕೆ; ಇನ್ನೊಂದು ಐಹಿಕ ಗುರಿಯಾಗಿ ಸಮಾಜ ಕಲ್ಯಾಣಕ್ಕೆ. ಕಲ್ಯಾಣ ಎಂದರೆ ಶುಭ, ಸುಖ, ಮಂಗಲ, ಒಳ್ಳಿತು, ಅಭಿವೃದ್ಧಿ, ಸಫಲತೆ, ಏಳಿಗೆ, ಸುಯೋಗ, ಜಯ, ಶ್ರೇಷ್ಠ, ಕ್ಷೇಮ, ಹಿತ, ಸೌಂದರ್ಯ, ಘನ ಎಂಬಿವೇ ಮುಂತಾದ ಅರ್ಥದಲ್ಲಿ ಕಾಣಿಸಲಾಗಿದೆ. ಆಗ ಕಲ್ಯಾಣವನ್ನು ಸಾಧಿಸಲು, ಮಂಗಲವನ್ನು ಪ್ರತಿಷ್ಠಾಪಿಸಲು ಸತ್ಯದೊಡನೆ ಇನ್ನೂ ಅನೇಕ ತತ್ತ್ವ-ನೀತಿಗಳು ಬೇಕಾಗುತ್ತವೆ. ಅಂತೆಯೇ ಪ್ಲೇಟೋ ತನ್ನ "Theory of Ideas" ನಲ್ಲಿ ಎಲ್ಲ ಸದ್ಗುಣಗಳ ಶಿಖಾಮಣಿ ಕಲ್ಯಾಣ (Good) ಎಂದನು.

ಆದ್ದರಿಂದ ಸತ್ಯದ ಪಥದಲ್ಲಿ ಸಾಗಿದಾಗ ಮೊದಲು ದೊರೆಯುವ ವಿಶ್ರಾಮದಾಣ ಕಲ್ಯಾಣ ರಾಜ್ಯ ಅಥವಾ Welfare state. ಅದೇ ಪಥದಲ್ಲಿ ಮುಂಸಾಗಿದಾಗ ದೊರೆಯುವ ನಿಲ್ದಾಣ ದೈವೀರಾಜ್ಯ ಅಥವಾ ಮುಕ್ತಿ ಮಂದಿರ.

★★★★

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಪ್ರಿಯ ಓದುಗರೇ,

೧. ತಾವು 'ನಿಮ್ಮ ಅನಿಸಿಕೆ' ವಿಭಾಗ ಮತ್ತು ಸಮಸ್ಯೆ–ಸಮಾಧಾನಕ್ಕೆ ಬರೆಯುವಾಗ ಬೇರೆ ಬೇರೆ ಅಂಚೆ ಕಾರ್ಡುಗಳಲ್ಲಾದರೂ ಬರೆಯಿರಿ. ಅಥವಾ ಒಂದು ಲಕೋಟೆಯಲ್ಲಿ ಎರಡು ಚೀಟಿಗಳನ್ನಾದರೂ ಇಡಿ.

೨. ನೀವು ಚಂದಾಹಣ ತುಂಬಿ, ರಸೀತಿ ಪಡೆದಿರುವಿರಷ್ಟೇ. ನಂತರ ನಿಮ್ಮ ಹೆಸರನ್ನು ಕಾರ್ಯಾಲಯದಲ್ಲಿ ನೋಂದಾಯಿಸಿ ಆ ನಂಬರ್‌ಗಳನ್ನು ನಾವು ಪ್ರತಿ ಕಲ್ಯಾಣ ಕಿರಣ ಲಕೋಟೆ ಮೇಲೆ ಕಳಿಸುವೆವು. ಆ ಚಂದಾ ನಂಬರ್ ಗುರುತಿಸಿ ಪತ್ರಿಕಾ ಕಾರ್ಯಾಲಯದೊಡನೆ ವ್ಯವಹರಿಸಬೇಕಾದರೆ ನಮೂದಿಸಿರಿ.

ವ್ಯವಸ್ಥಾಪಕರು, **ಕಲ್ಯಾಣ ಕಿರಣ.**

Digitalized by e-Sahithya Documentation Forum
Sponsored by Sarayu Foundation Trust

ಸಮಸ್ಯೆ! ಸಮಾಧಾನ!

— ಸ್ವಾಮಿ ಶ್ರದ್ಧಾನಂದ, ಬಾಗಿಲುಕೋಟೆ.

* ಬಸವ ತತ್ತ್ವ ಪ್ರಸಾರ ಮಾಡಬೇಕೆಂದು ಸನ್ಯಾಸ ಸ್ವೀಕರಿಸಿ ನನ್ನ ಕೈಲಾದ ಮಟ್ಟಿಗೆ ಅದನ್ನೇ ಪ್ರಸಾರ ಮಾಡುತ್ತಿರುವಾಗ, ನನ್ನ ಕೆಲವು ಆರ್. ಎಸ್. ಎಸ್ ಮಿತ್ರರು ನೀನು ಹಿಂದೂ ಧರ್ಮ ಪ್ರಸಾರ ಏಕೆ ಮಾಡುವುದಿಲ್ಲ? ಎಂದು ಕೇಳುವರು. ಇದಕ್ಕೆ ನಾನಾವ ಉತ್ತರ ನೀಡಲಿ ?

★ ಬಸವ ಧರ್ಮ, ಬಸವ ವಿಚಾರ ಸಂಹಿತೆಗಳು ಅಹಿಂದು ವಿಚಾರಗಳೆಂದು ನಿಮ್ಮ ಮಿತ್ರರ ಅಭಿಪ್ರಾಯವೆ? ಇದು ನಿಜಕ್ಕೂ ದುರ್ದೈವ. ಹಿಂದೂ ಕಕ್ಷೆಯ ಹೊರಕ್ಕೆ ಬುದ್ಧನಂತೆ ಹೋಗಬಯಸದೆ ಒಳಗೇ ಇದ್ದು ಹಿಂದೂ ಸಮಾಜವನ್ನು ಸಂಘಟಿಸಿದ ಬಸವಣ್ಣನವರ ಬಗ್ಗೆ ಈ ರೀತಿ ತಿಳಿದರೆ ಶುದ್ಧ ತಪ್ಪು. ಹಿಂದೂ ಸಂಸ್ಕೃತಿ ಒಂದು ಬೃಹತ್ ವೃಕ್ಷ. ಓಂಕಾರವೇ ಇದರ ಕಾಂಡ. ವಿವಿಧ ಧರ್ಮಗಳು ವಿವಿಧ ಕೊಂಬೆಗಳು. ಯಾವ ಕೊಂಬೆಯ ಹಣ್ಣಾದರೂ ಅದು ಹಿಂದುತ್ವದ ಹಣ್ಣೇ !

— ವೀರಪ್ಪ. ಏ. ಹಿತ್ತಲು, ಶಿಕಾರಿಪುರ.

* ಹೂವು ಕಾಮ ಪ್ರಚೋದಕ ವಸ್ತು. ಇದನ್ನು ವಿರಾಗಿಣಿಯರು ಧರಿಸುವುದು ತಪ್ಪೆಂದು ನನ್ನ ಅಭಿಪ್ರಾಯ. ಇದಕ್ಕೆ ನಿಮ್ಮ ಉತ್ತರ ?

★ ಪ್ರಕೃತಿಯ ಅತ್ಯಂತ ಸುಂದರ, ಸಾತ್ವಿಕ ಕೊಡುಗೆಯನ್ನು ಕಾಮ ಪ್ರಚೋದಕ ವಸ್ತುವೆಂಬ ನಿಮ್ಮ ಅಭಿಪ್ರಾಯಕ್ಕೆ ವ್ಯಥೆ ಎನಿಸುತ್ತದೆ. ಹಾಗಿದ್ದರೆ ಎಲ್ಲ ವಿಗ್ರಹಗಳಿಗೆ, ಪೂಜೆಗೆ ಹೂವು ಬಳಸುವುದೇಕೆ ? 'ನಿಮ್ಮ' ಮಂಡೆಗೆ ಹೂವು ತರುವೆನಲ್ಲದೆ ಹುಲ್ಲ ತಾರೆನು" ಎಂಬ ಅಕ್ಕಮಹಾದೇವಿಯ ವಾಣಿಯ ಪ್ರಕಾರ ಹೂವು ಮಂಗಲ ಮತ್ತು ಕೀರ್ತಿಯ ಸಂಕೇತ. ಭಾರತದ ಮೊಟ್ಟ ಮೊದಲ ಯೋಗಿರಾಜ ಶಿವನ ಮುಡಿಯನ್ನು ಆಶ್ರಯಿಸಿ, ಯೋಗಿಗಳು ಹೂಧರಿಸುವ ಋಷಿ ಪರಂಪರೆ ಸಾಗಿ ಬಂದಿದೆ. ಆಶ್ರಯಿಸಿದ ವಸ್ತುವಿನ ಹಿನ್ನೆಲೆಯಲ್ಲಿ ಆಶ್ರಯಿತ ವಸ್ತು ಪ್ರಭಾವ ಬೀರುತ್ತದೆ. ದಿಗಂಬರತ್ವ ಅತ್ಯಂತ ಕಾಮಪ್ರೋತ್ಸಾಹಕ ಎಂಬುದು 99. 99% ಮಟ್ಟಿಗೆ ಸತ್ಯ. ಆದರೆ ದಿಗಂಬರದ ದಿವ್ಯಾಂಬರೆಯಾದ ಅಕ್ಕಮಹಾದೇವಿಯ ಭಾವಚಿತ್ರ ನೋಡುವಾಗಲಾಗಲೀ, ಬೃಹದಾಕಾರದ ಗೊಮ್ಮಟನನ್ನು ದರ್ಶಿಸುವಾಗಲಾಗಲೀ, ದಿಗಂಬರ ಜೈನ ಮುನಿಗಳಿಗೆ ನಮಸ್ಕರಿಸುವಾಗಲಾಗಲೀ ದುರ್ಭಾವನೆ ಬರುವುದಸಂಭವ. ಹಾಗೆಯೇ ರಾಗಿಣಿಯ ರತಿ ಹೆರಳಿನಲ್ಲಿ ಒಂದು ಬಗೆಯ ಪ್ರಭಾವ ಬೀರುವ ಹೂವು, ವಿರಾಗಿಣಿಯ ವಿರಕ್ತಿಯ ಮುಡಿಯಲ್ಲಿ ಕುಳಿತಾಗ ಸಾತ್ವಿಕ ತೇಜಸ್ಸನ್ನು ಪಡೆಯುವುದಾದ ಕಾರಣ ಯೋಗಿಣಿಯರಿಗೆ ನಿಷಿದ್ಧವಲ್ಲ.

— ಶ್ರೀಮತಿ ರತ್ನಾ ನಾಗನಗೌಡ, ಹರಪನ ಹಳ್ಳಿ.

* ಓರ್ವನು ಮಹಾನ್ ವ್ಯಕ್ತಿಯಾಗಲು ದೈವೀ ಕಾರುಣ್ಯ ಮುಖ್ಯವೋ, ಪ್ರಚಾರ ಮುಖ್ಯವೋ ?

★ ಮೂಢರ ಗುಂಪಿನಲ್ಲಿ ದೊಡ್ಡವನಾಗಲು ಪ್ರಚಾರ, ವಿವೇಕಿಗಳ ವಲಯದಲ್ಲಿ ಮೆಚ್ಚುಗೆ ಗಳಿಸಲು ಪ್ರತಿಭೆ-ಸಾಮರ್ಥ್ಯಗಳು ಬೇಕು. ಇದು ಲೋಕದ ಪರಿಪಾಠವಿದ್ದರೂ, ಆಧ್ಯಾತ್ಮ ಶಾಸ್ತ್ರದ ದೃಷ್ಟಿಯಿಂದ ಹೇಳಬೇಕಾದರೆ ದೈವಾನುಗ್ರಹವೇ ಮುಖ್ಯ. ದೈವೀಕಾರುಣ್ಯ, ಸ್ವಂತ ಪ್ರತಿಭೆಯಿಂದ ಗಳಿಸಿದ ವ್ಯಕ್ತಿತ್ವ ಮಲ್ಲಿಗೆಯಿಂದ ಸೂಸುವ ಕಂಪು, ಬರೀ ಏಜೆಂಟರ ಪ್ರಚಾರದಿಂದ ಬಂದುದು ಪ್ಲಾಸ್ಟಿಕ್ ಹೂವಿಗೆ ಸಿಡಿಸಿದ ಸುವಾಸನೆ. ಬೇಗನೇ ಬಯಲಾಗದಿರದು.

— ಪಿ. ಅನಿಲ್‌ಕುಮಾರ್. ಜಯನಗರ, ಬೆಂಗಳೂರು.

* ಮಾನ್ಯರೇ ನವಂಬರ್ 1977 ಬಸವ ಜರ್ನಲ್ ತ್ರೈಮಾಸಿಕದಲ್ಲಿ 'ಷಟಸ್ಥಲ ಸಿದ್ಧಾಂತ ಮತ್ತು ಬಸವಣ್ಣ' ಎಂಬ ಶರಣ. ಸಾ. ಸಿ. ಮರುಳಯ್ಯನವರ ಲೇಖನ ಓದಿ, ಸಂತೋಷಿಸಿದೆ. ಒಂದು ಸಂದೇಹ, ಷಟಸ್ಥಲವು ಸಿದ್ಧಾಂತವೆ?

★ ಅದು ಸಿದ್ಧಾಂತವಲ್ಲ, ದರ್ಶನವು. ಜೀವ–ಜಗತ್ತು–ಈಶ್ವರರನ್ನು ಕುರಿತು ತಾತ್ತ್ವಿಕ, ತಾರ್ಕಿಕ ಚರ್ಚೆಯನ್ನು ಮಾಡುವುದು ಸಿದ್ಧಾಂತ (Meta physics). ವೀರಶೈವದಲ್ಲಿ ಶಕ್ತಿವಿಶಿಷ್ಟಾದ್ವೈತವು ಸಿದ್ಧಾಂತ. ಅದು ದೇವನ ಇರುವಿಕೆ, ಸ್ವರೂಪ, ಆತ್ಮನ ಇರುವಿಕೆ, ಸ್ವರೂಪ, ಜೀವ ಜಗತ್ತುಗಳ ಸೃಷ್ಟಿ ಮುಂತಾದುವುಗಳ ಬಗ್ಗೆ ಬೌದ್ಧಿಕವಾಗಿ ಚರ್ಚಿಸುವುದು. ಷಟಸ್ಥಲವು ಜೀವನು ಶಿವನೊಡನೆ ಒಂದಾಗುವ ಹಂತಗಳನ್ನು, ಅನುಭವಗಳನ್ನು ಚಿತ್ರಿಸುವ ದರ್ಶನ (Myistcism) ಶಾಸ್ತ್ರವು. ದೃಕ್, ದೃಶ್ಯ ಎಂಬ ಮೂಲದಿಂದ ಹುಟ್ಟಿರುವ ದರ್ಶನ ಶಾಸ್ತ್ರವು ಹಾರ್ದಿಕ ವಲಯಕ್ಕೆ ಸಂಬಂಧಿಸಿದ್ದು. ಷಟಸ್ಥಲ

Digitalized by e-Sahithya Documentation Forum
Sponsored by Sarayu Foundation Trust

ದರ್ಶನಕ್ಕೊಂದು ಸೈದ್ಧಾಂತಿಕ ಚೌಕಟ್ಟು (Philosophy of Lingāyat Mysticism) ಇರುವುದಾದರೂ ಷಟಸ್ಥಲವೇ ಸಿದ್ಧಾಂತವಲ್ಲ. ಆದ್ದರಿಂದ ಬಳಸುವಾಗ ಲಿಂಗಾಯತ ಧರ್ಮದ ಸಿದ್ಧಾಂತ ಶಕ್ತಿ ವಿಶಿಷ್ಟಾದ್ವೈತವೆಂದು, ಷಟಸ್ಥಲವು ಅದರ ದರ್ಶನಶಾಸ್ತ್ರ ಎಂದರೆ ಬಹು ಸೂಕ್ತವಾಗುವುದು.

— ಓರ್ವ ಸಾಧಕ ಜೀವಿ, ಊರುಬೇಡ.

* ನಾನೋರ್ವ ನಿಸ್ಪೃಹ ಸಮಾಜ ಸೇವಕ. ಕೆಲವರು ನನ್ನ ತ್ಯಾಗಕ್ಕೆ ಬೆಲೆ ನೀಡಿ ಬೆಂಬಲಿಸುತ್ತಿರುವರು. ಇದು ಅನೇಕರಿಗೆ ಕಣ್ಣುರಿ. ನನ್ನ ತೇಜೋವಧೆ ಮಾಡಬೇಕೆಂದು ಕೆಲವು ಮತ್ಸರಿಸುವವರು, ಪತ್ರಿಕೋದ್ಯಮಿಯೋರ್ವನ ಮೂಲಕ ಹಣ ಕೊಡಿ ಎಂದು ಕೇಳಿಸಿ ಕೊಡದಿದ್ದರೆ ಅಪಪ್ರಚಾರ ಮಾಡುವುದಾಗಿ ಬೆದರಿಸುತ್ತಿದ್ದಾರೆ. ದಿಙ್ಮೂಢನಾಗಿರುವ ನನಗೆ ತಮ್ಮ ಸಲಹೆ ಏನು?

★ ಹಣ ಕೊಡದೆ ಬೈಸಿಕೊಂಡರೂ ಚಿಂತೆಯಿಲ್ಲ, ಹಣ ನೀಡಿ ದುಷ್ಟರ ಬಾಯಿ ಮುಚ್ಚಿಸುವ ಅಥವಾ ಹೊಗಳಿಸಿಕೊಳ್ಳುವ ವಾಮಮಾರ್ಗಕ್ಕೆ ದಯಮಾಡಿ ಹೋಗಬೇಡಿ. ಅನ್ಯರು ಗೈವ ನಿಂದೆಯಿಂದ ನಿಮ್ಮ ಆತ್ಮಪತನವಾಗದು, ಅನ್ಯರಿಗೆ ಬೆದರಿ ಅಡ್ಡದಾರಿ ಹಿಡಿದಾಗ ಶಿವನ ಕರುಣೆ ತಪ್ಪಿಹೋಗುವುದು. ಗುರಿಯೆಡೆಗೆ ಗಮನವಿರಿಸಿ ಕರ್ತವ್ಯ ಪ್ರಜ್ಞೆಯಿಂದ ಸತ್ಯ ಪಥದಲ್ಲಿ ಮುನ್ನಡೆಯಿರಿ. ದೇವನೆಂಬ ನ್ಯಾಯಾಧೀಶ ಸರ್ವ ದೃಷ್ಟಾರನಾಗಿದ್ದಾನೆಂಬ ವಿಶ್ವಾಸವಿರಲಿ.

— ಬಸವಕುಮಾರ ಕೋಳಾರ, ಬೀದರ.

* ಚಿತ್ರದೀಪ, ಫಿಲ್ಮಫೇರ್, ವಿಜಯಚಿತ್ರ ಮುಂತಾದ ಸಿನಿಮಾದ ಪತ್ರಿಕೆ–ಪುಸ್ತಕಗಳನ್ನೇ ಕದ್ದು ಓದುವ ಸ್ವಾಮಿಯೋರ್ವರು, ಸದಾ ಉಳಿದ ಸ್ವಾಮಿ, ಸನ್ಯಾಸಿ, ಸಾಧಕರ ಬಗ್ಗೆ ಅಸಹ್ಯ ಟೀಕೆ ಮಾಡುವರಲ್ಲಾ. ಅವರ ಮೇಲೆ ಯಾವ ಕ್ರಮ ಕೈಗೊಳ್ಳಲಿ ಹೇಳಿರಿ ?

★ ತನ್ನಷ್ಟೇ ಜಗತ್ತೆಲ್ಲ ದುರ್ಬಲ ಎಂದು ಅವರ ತಿಳುವಳಿಕೆ, ಪಾಪ! ಕಾಮಣಿಯಾದ ಕಣ್ಣಿಗೆ ಹಳದಿಯಲ್ಲದೆ ಮತ್ತೇನು ಕಂಡೀತು ? ತಾನು ಬೃಹದಾಕಾರದ ಹಣ್ಣಾಗುವ ಸಾಮರ್ಥ್ಯವಿಲ್ಲದ ಆಲದ ಹಣ್ಣು, ಕುಂಬಳ ಹಣ್ಣೂ ಬೆಳೆಯಬಾರದು ಎಂದಿಚ್ಛಿಸಿದರೆ ಉತ್ಪ್ರೇಕ್ಷೆ ಏನಿದೆ? ಅಂಥ ಬಾಲಿಶ ಬುದ್ಧಿಯ ಜನರನ್ನು ಉದಾಸೀನ ಮಾಡಿಬಿಡಿರಿ ಸಾಕು !

— ಪ್ರಭಾವತಿದೇವಿ, ಊರುಬೇಡ.

* ನಮ್ಮೂರಿನ ಕಾನ್ವೆಂಟಿನಲ್ಲಿ ಮಕ್ಕಳಿಗೆ ಬಳೆ ತೊಡಬಾರದು, ಕುಂಕುಮ ಹಚ್ಚಬಾರದು ಎಂದು ಕಡ್ಡಾಯತೆ ತಂದಿರುವರು. ಈ ಬಗ್ಗೆ ತಮ್ಮ ಅಭಿಪ್ರಾಯವೇನು?

★ ನಿಮ್ಮ ಹಣದಲ್ಲಿ ನಿಮ್ಮ ಮಕ್ಕಳಿಗೆ ಅವರ ಸಂಸ್ಕೃತಿಯನ್ನು ಕಲಿಸುವ ಅವರ ಜಾಣ್ಮೆಯನ್ನು ನಿಮ್ಮ ಹಣದಲ್ಲಿ ನಿಮ್ಮ ಮಕ್ಕಳಿಗೆ ನಿಮ್ಮ ಸಂಸ್ಕೃತಿ ಕಲಿಸಲಾರದ ನಿಮ್ಮ ದಡ್ಡತನವನ್ನು ಕಂಡು ಮೌನಿಯಾಗಿರ ಬಯಸುವೆ.

— ಸರಸ್ವತಿ, ಗುಲ್ಬರ್ಗಾ.

* ಕೆಲವರು ನೇರ ದ್ವೇಷಿಗಳು: ಸದಾ ಎದುರು ಮತ್ತು ಹಿಂದೆ ಯಾವಾಗಲೂ ನಿಂದಿಸುವವರು. ಇನ್ನು ಕೆಲವರು ವ್ಯಕ್ತಿ ಎದುರಿಗೆ ಸಿಹಿ ಮಾತನಾಡಿ, ಹಿತೈಷಿಗಳೆಂಬಂತೆ ನಟಿಸಿ ಬೆನ್ನ ಹಿಂದೆ ಬೈವರಲ್ಲ. ಇವರಲ್ಲಿ ಯಾರು ಹೆಚ್ಚು ಪಾಪಿಗಳು?

★ ಮೊದಲನೆಯವ ವ್ಯಾಘ್ರ. ಎರಡನೆಯವ ಗೋಮುಖ ವ್ಯಾಘ್ರ. ದ್ವಿತೀಯನೇ ಹೆಚ್ಚಿನ ದುಷ್ಟ. ಹಸುವಿನ ಚರ್ಮಕಂಡು ಮೋಸ ಹೋಗಿ ಹುಲಿಯ ಬಾಯಿಗೆ ಸಿಗುವಂತೆ, ಇಂಥವರ ಮಾತು ನಂಬಿ ಅನೇಕ ಮುಗ್ಧರು ತಲೆಕೆಡಿಸಿಕೊಳ್ಳುವುದುಂಟು.

— ಶಿವರಾಜ ಸ್ವಾಮಿ. ಬಿ. ಎ. ಮಂಗಳೂರು.

* ಧರ್ಮ ಗುರುವಿಗೂ, ಧರ್ಮದ ಗುರುವಿಗೂ ಇರುವ ವ್ಯತ್ಯಾಸವೇನು?

★ ಧರ್ಮ ಗುರುವು ಒಂದು ಧರ್ಮದ ಮೂಲಿಗ, ಅವನಿತ್ತ ಧರ್ಮದ ಅನುಯಾಯಿಗಳಾಗಿ ಆ ಧರ್ಮದ ಬೋಧೆ ಮಾಡುವವನು ಧರ್ಮದ ಗುರುವು. ಮೊದಲಿನವ ನೂತನ ಪಥ ನಿರ್ಮಾಪಕ (Path-Finder) ನಂತರದವರು ಆ ಧರ್ಮದ ಪಥಿಕರು. ಧರ್ಮಗುರು ಸೂರ್ಯನಂತೆ ಸ್ವಪ್ರಭೆಯಲ್ಲಿ ಬೆಳಗುವವ ; ಧರ್ಮದ ಗುರುಗಳು ಚಂದ್ರನಂತೆ, ಆದಿಗುರುವಿನ ತತ್ತ್ವಪ್ರಭೆಯಲ್ಲಿ ಬೆಳಗುವವರು.

— ನೀಲಕಂಠ ದೇವರು, ಕರ್ನಾಟಕ.

* ದೇವರ ಕರೆಗೆ ಓಗೊಟ್ಟು ಸನ್ಯಾಸ ಸ್ವೀಕರಿಸಿ ಧರ್ಮಪ್ರಸಾರದ ಮಣಿಹ ಹೊತ್ತ ಓರ್ವ ಸ್ವಾಮಿ ನಾನು. ಆದರೆ ನಿಸ್ವಾರ್ಥ ಭಾವದಿಂದ ನಾನು ಮಾಡುವ ಕಾರ್ಯಕ್ಕೆ ಕಲ್ಲು ಹಾಕುವಂತೆ, ಧನಬಲ–ಜನಬಲ ಇರುವ ಮಠಾಧಿಕಾರಿಯೋರ್ವರು ವಿವಿಧ ಬಗೆಯಲ್ಲಿ ಆತಂಕ ಒಡ್ಡುವರು. ನಿರಾಶನಾಗಿರುವೆ ನಾನು !

★ ಕತ್ತಲೆ ಬಹಳ ಕಾಲ ಉಳಿಯದು. ಅದು ಅಳಿದು ಬೆಳಕು ಬರುವುದು ಸೃಷ್ಟಿನೇಮ. ಎಳೆಗರು ಎತ್ತಾಗದೆ? ಲೋಕದೊಳ್ ಮಿಡಿ ಪಣ್ಣಾಗದೇ? ಬಡವಂ ಬಲ್ಲಿದನಾಗವೇ ದೇವನ ಒಲಿಮೆ ಇರಲು ? ಅಲ್ಲಿಯವರೆಗೆ ತಾಳ್ಮೆ ಇರಲಿ. ★

Digitalized by e-Sahithya Documentation Forum
Sponsored by Sarayu Foundation Trust

ಸಿದ್ಧರಾಮೇಶ್ವರ ವಾಣಿ

ಸಂಗ್ರಹ: **ಎಂ. ಗಂಗಮ್ಮ.**

೧. ರಸದಂತೆ ಭಕ್ತ ; ರುಚಿಯಂತೆ ಜಂಗಮ.

೨. ಭಕ್ತನ ಮನ ಹೆಣ್ಣಿನೊಳಗಾದಡೆ, ವಿವಾಹವಾಗಿ ಕ್ಷೂಡುವುದು,
ಭಕ್ತನ ಮನ ಮಣ್ಣಿನೊಳಗಾದಡೆ, ಕೊಂಡು ಆಲಯವ ಮಾಡುವುದು;
ಭಕ್ತನ ಮನ ಹೊನ್ನಿನೊಳಗಾದಡೆ, ಬಳಲಿ ದೊರಕಿಸುವುದು.

೩. ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ ;
ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ !

೪. ಆರಾಧನೆ ಮಾಡಿ ಫಲವೇನಯ್ಯಾ, ಸಂತೃಪ್ತಿ ಪಡೆಯದನ್ನಕ್ಕ ?
ಲಿಂಗವ ಪೂಜಿಸಿ ಫಲವೇನಯ್ಯಾ, ಮೋಕ್ಷವ ಹಡೆಯದನ್ನಕ್ಕ ?

೫. ಜನನ-ಮರಣ ದೇಹಧರ್ಮವಲ್ಲದೆ ಜಂಗಮಕ್ಕೆಲ್ಲಿಹದೊ !
ಕ್ಷುಧಾ-ತೃಷೆ ಪ್ರಾಣಧರ್ಮವಲ್ಲದೆ ಜಂಗಮಕ್ಕೆಲ್ಲಿಹದೊ !
ಸುಖ-ದುಃಖ ಮನೋಧರ್ಮವಲ್ಲದೆ ಜಂಗಮಕ್ಕೆಲ್ಲಿಹದೊ !
ಜ್ಞಾನಾಜ್ಞಾನಂಗಳು ಮುಮುಕ್ಷುವಿಂಗಲ್ಲದೆ
ನಿಮ್ಮಲ್ಲಿ ಸಮರಸವಾದ ಸಚ್ಚಿದಾನಂದ ಶಿವಯೋಗಿ
ಜಂಗಮಕ್ಕೆಲ್ಲಿಹದೊ ; ಕಪಿಲಸಿದ್ಧ ಮಲ್ಲಿಕಾರ್ಜುನಾ !

೬. ಮಾನಾಪಮಾನವೆಂಬುದು ಮನದ ಭ್ರಮೆ ನೋಡಯ್ಯಾ.
ಮೇಲಕ್ಕೆ ಕರೆದಡೆ ಮಾನವೆಂಬುದೀ ಲೋಕ;
ಮೂಗುವಟ್ಟಡೆ ಅಪಮಾನವೆಂಬುದೀ ಲೋಕ.

೭. ಆಗದು ಆಗದು ಕಾಯದ ಗುಣವಳಿಯದವರಿಗೆ ಜೀವನ್ಮುಕ್ತಿ
ಆಗಬೇಕು ಇದಿರಿಟ್ಟು, ಆಗಬೇಕು ಪಶ್ಚಾತ್ತಾಪ.
ಆಗದೆ ಆದೆನೆಂಬ ಮನುಜನ ಅರಿವು ಶ್ವಾನನರಿವು ನೋಡಾ.

೮. ಹಾಲುಳ್ಳಲ್ಲಿ ಹಬ್ಬವ ಮಾಡಿ. ಗಾಳಿಯುಳ್ಳಲ್ಲಿ ತೂರಿಕೊಳ್ಳಿರಿ.

ಮಾತು ಜ್ಯೋತಿರ್ಲಿಂಗ

— ಎಂ. ಗಂಗಮ್ಮ.

೧. ಮಾನವರು ವಿಧಿಯ ಕೈಗೊಂಬೆಗಳು ಎನ್ನುವುದಕ್ಕಿಂತ, ತಮ್ಮ ಮನಸ್ಸಿನ ಬಂಧಿಗಳು ಎಂದು ಹೇಳುವುದು ಸೂಕ್ತವಾದೀತು **—ಫ್ರಾಂಕ್ಲಿನ್ ರೂಸ್‌ವೆಲ್ಟ್.**

೨. ಮುಖಗಳಿಗಿಂತಲೂ ಹೆಚ್ಚು ವ್ಯತ್ಯಾಸಗಳನ್ನು ಮನಸ್ಸುಗಳು ತೋರಿಸುವವು **— ವಾಲ್ಟೇರ್.**

೩. ಪತ್ರಿಕಾ ಸ್ವಾತಂತ್ರ್ಯವೇ ಪರಮ ಸಿದ್ಧಿಯಲ್ಲ ; ಸ್ವತಂತ್ರ ಸಮಾಜ ಸ್ಥಾಪನೆಗೆ ಅದು ಒಂದು ಸಾಧನೆಯು ಮಾತ್ರ. **— ಫೆಲಿಕ್ಸ್ ಫ್ರಾಂಕ್‌ಫರ್ಟರ್.**

೪. ಸತ್ಯಮಾರ್ಗದಲ್ಲಿ ನೀನಿದ್ದಾಗ ಅದರ ಬಗ್ಗೆ ದೃಢ ವಿಶ್ವಾಸವಿರಲಿ, ಎದೆಗುಂದದೆ ಮುಂದೆ ಸಾಗಬೇಕೆಂಬ ಸ್ಥೈರ್ಯವಿರಲಿ. **— ಡೇವಿಡ್ ಕ್ರಾಕೆಟ್.**

೫. ಕರಡಿಯನ್ನಾಡಿಸುವವನು ಕೋಲನ್ನು ಅಡ್ಡ ಹಿಡಿದು ಆಡಿಸುವಂತೆ, ಸಂಪತ್ತನ್ನು ಗಳಿಸುವಾಗ, ಬಳಸುವಾಗ ವಿವೇಕ ಪ್ರಜ್ಞೆಯ ಕೋಲು ಹತ್ತಿರವಿರಲೇಬೇಕು. **— ಜಗದ್ಗುರು ಮಾತೆ ಮಹಾದೇವಿ.**

೬. ಸಂತೃಪ್ತಿ ಇದ್ದವನೇ ಶ್ರೀಮಂತ. **— ಥಾಮಸ್ ಫುಲ್ಲರ್.**

೭. ಬೇಕು ಬೇಕು ಎಂಬ ಅತೃಪ್ತಿಯೇ ಬಡತನ ; ಸಾಕು ಸಾಕು ಎಂಬ ಸಂತೃಪ್ತಿಯೇ ಸಿರಿವಂತಿಕೆ. **— ಆಯ್ದಕ್ಕಿ ಲಕ್ಕಮ್ಮ.**

೮. ನಿಸರ್ಗದ ರಮಣೀಯ ದೃಶ್ಯಗಳು, ಪರ್ವತ ಶ್ರೇಣಿಗಳು ನಮ್ಮ ಮನದ ಉದ್ವಿಗ್ನತೆಯನ್ನು ಕಡಿಮೆ ಮಾಡಿ, ಸ್ನೇಹ ಭಾವನೆಯನ್ನು ಅರಳಿಸುವವು. **— ಎಮರ್ಸನ್.**

೯. ಅನೇಕ ಕಣ್ಣುಗಳು ಹೂಬನದಲ್ಲಿ ಓಡಾಡುತ್ತವೆ. ಆದರೆ ಕೇವಲ ಕೆಲವು ಮಾತ್ರ ಹೂಗಳನ್ನು ಗಮನಿಸುತ್ತವೆ. **— ಎಮರ್ಸನ್.**

೧೦. ದಯೆಯು ಇಲ್ಲದಿರೆ ಅದು ಧರ್ಮವೇ ಅಲ್ಲ. ದಯವೇ ಧರ್ಮದ ಮೂಲ. **— ಬಸವಣ್ಣ.**

೧೧. ಉರಸ್ಥಲವನ್ನು ಅರ್ಥಾತ್ ಭಾವನೆಗಳನ್ನು ಉತ್ತಮಾಂಗದಲ್ಲಿ ಅರ್ಥಾತ್ ತಲೆಯಲ್ಲಿ ಅಡಗಿಸಬಲ್ಲ ಸಂಸ್ಕಾರವೇ ಶಿಕ್ಷಣವು. **ಪ್ರಭುದೇವ.**

೧೨. ಏನೂ ದೋಷವಿಲ್ಲದವರನ್ನೇ ಸ್ನೇಹಿತರನ್ನು ಮಾಡಿಕೊಳ್ಳಬೇಕು. ಎಂದರೆ ಎಂದಿಗೂ ಸ್ನೇಹಿತರನ್ನು ಪಡೆಯಲಾರೆವು. **— ಥಾಮಸ್ ಫುಲ್ಲರ್.**

Digitalized by e-Sahithya Documentation Forum
Sponsored by Sarayu Foundation Trust

ಒಂದು ವಚನ : ತಾತ್ತ್ವಿಕ ವಿಶ್ಲೇಷಣೆ

ಜಗದ್ಗುರು ಮಾತೆ ಮಹಾದೇವಿ

ಉದಕದೊಳಗೆ ಬಯ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು;
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು;
ನನೆಯೊಳಗಣ ಪರಿಮಳದಂತಿದ್ದಿತ್ತು;
ಕೂಡಲಸಂಗಮದೇವರ ನಿಲುವು
ಕನ್ನೆಯ ಸ್ನೇಹದಂತಿದ್ದಿತ್ತು.

ಅರ್ಥ : ನೀರಿನಲ್ಲಿ ಅವ್ಯಕ್ತವಾಗಿ ಹುದುಗಿಕೊಂಡಿರುವ, ಪ್ರಕಟಗೊಳ್ಳಲು ಉತ್ಕಟ ಅಪೇಕ್ಷೆ (Urge) ಯನ್ನು ಹೊಂದಿರುವ ಬೆಂಕಿಯಂತೆ ; ಎಳೆಯ ಸಸಿಯಲ್ಲಿ ಸುಪ್ತವಾಗಿ ಅಡಗಿರುವ ವಿಶಿಷ್ಟವಾದ ರುಚಿಯಂತೆ; ಎಳೆಯ ಮೊಗ್ಗಿನಲ್ಲಿ ಅಪ್ರಕಟಿತವಾಗಿ ಅಡಗಿರುವ ಸುವಾಸನೆಯಂತೆ; ಮುಗ್ಧಳಾದ, ಅವಿಕಸಿತ ಕಾಮವುಳ್ಳ ಕನ್ನೆಯಲ್ಲಿ ಸುಪ್ತವಾಗಿ ಹುದುಗಿಕೊಂಡಿರುವ ಕಾಮತತ್ತ್ವ (ತಾಯ್ತನ) ದಂತೆ; ಪ್ರಕೃತಿ ಗುಣಗಳಿಂದ ಕೂಡಿದ ಈ ಶರೀರದಲ್ಲಿ, ಸುಪ್ತವಾಗಿ, ಅವ್ಯಕ್ತವಾಗಿ ಕೂಡಲಸಂಗಮ ದೇವರ ಇರುವು (Existence) ಇದೆ.

ವ್ಯಾಖ್ಯೆ : ಬಸವಣ್ಣನವರ ಷಟ್ಸ್ಥಲ ಕಟ್ಟಿನಲ್ಲಿ ಮೊಟ್ಟ ಮೊದಲನೆಯದಾಗಿ ಇರುವ ಈ ವಚನವು ಸೈದ್ಧಾಂತಿಕ (Metaphysical) ಪಾರಿಭಾಷೆಯನ್ನು ಹೊಂದಿ, ಪಂಚಭೂತಾತ್ಮಕ ಶರೀರದಲ್ಲಿ ಆತ್ಮ ತತ್ತ್ವವು ಹೇಗೆ ಇರುವುದೆಂಬುದನ್ನು ಪ್ರತಿಪಾದಿಸುತ್ತದೆ. ಆದರೆ ಇಲ್ಲಿ ಕಾಡುವ ಒಂದು ಸಂದೇಹವೆಂದರೆ, ಬಸವಣ್ಣನವರು ಶರೀರದಲ್ಲಿರುವ ಆತ್ಮನ ಸ್ವರೂಪವನ್ನು ಕುರಿತು ಹೇಳುವರೋ ಅಥವಾ ಜೀವದಲ್ಲಿರುವ ಪರಿಶುದ್ಧ ಆತ್ಮನ ರೂಪದ ಕಲ್ಪನೆ ಮಾಡಿಕೊಡುವರೋ ಎಂಬುದು. ನಮ್ಮ ಈ ಸಂಶಯಾತ್ಮಕ ಪ್ರಶ್ನೆಗೆ ಸಮಾಧಾನ ನೀಡುವ ಸಾಮರ್ಥ್ಯವುಳ್ಳ ಶಬ್ದವನ್ನು ಬಸವಣ್ಣನವರು ಈ ವಚನದಲ್ಲಿ ಬಳಸಿಲ್ಲ.

ಆದರೆ ಇದೇ ತತ್ತ್ವವನ್ನು ಪ್ರತಿಪಾದಿಸುವ ಅಕ್ಕಮಹಾದೇವಿಯ ಪಿಂಡಸ್ಥಲದ ವಚನವಾದ 'ನೆಲದ ಮರೆಯ ನಿಧಾನದಂತೆ' ಎಂಬುದನ್ನು ವಿವೇಚಿಸಿದಾಗ ಅಲ್ಲಿ ಬರುವ 'ಭಾವದ ಮರೆಯ ಬ್ರಹ್ಮವಾಗಿಪ್ಪ ಚನ್ನಮಲ್ಲಿಕಾರ್ಜುನನ ನಿಲವನಾರೂ ಅರಿಯಬಾರದು' ಎಂಬ ಪ್ರಯೋಗವು ಅಕ್ಕಮಹಾದೇವಿ ಹೇಳುವುದು ಜೀವದ ಮರೆಯಲ್ಲಿರುವ ಆತ್ಮದ ಇರುಹಿನ ಬಗ್ಗೆ ಎಂದು ಸ್ಪಷ್ಟೀಕರಿಸುತ್ತದೆ. ಅಕ್ಕಮಹಾದೇವಿಯ

ಪ್ರಕಾರ, ಆತ್ಮನಿಗೆ ಮಲಿನ ಅಂತಃಕರಣಗಳ ಆವರಣವಾದಾಗ ಅದಕ್ಕೆ ಜೀವ ಎನ್ನಬಹುದಾದರೆ ಜೀವದಲ್ಲಿನ ಅಂತಃಕರಣ ಮಲಿನತೆ ದೂರವಾದಾಗ ಅದು ಆತ್ಮ, ಅಂಗ ಅಥವಾ ಪರಿಶುದ್ಧಾಂತಃಕರಣ ದೇಹಿಯಾದ ಪಿಂಡ ಎನ್ನಿಸಿಕೊಳ್ಳುವುದು.

ಆತ್ಮ+ಮಲತ್ರಯ=ಜೀವ.
ಜೀವ–ಮಲತ್ರಯ=ಆತ್ಮ.

ಹೆಚ್ಚಿನ ಸಂಖ್ಯೆಯಲ್ಲಿರುವ ದೇವರ ದಾಸಿಮಯ್ಯನವರ ಪಿಂಡಸ್ಥಲದ ವಚನಗಳನ್ನು ಓದಿದಾಗ ಅಲ್ಲಿ ಸ್ಪಷ್ಟವಾಗಿ 'ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ', 'ನೀನು ಪ್ರಾಣ ಪ್ರಕೃತಿಯೊಳಡಗಿದ ಭೇದವ ಜಡರೆತ್ತ ಬಲ್ಲರೈ ರಾಮನಾಥ' ಎಂಬುದಾಗಿ ಬರುತ್ತದೆ. ಈ ವಾಕ್ಯಗಳು ಸ್ಪಷ್ಟವಾಗಿ ಶರೀರದಲ್ಲಿರುವ ಆತ್ಮನ ಸ್ವರೂಪದ ಬಗ್ಗೆ ವಿವೇಚಿಸುತ್ತವೆ. ಆದ್ದರಿಂದ ನಾವು ಸದ್ಯಕ್ಕೆ ಹೆಚ್ಚಿನ ಬಳಕೆಯುಳ್ಳ, ಶರೀರದಲ್ಲಿ ಆತ್ಮನ ನಿಲುವು ಹೇಗಿರುವುದೆಂಬ ವಿವೇಚನೆಯನ್ನು ತೆಗೆದುಕೊಳ್ಳೋಣ.

೧. ಅ. 'ಉದಕದೊಳಗೆ ಬಯ್ಚಿಟ್ಟ ಬಯಕೆಯ ಕಿಚ್ಚು' ಎಂಬ ಈ ವಾಕ್ಯಕ್ಕೆ ಸಮುದ್ರದೊಳಗಿರುವ ಬಡಬಾಗ್ನಿಯಂತೆ ಎಂದು ಅನೇಕರು ಅರ್ಥೈಸುತ್ತಾರೆ, 'ಉದಕ ಎಂಬ ಪದವು ಜಲತತ್ವವನ್ನು ಸಾಂಕೇತಿಸುತ್ತದೆ. ಅದು ನದಿ ಸಮುದ್ರ ಇತ್ಯಾದಿ ವಿಶಿಷ್ಟ ವಸ್ತುಗಳನ್ನು ಹೆಸರಿಸುವುದಿಲ್ಲ. ಉದಕದ ವ್ಯಾಪ್ತಿ ಸಮುದ್ರಕ್ಕಿಂತ ದೊಡ್ಡದಿದೆ. ಸಮುದ್ರದಲ್ಲಿ ಉದಕವಿದೆ, ಆದರೆ ಉದಕವೆಲ್ಲ ಸಮುದ್ರದಲ್ಲಿ ಇಂಬಿಡಲ್ಪಟ್ಟಿಲ್ಲ. ಸಮುದ್ರವನ್ನು ಬಿಟ್ಟು ಉದಕವು ಇರಬಲ್ಲುದು. ಸಮುದ್ರವು ಪೃಥ್ವಿಯ ಆಶ್ರಯದಲ್ಲಿ ಮಾತ್ರವಿದ್ದರೆ ಜಲತತ್ತ್ವವು ಮಂಜುಗಡ್ಡೆಯಾಗಿ, ಮೋಡವಾಗಿ ಇರಬಲ್ಲುದು. ಆದ್ದರಿಂದ ವಿಶಾಲವ್ಯಾಪ್ತಿಯುಳ್ಳ ನೀರು ಎಂಬ ಪದವೇ ಉದಕಕ್ಕೆ ಸೂಕ್ತ.

ಅದೇ ರೀತಿ 'ಕಿಚ್ಚು' ಎಂದರೆ ಸಮುದ್ರ ತಳದ ಬಡಬಾಗ್ನಿ ಎಂದು ಕೂಡ ಅರ್ಥ ಮಾಡುತ್ತಾರೆ. ಇಲ್ಲಿಯೂ ಸಹ 'ಕಿಚ್ಚು' ಅಂದರೆ ಬೆಂಕಿ ಎಂದು ಅರ್ಥ ಮಾಡಿದರೆ ಅದು ಬಡಬಾಗ್ನಿಗಿಂತ ವಿಶಾಲವ್ಯಾಪ್ತಿಯುಳ್ಳುದು. ಬಡಬಾಗ್ನಿಯು ಕಿಚ್ಚು ಹೌದು, ಆದರೆ ಕಿಚ್ಚೆಲ್ಲ ಬಡಬಾಗ್ನಿಯಲ್ಲ. ಈ ಕಿಚ್ಚು ಸಮುದ್ರಗರ್ಭವನ್ನು ಬಿಟ್ಟು ಸಹ ಹೊರಗಿರಬಲ್ಲುದು. ಎರಡನೆಯದಾಗಿ ಬಡಬಾಗ್ನಿ ಇರುವುದು ಸಾಗರದ ತಳದ ಭೂಗರ್ಭದಲ್ಲಿ. [೧೯೭೩ ನವಂಬರ್ ೧೪ ರಂದು ಐಸ್ಲೆಂಡಿನ ದಕ್ಷಿಣಕ್ಕಿರುವ ಗಾಯಿಕ್ ಪೂಗಲಾಸ್ಕರ್ ಎಂಬ ಚಿಕ್ಕ ನಡುಗಡ್ಡೆಯ ಪಶ್ಚಿಮಕ್ಕೆ ಸಾಗರ ಗರ್ಭದ ಜ್ವಾಲಾಮುಖಿಯೊಂದು ಜಾಗ್ರತವಾಗಿ ಬೆಂಕಿಯನ್ನು ಉಗುಳತೊಡಗಿತು. ಅದು ೭° ಯಿಂದ ೮° ಸೆಂಟಿಗ್ರೇಡ್‌ನಷ್ಟು ಬಿಸಿಯಿರುತ್ತಿದ್ದ ಉತ್ತರ ಅಟ್ಲಾಂಟಿಕ್

Digitalized by e-Sahithya Documentation Forum
Sponsored by Sarayu Foundation Trust

ಸಾಗರದ ನೀರನ್ನು ೧೪° ಸೆಂಟಿಗ್ರೇಡ್ ಉಷ್ಣತೆಗೆ ಏರಿಸಿತು. ಕಾಲಾನಂತರದಲ್ಲಿ ೧೨೫ ಮೀಟರಿನಷ್ಟು ಎತ್ತರವಾದ ಸರ್ಟಸ್ ನಡುಗಡ್ಡೆಯನ್ನು ನಿರ್ಮಿಸಿತು. ಇದು ಸಾಗರದ ತಳದ ಭೂಗರ್ಭದೊಳಗಿನ ಬೆಂಕಿಯೇ ಹೊರತು ನೀರಿನಲ್ಲಿ ಹುದುಗಿದ್ದ ಕಿಚ್ಚಲ್ಲ.]

ಭೂಗರ್ಭದಲ್ಲಿರುವ ಕಿಚ್ಚನ್ನು ನೀರಮಧ್ಯದ ಕಿಚ್ಚು ಎಂದು ಕರೆಯಲುಬಾರದು. ಆದ್ದರಿಂದ ವಿಶಾಲವ್ಯಾಪ್ತಿಯುಳ್ಳ ಕಿಚ್ಚು ಪದವನ್ನು ಬಡಬಾಗ್ನಿಗೆ ಸಮವಾಗಿ ಬಳಸುವುದು ಯೋಗ್ಯವೆನಿಸದು.

ಈ ವಿವರಣೆಯಂತೆ ಜ್ಞಾನಾಗ್ನಿರೂಪದ ಪಿಂಡತತ್ವವು ಪಿಂಡಾಂಡದಲ್ಲಿ ಗುಪ್ತವಾಗಿ, ಸುಪ್ತವಾಗಿ ಜ್ಞಾನೋದಯಕ್ಕೆ ಮುನ್ನ ಇರುಹಿನ ಕುರುಹ ತೋರದೆ ಪ್ರತಿಯೋರ್ವನಲ್ಲೂ ಅಡಗಿರುತ್ತದೆ. ನೀರಿನಲ್ಲಿ ಸುಪ್ತವಾಗಿರುವ ಕಿಚ್ಚಿನಷ್ಟು ಸೂಕ್ಷ್ಮವಾಗಿರುವುದು. ನೀರನ್ನು ಹೊರಗಿನಿಂದ ನೋಡಿದಾಗ ಅದರಲ್ಲಿ ಅಗ್ನಿ ಅಡಗಿರುವ ಸುಳುವು ಸರ್ವಥಾ ಕಲ್ಪನೆಗೆ ಬರದು. ಆದರೆ ಅದೇ ನೀರು ಘರ್ಷಣೆಗೆ ಒಳಗಾದಾಗ ಅದರ ಪ್ರತಿಫಲವಾಗಿ ಹುದುಗಿರುವ ಕಿಚ್ಚು ವಿದ್ಯುತ್‌ನ ರೂಪದಲ್ಲಿ ಪ್ರಕಟವಾಗುವುದು. ನೀರು ಘನೀಭೂತವಾಗಿ ಮೋಡವಾಗಿ ಘರ್ಷಿಸಿದಾಗ ಅಗ್ನಿತತ್ವದ ಮತ್ತೊಂದು ರೂಪಗಳಾದ ಮಿಂಚು, ಬೆಳಕುಗಳು ವ್ಯಕ್ತವಾಗುವವು. ಹೀಗೆ ವ್ಯಕ್ತವಾದ ಬೆಂಕಿಯು ಹೊರಗಿನಿಂದ ಬಂದುದಲ್ಲ, ನೀರಿನ ಗರ್ಭದಿಂದಲೇ ಹೊರಬಂದುದು. ಇಲ್ಲಿನ ವೈಶಿಷ್ಟ್ಯವೆಂದರೆ ಎರಡು ವಿರುದ್ಧ ತತ್ತ್ವಗಳು ಸೋಜಿಗ ಪೂರ್ಣರೀತಿಯಲ್ಲಿ ಒಂದನ್ನೊಂದು ಆಶ್ರಯಿಸಿಕೊಂಡಿರುವುದು. ಹೀಗೆ ನೀರಿನ ಗರ್ಭದಲ್ಲಿ ಸೆರೆಸಿಕ್ಕ ಅಗ್ನಿಯಾದರೂ ನಿಷ್ಕ್ರಿಯವಾದುದೇನಲ್ಲ ; ಹೊರಬಂದು ಪ್ರಕಟಗೊಳ್ಳಲು ಉತ್ಕಟ ಅಪೇಕ್ಷೆಯನ್ನು (urge-ಅಭೀಪ್ಸೆ) ಹೊಂದಿರುವಂತಹುದು.

ಆ. 'ಸಸಿಯೊಳಗಣ ರಸದ ರುಚಿಯಂತಿದ್ದಿತ್ತು' ಈ ವಾಕ್ಯದಲ್ಲಿ ಬರುವ ಸಸಿಗೆ 'ಶಶಿ' ಎಂದು ಕೆಲವರು ಅರ್ಥಯಿಸುತ್ತಾರೆ. ಚಂದ್ರನಲ್ಲಿ ರಸವೆಲ್ಲಿರಬೇಕು ? ಒಂದು ದೃಷ್ಟಿಯಲ್ಲಿ ರಸವಿದ್ದರೂ (ಜಲತತ್ವ, ಶೀತಲತೆ) ಆ ರಸಕ್ಕೆ ಯಾವುದೇ ರುಚಿಯಿಲ್ಲ. ಚಂದ್ರನ ಅನುಭವ ಸ್ಪರ್ಶೇಂದ್ರಿಯಕ್ಕೆ, ದೃಶ್ಯೇಂದ್ರಿಯಕ್ಕೇ ಹೊರತು ರುಚಿಯನ್ನನುಭವಿಸುವ ರಸನೇಂದ್ರಿಯಕ್ಕಲ್ಲ. ಹೀಗೆ ಸಂಬಂಧ ಬರದ ಮೂರುಪದಗಳನ್ನು ಜೋಡಿಸಿ ಎಳೆದು ಅರ್ಥ ಮಾಡುವುದು ಅಷ್ಟೇನೂ ಸಮಂಜಸವಲ್ಲ. ಸಸಿಯನ್ನು ಎಳೆಯ ಗಿಡ ಎಂದುಕೊಂಡಾಗ ಅದರಲ್ಲಿ ನಿಶ್ಚಯವಾಗಿಯೂ ರಸ ಇರುವುದು (Juice or Sap) ಮತ್ತು ಅದಕ್ಕೊಂದು ರುಚಿ ಇದ್ದೇ ತೀರುವುದು. (ಮಾವಿನರಸ-ಹುಳಿ, ಬೇವಿನರಸ-ಕಹಿ, ಜಾಲಿಯರಸ-ಒಗರು) ಹೀಗೆ ಗಿಡವು ಕೊಡಲಿರುವ ಫಲವನ್ನು ನಿರ್ಧರಿಸುವ ರಸದಲ್ಲಿ (Sap of plant) ವಿಶಿಷ್ಟ ರುಚಿ

ಇರುತ್ತದೆ. ಎಳೆಯ ಸಸಿಯನ್ನು ರಸನೇಂದ್ರಿಯದ ಮೂಲಕ ರುಚಿಸಿದಾಗ ಆ ಗಿಡದ, ಅದರ ಫಲದ ಸ್ವರೂಪದ ಅರಿವು ನಮಗಾಗದಿರದು. ಈ ರುಚಿಯು ಗಿಡದಲ್ಲಿ ಸುಪ್ತವಾಗಿದ್ದು ಅವ್ಯಾಹತವಾಗಿ ಪ್ರವಹಿಸಿ ವಿಶಿಷ್ಟರುಚಿಯ ಹಣ್ಣುಗಳನ್ನು ಕೊಡಲ ಸಹಾಯಕವಾಗುತ್ತದೆ. ಹಣ್ಣಿನಲ್ಲಿ ಪೂರ್ತಿ ವಿಕಾಸಗೊಂಡು ತೋರುವ ರುಚಿಯು ಹೊರಗಿನಿಂದ ಬಂದು ಸೇರಿದ್ದಾಗಿರದೆ ಒಳಗಿನಿಂದಲೇ ವಿಕಸನಗೊಂಡ ತತ್ತ್ವ.

ಇ. 'ನನೆಯೊಳಗಣ ಪರಿಮಳದಂತಿದ್ದಿತ್ತು' ಎಳೆಯ, ಬಿಳುಪೇರದ ಮಲ್ಲಿಗೆಯ ಮೊಗ್ಗನ್ನು ಮೂಸಿದಾಗ ಅದು ಮುಂದೆ ಕೊಡುವ ಸೌರಭದ ಕಲ್ಪನೆ ನೋಡಿದ ಮಾತ್ರಕ್ಕೆ ನಮಗಾಗದು. ಹಸುರಳಿದು ಬಿಳುಪೇರುತ್ತಿದ್ದಂತೆಯೇ ಆ ಸುವಾಸನೆ ವಿಕಾಸಗೊಂಡು ಪ್ರಕಟವಾಗುವುದು. ಈ ಸೌರಭವು ಸಹ ಹೊರಗಿನಿಂದ ಬಂದುದಾಗಿರದೆ ಒಳಗಿನಿಂದ ಅರಳಿ ನಿಂತದ್ದು.

ಈ. ಒಂದು ಸಣ್ಣ ಮಗುವಿನಲ್ಲಿ ಆದಿಕಾಮವು (Libido) ಅತಿ ಸುಪ್ತಾವಸ್ಥೆಯಲ್ಲಿರುವುದು. ತರುಣಿಯಲ್ಲಿ ಪ್ರಕಟಗೊಂಡು ನೆಲೆಸಲಿರುವ ಕಾಮವು ಆಕೆಯಲ್ಲಿ ಬಂದು ಸೇರಿದ ಆಗಂತುಕ ತತ್ತ್ವವಲ್ಲ. ಕನ್ನೆಯ ಅವಸ್ಥೆಯಲ್ಲಿ ಬೀಜದೋಪಾದಿಯಲ್ಲಿದ್ದು ಮುಂದೆ ಪ್ರಕೃತಿ ಜನ್ಯ ವಿಕಾಸಹೊಂದಿ ವಿಸ್ತಾರವಾಗಿರುವಂಥದು.

ಹೀಗೆ ಕೂಡಲಸಂಗಮದೇವರ ನಿಲುವು ಪ್ರಕೃತಿಜನ್ಯ ಶರೀರದಲ್ಲಿ, ನೀರಿನಲ್ಲಿ ಹುದುಗಿರುವ ಕಿಚ್ಚಿನಂತೆ, ಸಸಿಯೊಳಗಣ ರುಚಿಯಂತೆ, ನನೆಯೊಳಗಣ ಪರಿಮಳದಂತೆ, ಕನ್ನೆಯಲ್ಲಿನ ಸ್ನೇಹದಂತೆ ಗುಪ್ತವಾಗಿ, ಪ್ರಕಟವಾಗಿದೆ ಅಡಗಿಕೊಂಡಿರುವುದು. ಆದರೆ ಇದಕ್ಕೆ ಉತ್ಕಟವಾದ ಬಯಕೆಯುಂಟು. ಅದೇನೆಂದರೆ ತಾನು ಪೂರ್ಣವಾಗಿ ಪ್ರಕಾಶಕ್ಕೆ ಬಂದು ಪ್ರಕೃತಿಗುಣಗಳನ್ನು ಮೆಟ್ಟುವ ಬಯಕೆ. ಆದರೆ ಈಗ ಅದು ಪ್ರಕೃತಿಯಲ್ಲಿ ಸೆರೆಯಾಗಿದೆ. ನೀರನ್ನು ಸ್ಪರ್ಶಿಸಿದರೆ ನಾಶವಾಗುವ ಕಿಚ್ಚು ನೀರಿನ ಗರ್ಭದಲ್ಲಿ ಸೆರೆಯಾದ ಸೋಜಿಗದಂತೆ, ಸ್ಪರ್ಶಮಾತ್ರದಲ್ಲಿ ಪ್ರಕೃತಿ-ಪ್ರಾಣಗಳ ಸ್ವಭಾವವನ್ನು ನಾಶಮಾಡಬಲ್ಲ ಸಚೇತನ ಆತ್ಮವು ಪ್ರಕೃತಿಯ ಜಾಲದಲ್ಲಿ ಸಿಕ್ಕಿಕೊಂಡಿದೆ. ಆದರೆ ಹೊರಬಂದು ಪ್ರಕಾಶಬೀರಲು ಆತುರಗೊಂಡಿದೆ. ಹಾಗೆ ಪ್ರಕಾಶ ಬೀರಲು ಪರಿಸರದ ನಿರ್ಮಾಣ ಬೇಕಾಗಿದೆ.

ಉದಕದಲ್ಲಿ ಹುದುಗಿರುವ ಕಿಚ್ಚು ಹೊರಬರಲು ಘರ್ಷಣೆ ಅತ್ಯಾವಶ್ಯಕವಾದಂತೆ ಬದ್ಧಜೀವಿಯಲ್ಲಿ ಸೆರೆಯಾಗಿರುವ ಆತ್ಮಪ್ರಕಾಶವು ಹೊರಬರಲು ಶರಣರ ಸಂಗದಲ್ಲಿ ಅನುಭವ ಮಂಥನ, ಗುರುಬೋಧೆ ಅತ್ಯಾವಶ್ಯಕ. ಸಸಿಯೊಳಗಣ ರಸದ ರುಚಿಯು ಫಲವಾಗಿ ರೂಪುಗೊಳ್ಳಲು, ನನೆಯೊಳಗಣ ಪರಿಮಳ ಪ್ರಕಾಶಕ್ಕೆ ಬರಲು ಅವಕಾಶ ಬೇಕಾಗಿದೆ. ಕನ್ನೆಯೊಳಗಿರುವ ಕಾಮ, ಸ್ನೇಹ, ತಾಯ್ತನ ಹೊರಬರಲು

Digitalized by e-Sahithya Documentation Forum
Sponsored by Sarayu Foundation Trust

ಭಿನ್ನ ವಸ್ತುವಿನ ಸಂಯೋಗ ಬೇಕಾಗಿದೆ. ಕಟ್ಟಿಗೆಯಲ್ಲಿ ಬೆಂಕಿಯಿದೆ ನಿಜ; ಆದರೂ ಅದು ಉರಿಯದಾಗಿದೆ. ಅದನ್ನು ಉರಿಸಲು ಉರಿಯುವ ಬೆಂಕಿಕಡ್ಡಿಯ ಸ್ಪರ್ಶ ಬೇಕು. ಕಲ್ಲಿದ್ದಲಿನಲ್ಲಿ ಅಗ್ನಿಯ ಅಂಶ ಸಾಕಷ್ಟಿದೆ. ಅದನ್ನು ಉರಿಸಲು ಬೆಂಕಿ ಬೇಕು. ಅದೇ ರೀತಿ ಆತ್ಮಪ್ರಕಾಶ ಬೆಳಗಲು ಹೊರಗಿನಿಂದ ಮತ್ತೊಂದು ದೈವೀ ಕರುಣೆಯ ಅಂಶ ಗುರು ಕರುಣೆಯ ರೂಪದಲ್ಲಿ ಧಾರೈಸಬೇಕಾಗಿದೆ. ಗುರುವಿನ ಬೋಧೆ, ಶರಣರಸಂಗ, ಕರುಣೆ ಇವುಗಳು ಅಡಗಿಸಿಕೊಂಡ ಆತ್ಮ ಚೈತನ್ಯವನ್ನು ಅರಳಿಸಿ ಪೂರ್ಣ ಪ್ರಕಾಶಕ್ಕೆ ತರುವುದನ್ನು ಆತ್ಮಾನುಭಾವಿಯಲ್ಲಿ ಕಾಣಬಹುದು. ಕಟ್ಟಿಗೆಯೊಳಗಣ ಕಿಚ್ಚು ಹೊರಗಿನ ಕಿಚ್ಚಿನಿಂದ ಅರಳಿನಿಂತು ಕಟ್ಟಿಗೆಯುನ್ನು ಸುಟ್ಟು ಅದರ ಸ್ವಭಾವಜನ್ಯ ಗುಣಗಳನ್ನು ಅಳಿಸುವಂತೆ, ಆತ್ಮ ಪ್ರಕಾಶವು ಸಿದ್ಧನಲ್ಲಿ ಪೂರ್ಣ ಪ್ರಕಾಶಕ್ಕೆ ಬಂದು ಪ್ರಕೃತಿ ಗುಣಗಳನ್ನು ಸುಟ್ಟುಹಾಕುವುದು.

ಮನಶಾಸ್ತ್ರದ ದೃಷ್ಟಿಯಿಂದ ವಿವೇಚಿಸಿದರೆ ಪಿಂಡಸ್ಥಲವು ಎಚ್ಚರದ ಸ್ಥಿತಿಯನ್ನು ಪ್ರತಿಪಾದಿಸುತ್ತದೆ. ಇಲ್ಲಿಯತನಕ ಅಸ್ಥಿರ ಮೌಲ್ಯಗಳಲ್ಲಿ ವಿಶ್ವಾಸವನ್ನಿಟ್ಟುಕೊಂಡು ಮರೆವಿನಲ್ಲಿ ಗಾಢವಾಗಿ ಮಲಗಿದ್ದವನು ಇದ್ದಕ್ಕಿದ್ದಂತೆಯೇ ಎಚ್ಚರಗೊಂಡಾಗ ಕೇಳಿಕೊಳ್ಳುವ ಪ್ರಶ್ನೆ 'ನಾನಾರು' ಎಂಬುದು. ಈ ಪ್ರಶ್ನೆಗೆ ಅವನಿಗೆ ಉತ್ತರ ಬೌದ್ಧಿಕವಾಗಿ ದೊರೆಯುತ್ತದೆ. ಆಗ ತಿಳಿವು ಮೂಡುತ್ತದೆ. 'ನಾನೆಂಬುದು ಅನ್ವಯಿಸುವುದು ಅಳಿವುಂಟ ಕೈಕಾಲು ಮನಗಳ ಸಂಘಟಿತ ರೂಪವಾದ ಶರೀರಕ್ಕಲ್ಲ; ಇದೆಲ್ಲವನ್ನು ಸಾರಥಿಯಾಗಿ ನಿಯಂತ್ರಿಸುವ ಆತ್ಮಕ್ಕೆ!' ಇಲ್ಲಿಯ ತನಕ ಅದರ ಅರಿವೇ ಇಲ್ಲದ್ದರ ಬಗ್ಗೆ ಬಹಳಷ್ಟು ಸೋಜಿಗವನ್ನಿಸುತ್ತದೆ. ಆಗ ಪಿಂಡಾಂಡದಲ್ಲಿರುವ ಪಿಂಡದ ಇರುಹಿನ ಬಗ್ಗೆ ಆಲೋಚಿಸಿದಾಗ, ಈ ಪಂಚಭೂತಾತ್ಮಕ ಪ್ರಕೃತಿ ಜನ್ಯ ಕಾಯದಲ್ಲಿ ಆತ್ಮವು ಸಚೇತನವಾಗಿದ್ದರೂ ಗುಪ್ತ ಸುಪ್ತವಾಗಿ ಅಡಗಿರುವುದರ ತಿಳಿವು ಮೂಡಿದಾಗ ಅದೇ ಪಿಂಡಸ್ಥಲವಾಗುವುದು. ಅಂದರೆ ಷಟ್‌ಸ್ಥಲ ಮಾರ್ಗದಲ್ಲಿ ಸಾಧಕನು ಪಿಂಡಸ್ಥಲವನ್ನು ಮುಟ್ಟಿದಂತಾಗುವುದು.

ಅದ್ವೈತ ಸಿದ್ಧಾಂತಕ್ಕೂ ಬಸವ ಧರ್ಮದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತಕ್ಕೂ ಇಲ್ಲಿ ವ್ಯತ್ಯಾಸ ಸ್ಫುಟವಾಗಿ ತೋರುವುದು. "ಅಹಂ ಬ್ರಹ್ಮಾಸ್ಮಿ" "ತತ್ತ್ವಮಸಿ" 'ನಾನೆ ಬ್ರಹ್ಮನಿದ್ದೇನೆ' 'ನೀನು ಅದುವೆ ಆಗಿದ್ದೀಯ' ಎಂಬ ವಿವೇಚನೆ ಅದ್ವೈತ ಸಿದ್ಧಾಂತದ ಮೂಲವಾದರೆ ಬಸವಣ್ಣನವರ ಪ್ರಸ್ತುತ ವಚನ "ನನ್ನಲ್ಲಿ ಬ್ರಹ್ಮನಿದ್ದಾನೆ." "ನಿನ್ನಲ್ಲಿ ಬ್ರಹ್ಮನ ಅಂಶವಿದೆ" ಎಂದು ಸೂಚಿಸುತ್ತದೆ. 'ಬ್ರಹ್ಮವೇ ನಾನು, ನಾನೇ ಬ್ರಹ್ಮ' ಎಂದು ಅದ್ವೈತವೆಂದರೆ 'ನನ್ನಲ್ಲಿ ಬ್ರಹ್ಮನಿದ್ದಾನೆ, ನಾನೇ ಬ್ರಹ್ಮನಲ್ಲ' ಎಂದು ಬಸವ ಧರ್ಮದ ಸಿದ್ಧಾಂತ ಹೇಳುತ್ತದೆ.

ಉದಕದಲ್ಲಿ ಕಿಚ್ಚಿದೆ–ಉದಕವೇ ಕಿಚ್ಚಲ್ಲ.

ನನೆಯಲ್ಲಿ ಪರಿಮಳವಿದೆ–ನನೆಯೇ ಪರಿಮಳವಲ್ಲ.
ಕನ್ನೆಯಲ್ಲಿ ತಾಯ್ತನವಿದೆ–ಕನ್ನೆಯೇ ತಾಯಿಯಲ್ಲ.
ಶರಣನಲ್ಲಿ ದೇವನಿದ್ದಾನೆ–ಶರಣನೇ ದೇವನಲ್ಲ.

ಅದ್ವೈತದ ಪ್ರಕಾರ ಎಲ್ಲರಿಗೂ 'ನೀನು ಅದುವೆ ಇದ್ದೀಯ' ಎಂಬುದರಿಂದ ಈ ತತ್ತ್ವವು ಕನ್ನೆಯನ್ನು ಕುರಿತು 'ನೀನು ತಾಯಿ ಇದ್ದೀಯ' ಎಂದಂತೆ. ಆದರೆ ಶರಣ ತತ್ತ್ವದ ಪ್ರಕಾರ ತಾಯಿಯಾಗುವ ಶಕ್ತಿ ಕನ್ನೆಯಲ್ಲಿ ಇಲ್ಲವೆಂದಲ್ಲ, ಇದೆ. ಆದರೆ ಗುಪ್ತವಾಗಿ, ಅವಿಕಸಿತವಾಗಿ ಇದೆ. ಕಾಲಾನಂತರದಲ್ಲಿ ಸತಿಯಾದಾಗ ಆಕೆ ತಾಯಿಯಾಗಬಲ್ಲಳು. ಆದ್ದರಿಂದ ಬಸವಣ್ಣನವರು ದೇವರ ಇರುಹನ್ನು ಕನ್ನೆಯ ಸ್ನೇಹಕ್ಕೇ ಹೋಲಿಸಿ ಪ್ರತಿಯೋರ್ವನಲ್ಲಿ ಅಡಗಿರುವ ಪರಮಾತ್ಮ ತತ್ತ್ವದ ಅಂಶವನ್ನು ಪ್ರಚುರಪಡಿಸಿರುವರು.

೨. ಈ ವಚನದಲ್ಲಿ ಧ್ವನಿಸುವ ಮತ್ತೊಂದು ತತ್ತ್ವವನ್ನು ಅರಿಯಲೆತ್ನಿಸಬಹುದು. ಆದರೆ ಈ ವಿವರಣೆ ವಚನ ಗರ್ಭದಿಂದ ಸಹಜವಾಗಿ ಅರಳಿನಿಂತ ಸೌರಭದಂತೆ ಎನಿಸದೆ ಹೊರಗಿನಿಂದ ಪರಿಮಳವನ್ನು ಸಿಂಪಡಿಸಿದ ಕೃತಕ ಹೂವಿನಂತೆ ಎನಿಸುವುದು.

ಚೈತನ್ಯ ತತ್ತ್ವದ ವಿಕಾಸವನ್ನು ಈ ನಾಲ್ಕು ವಾಕ್ಯಗಳಲ್ಲಿ ವಿವೇಚಿಸಿರಬಹುದೇನೋ ಎಂದು ಸಂಶಯ ಬರುತ್ತದೆ. ನೀರನ್ನು ನೋಡಿದಾಗ ನಾವು ಊಹಿಸಿಕೊಳ್ಳಲಾರದಷ್ಟು ಗುಪ್ತವಾಗಿ ಕಿಚ್ಚು ಅಡಗಿರುತ್ತದೆ. ಅದೇ ರೀತಿ ಪಂಚಭೂತಗಳಲ್ಲಿ ಚೈತನ್ಯವು ಇದ್ದರೂ ಅದು ಎಳ್ಳಷ್ಟು ತೋರದೆ ಜಡದ ಸ್ಥಿತಿಯಲ್ಲಿ ಇರುತ್ತದೆ. ಆದರೆ ಸಸಿಯಲ್ಲಿ ಚೈತನ್ಯವು ಇನ್ನಷ್ಟು ವಿಕಾಸವಾಗಿ ಉಸಿರಾಡುವಂತಹ ಸ್ಥಿತಿಗೆ ತಲುಪಿರುತ್ತದೆ. ಅನೇಕ ಸ್ಪಂದನಗಳ ಮೂಲಕ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತದೆ. ಮೂರನೆಯದಾಗಿ ನನೆಯಲ್ಲಿನ ಪರಿಮಳವು ಇನ್ನೂ ಸ್ಫುಟವಾಗಿ ಗೋಚರಗೊಂಡು ಘ್ರಾಣಿಸುವವನನ್ನು ಚೇತನಿಸುತ್ತದೆ. ಕನ್ನೆಯ ಸ್ನೇಹದಲ್ಲಿ, ಭಾವಾಭಿವ್ಯಕ್ತಿಯಲ್ಲಿ (ಮಾನವ ಹಂತದಲ್ಲಿ) ಪೂರ್ಣ ವಿಕಸನಗೊಂಡು ಹೊರ ಜಗತ್ತಿನ ಮೇಲೂ ಪರಿಣಾಮ ಮಾಡುತ್ತದೆ. ವಿದ್ಯುತ್ತು ತಂತಿಯಲ್ಲಿ ಅಖಂಡವಾಗಿ ಪ್ರವಹಿಸುತ್ತಿದ್ದರೂ ಬಲ್ಬು ಇದ್ದಲ್ಲಿ ಮಾತ್ರ ಪ್ರಕಾಶ ತೋರುವಂತೆ ಪರಮಾತ್ಮ ತತ್ತ್ವ ಸಾಮಾನ್ಯ ಚೈತನ್ಯವಾಗಿ ಜಗತ್ತಿನಲ್ಲೆಲ್ಲ ಓತಪ್ರೋತವಾಗಿ ತುಂಬಿದ್ದರೂ ಸಹ ವಿಶೇಷ ಚೈತನ್ಯವಾಗಿ ಆತ್ಮವಿದ್ದಲ್ಲಿ ಪ್ರಕಾಶಿಸುವುದು. ಅಂತಹ ಹಂತವನ್ನು ವಿಕಾಸದ ಆತ್ಯಂತಿಕ ಸ್ಥಿತಿ ಮುಟ್ಟಿದ ಮನುಷ್ಯನಲ್ಲಿ ಕಾಣಬಹುದು.

ಈ ವಿವರಣೆಯಲ್ಲಿ ಕಂಡು ಬರುವ ಕೊರತೆಯೆಂದರೆ ಸಸಿಯಲ್ಲಿನ ರುಚಿ,

Digitalized by e-Sahithya Documentation Forum
Sponsored by Sarayu Foundation Trust

ನನೆಯೊಳಗಣ ಪರಿಮಳ ಎರಡೂ ಸಸ್ಯ ಜಗತ್ತಿಗೆ ಸಂಬಂಧಪಟ್ಟುವಿದ್ದು. ಹುಟ್ಟುಗುಣಗಳಿಂದ ಪ್ರಚೋದಿತವಾದ ಪ್ರಜ್ಞಾ ಪ್ರಪಂಚದಲ್ಲಿ ಜಡ ಮತ್ತು ಸಸ್ಯದ ನಂತರ ಬರುವ ಪ್ರಾಣಿವರ್ಗವನ್ನು ಕುರಿತು ಒಂದು ಮಾತೂ ಇಲ್ಲದುದು. ಇದರಿಂದ ಮೊದಲಿನ ಅರ್ಥವೇಹೆಚ್ಚು ಸಮಂಜಸವೆನಿಸುವುದು.

೩. ಜಗತ್ತಿನ ಬೆಳವಣಿಗೆ ಕುರಿತು ವಿಕಾಸವಾದವನ್ನು ಎತ್ತಿಹಿಡಿದು ಮಾತನಾಡುತ್ತಿರುವರೇನೋ ಎಂದು ಸಹ ಸಂಶಯ ಬರುತ್ತದೆ. ಸೃಷ್ಟಿಯ ಅವತರಣಿಕೆಯಲ್ಲಿ ಪಂಚಭೂತಗಳಿಂದ ಜಡಪ್ರಕೃತಿಯ ರಚನೆ ಪ್ರಾರಂಭವಾಗುತ್ತದೆ. ಉದಕ ಪದದ ಮೂಲಕ ಪಂಚಭೂತಗಳ ಸ್ಥಾನವನ್ನು ಗುರುತಿಸಲಾಗಿದೆ. ಪಂಚಭೂತಗಳಾದ ಮೇಲೆ ಸಸ್ಯವರ್ಗದ ಉತ್ಪತ್ತಿಯಾಗಿದೆ. ಆ ಬಳಿಕ ಪ್ರಾಣಿವರ್ಗದ ಆತ್ಯಂತಿಕ ಸಿದ್ಧಿಯಾದ ಮನುಷ್ಯಕುಲದ ನಿರ್ಮಾಣವಾಗುತ್ತದೆ. ಸಸ್ಯವರ್ಗದಲ್ಲಿ ಸಹ ಸೌರಭ ಪೂರ್ಣ ಹೂವು, ಹಣ್ಣುಗಳನ್ನು ಹೊತ್ತ ಗಿಡಗಳ ಉತ್ಪತ್ತಿ ಅನಂತರದ ಸ್ಥಿತಿ. ವಿಕಾಸದ ಆದಿಭಾಗದ ಗಿಡಗಳು ಹೂವು, ಫಲ ಏನೂ ಧರಿಸದೆ ಇರುವುದನ್ನು ಕಾಣುತ್ತೇವೆ.

ಹೀಗೆ ಬಸವಣ್ಣನವರು ವಿಕಾಸವಾದವನ್ನು ಹೇಳುವರೇನೊ ಎಂದು ಊಹಿಸಬಹುದು. ಈ ವಿವರಣೆಯಿಂದ ವಚನದ ಮೂಲಕ ಅವರು ಹೇಳಬೇಕೆಂದಿರುವ ತತ್ತ್ವದ ಅರ್ಥ ನಮಗಾಗದು. ಆದುದರಿಂದ ಇವುಗಳನ್ನು ಅಷ್ಟಾಗಿ ಅನ್ವಯಿಸದೆ ಬಸವಣ್ಣನವರ ಪಿಂಡಸ್ಥಲದ ಈ ವಚನ ಶರೀರದಲ್ಲಿರುವ ಆತ್ಮನ ಸ್ಥಿತಿಯನ್ನು ಪ್ರತಿಪಾದಿಸುತ್ತದೆ ಎಂಬ ಮೊದಲ ವ್ಯಾಖ್ಯೆಯನ್ನು ಅನ್ವಯಿಸಿದರೆ ಹೆಚ್ಚು ಸಮಂಜಸವಾಗುವುದು.

★★★★

ನಗೆಹನಿ

ಆತ : ನಾನೇನೂ ಸಾಮಾನ್ಯನಲ್ಲಯ್ಯ. ಕುವೆಂಪುರವರ ಬರಹ ಸಹ ತಿದ್ದಬಲ್ಲೆ.

ಈತ : ಅಚ್ಚರಿಪಡುತ್ತ "ಅಹುದೇ. ಅಂಥ ಸಾಹಿತ್ಯ ಸಾರ್ವಭೌಮನೆ ? ಅವರ ಯಾವ ಕಾವ್ಯವನ್ನು ತಿದ್ದಿರುವೆ........"

ಆತ : ನಾನು ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಪ್ರೂಫ್‌ರೀಡರ್ ಕಣಯ್ಯಾ....

ಧೈರ್ಯ-ತ್ಯಾಗಗಳ ದಿವ್ಯ ಮೂರ್ತಿ

ಸ್ವಾಮಿ ವಿವೇಕಾನಂದ

—ಸಂತೋಷ

ಸಾವಿರ ಸಾವಿರ ತೆರೆಗಳು ಸಾಲಾಗಿ ಬರುತ್ತಿವೆ. ಆ ತೆರೆಗಳ ಉಗಮ ಮಾತ್ರ ಗೊತ್ತಿಲ್ಲ, ಆದರೆ ಅವುಗಳ ಕೊನೆ ತೀರದ ಮಳಲು ರಾಶಿಯೊಂದಿಗೆ. ಆಗಸವು ನೀರಭ್ರವಿದೆ, ದೂರದಲ್ಲಿ ಬಿಳಿಯ ತುಂಡು ಮೋಡವೊಂದು ಅದರಲ್ಲಿ ತೇಲಿ ಬರುತ್ತಿದೆ. ಸಮುದ್ರ ತೀರದಲ್ಲಿ ನಿಂತ ಓರ್ವ ವ್ಯಕ್ತಿ ದಿಗಂತದಲ್ಲೇ ದೃಷ್ಟಿ ಕೀಲಿಸಿದೆ. ಕೆಲಕ್ಷಣಗಳ ನಂತರ ಮುಗುಳು ನಕ್ಕು, ಸಾಗರದೊಂದಿಗೆ ದೃಷ್ಟಿಯನ್ನು ಸಮ್ಮಿಲನಗೊಳಿಸಿದಾಗ ದೂರದಲ್ಲಿ ಸಾಗರದ ಮಧ್ಯೆ ಭೀಮಾಕಾರದ ಬಂಡೆಯೊಂದು ಕಾಣಿಸಿತು, ಆ ವ್ಯಕ್ತಿ ಅದನ್ನೇ ಹತ್ತು ನಿಮಿಷ ನೋಡಿ, ಆ ನಿರ್ಜನ ಪ್ರದೇಶವು ಧ್ಯಾನಕ್ಕೆ ಸೂಕ್ತ ಸ್ಥಳವೆಂದು ನಿರ್ಧರಿಸಿ ಅಲ್ಲಿಗೆ ಹೋಗ ಬಯಸಿತು. ಅಲ್ಲಿಗೆ ಹೋಗಬೇಕಾದರೆ ಮರದ ದೋಣಿ ಬೇಕಾಗಿತ್ತು. ಆ ವ್ಯಕ್ತಿ ಹತ್ತು ಹೆಜ್ಜೆ ಮುಂದೆ ನಡೆದು ದೋಣಿಯವನನ್ನು ಕರೆದು ನನ್ನನ್ನು ಆ ಬಂಡೆಯ ಹತ್ತಿರ ಕರೆದೊಯ್ಯುವಿಯಾ ? ಎಂದು ಕೇಳಿದಾಗ ದೋಣಿಯವನು ಕಾಸು ಕೇಳಿದ. ಬರಿಯ ಕೈ! ಆ ತಾಣವನ್ನು ಸೇರಬೇಕೆಂಬ ಅದಮ್ಯ ಆಕಾಂಕ್ಷೆ. ತನ್ನ ಆಶೆಯನ್ನು ಪೂರ್ತಿಗೊಳಿಸುವ ಛಲಕ್ಕೆ ಆ ಸಮುದ್ರದ ದೊಡ್ಡ ದೊಡ್ಡ ತೆರೆಗಳು ಆಹ್ವಾನ ನೀಡಿದಂತೆನಿಸಿತು. ಆ ಆಹ್ವಾನ ಸ್ವೀಕರಿಸುವ ಎದೆಯ ಸಂಕಲ್ಪ ದೃಢವಾಗಿರಬೇಕು. ಸ್ಥೈರ್ಯವು ಛಿದ್ರವಾಗಿರಕೂಡದು, ಪ್ರಯತ್ನ ಅಖಂಡವಾಗಿರಬೇಕು. ಈ ಮೂರೂ ಈ ತೀರದಲ್ಲಿ ನಿಂತ ವ್ಯಕ್ತಿಯಲ್ಲಿ ಒಮ್ಮೆಲೇ ಸಂಗಮಗೊಂಡು ಅವನನ್ನು ಮುಂದೆ ಮುಂದೆ ತಳ್ಳಿದವು. ಆತ ಸಾವಕಾಶವಾಗಿ ನೀರಿಗಿಳಿದ, ಒಂದು, ಎರಡು, ಮೂರು ಅಡಿ ನೀರಲ್ಲಿ ಸೇರಿ, ಒಮ್ಮೆಲೇ ಮೀನಾಗಿ ಈಜಿದ.

ಲಕ್ಷ ಲಕ್ಷ ಜನ ಆ ದೂರದ ಸಾಗರ ಮಧ್ಯದ ಭೀಮಾಕಾರದ ಬಂಡೆ ನೋಡಿದ್ದರು. ಅಚ್ಚರಿ ! ಮತ್ತು ಸಂತಸಪಟ್ಟಿದ್ದರೇ ವಿನಾ ಅದನ್ನು ಮುಟ್ಟುವ ಸಂಕಲ್ಪ ಯಾರಿಗೂ ಇರಲಿಲ್ಲವೇನೋ....! ಎತ್ತರದಲೆಗಳು ಆ ವ್ಯಕ್ತಿಯನ್ನು ಮುಳುಗಿಸ ಬಯಸಿ ಮೇಲೆರಗಿದವು, ಧಾಳಿ ಮಾಡಿದವು. ಯಾವ ಧಾಳಿಗೂ ಧೃತಿಗೆಡದಂತಿತ್ತು ಈತನ ಮನೋಸ್ಥೈರ್ಯ. ಬಂಡೆಯನ್ನು ಸಮೀಪಿಸಿ, ಸಾವಕಾಶವಾಗಿ ಹತ್ತಿದ. ನೆಟ್ಟಗೆ ನಿಂತು ಸುತ್ತಲೂ ನೋಡುತ್ತಿದ್ದಾನೆ. ಅದು ಒಂದು ಸಣ್ಣ ದ್ವೀಪದಂತೆ ಇದೆ. ಸಿಹಿ ನೀರಿನ ಚಿಲುಮೆಯೂ ಅಲ್ಲಿದೆ. ಆ ಬಂಡೆಯಮೇಲೆ ಕುಳಿತು ಭರತಖಂಡದ ಅಧಃಪತನಕ್ಕೆ ಮೂಲ ಕಾರಣವನ್ನರಸತೊಡಗಿತು. "ಧರ್ಮವು ಭಾರತೀಯನ ಪ್ರಾಣದುಸಿರಾಗಬೇಕು.

Digitalized by e-Sahithya Documentation Forum
Sponsored by Sarayu Foundation Trust

ಅವನ ಧಮನಿ ಧಮನಿಗಳಲ್ಲಿ ಧರ್ಮಾಭಿಮಾನ ಹರಿಯಬೇಕು, ಕೋಟಿ ಕೋಟಿ ಭಾರತೀಯರ ಜೀವನದ ಸತ್ವವೇ ಇದಾಗಬೇಕು, ಧರ್ಮ ಜಾಗೃತಿಯಾಗಬೇಕು. ಇದಕ್ಕೆ ಜನ, ಅನಂತರ ಹಣ ಬೇಕು. ಭಾರತೀಯರು ನಿರಭಿಮಾನಿಗಳು. ಆದಕಾರಣ ಪಾಶ್ಚಾತ್ಯ ದೇಶಗಳಿಗೆ ಹೋಗಿ ಧರ್ಮವನ್ನು ಅವರಿಗೆ ಬೋಧಿಸಿ ಅಲ್ಲಿಂದ ಹಣವನ್ನು ತಂದು ಭರತ ಖಂಡದ ಪುನರುದ್ಧಾರಕ್ಕೆ ಪ್ರಯತ್ನಮಾಡುವೆ ಎಂದು ಸಾಗರ ಸಂಗಮದಲ್ಲಿ ಶಪಥ ತೊಟ್ಟು ಆ ಬಂಡೆಯಿಂದ ಬೇಗನೆ ನೀರಿಗೆ ಇಳಿದು ಸಮುದ್ರದ ದಂಡೆಗೆ ಮರಳಿ ಧಾವಿಸಿದ ಮಹಾನ್ ಕಾವಿಧಾರಿ ದಂಡಧಾರಿ ವ್ಯಕ್ತಿ ಯಾರು ?

ಅವನೇ ಕ್ರಿ.ಶ. ೧೮೬೩ನೇ ಇಸ್ವಿಯಲ್ಲಿ ಸೂರ್ಯೋದಯದ ಸಮಯದಲ್ಲಿ ಜನಿಸಿದ ಭುವನೇಶ್ವರಿ ದೇವಿಯ ಕುವರ ಚೂಡಾಮಣಿ ನರೇಂದ್ರನಾಥ—ಅನಂತರದ ಸ್ವಾಮಿ ವಿವೇಕಾನಂದ. ಇವನು ಇಟ್ಟ ಹೆಜ್ಜೆ ಮೊದಲು ಮುಳ್ಳಲ್ಲಿ. ಆದರೆ ಮುಳ್ಳುದಾರಿ ಬೇಗನೇ ಕೊನೆಯಾಯ್ತು. ಹೆಜ್ಜೆ ಹೆಜ್ಜೆಗೂ ಈತನಿಗೆ ಆ ಕನ್ಯಾಕುಮಾರಿಯ ಬಂಡೆಯ ಮೇಲೆ ನಿಂತು ಮಾಡಿದ ಕೈಗೊಂಡ ಶಪಥ ಕಣ್ಣೆದುರು ಕಟ್ಟುತ್ತಿತ್ತು.

ಭಾರತದ ಧರ್ಮಗಳು ಅರಳಬೇಕು ವಿಕಾಸವೇ ಜೀವನ, ಸಂಕೋಚವೇ ಮರಣ. ಯಾವ ಒಂದು ಸಂಸ್ಕೃತಿಯಾಗಲಿ ತನ್ನಲ್ಲಿರುವದನ್ನು ಹೊರಗೆ ಇರುವ ಒಳ್ಳೆಯದನ್ನು ಹೀರಿಕೊಂಡು ತನ್ನದನ್ನಾಗಿ ಮಾಡಿಕೊಳ್ಳಬೇಕು. ಯಾವಾಗ ಹೊರಗಿನಿಂದ ತಾನು ಕಲಿಯುವದು ಯಾವುದೂ ಇಲ್ಲ ಎಂದರೆ ನಾವು ಭಾವಿಯ ಕಪ್ಪೆಗಳಾಗುವೆವು ಇಂತಹ ತತ್ವಜ್ಞಾನದ ಝರಿಗಳನ್ನು ಹರಿಸುತ್ತಿದ್ದಾಗ ಅವುಗಳನ್ನು ಅರ್ಥ ಮಾಡಿಕೊಳ್ಳುವ ಶಿಷ್ಯರು ಸ್ನೇಹಿತರು ವಿವೇಕಾನಂದರಿಗೆ ಸಿಕ್ಕರು.

ನಿಜವಾಗಿಯೂ ಮದ್ರಾಸಿನ ಈ ಶಿಷ್ಯರೇ ವಿವೇಕಾನಂದರನ್ನು; ಅವರ ವಿಶಾಲ ಧೋರಣೆಗಳನ್ನು ಅರಿತು ಅವರ ಛಲವನ್ನು ಪೂರ್ತಿಗೊಳಿಸಲು ಅಮೇರಿಕಾಕ್ಕೆ ಕಳಿಸಿದ ಪುಣ್ಯಾತ್ಮರು. ಶಪಥದ ಕನಸು ಮೇ ೩೧. ೧೮೯೩ರಂದು ನನಸಿನತ್ತವಾಲಿತು. ಬೊಂಬಾಯಿ ರೇವು ಪಟ್ಟಣದಲ್ಲಿ ನೂರಾರು ಜನ ಸ್ನೇಹಿತರು ಈ ಎಲ್ಲದರ ಮುಖ್ಯ ಸೂತ್ರಧಾರಿ ಅಳಸಿಂಗ್‌ಪೆರುಮಾಳ್ ಅವರು ಮದ್ರಾಸಿನಿಂದ ಬಂದಿದ್ದರು. ನಿಧಾನವಾಗಿ ಸ್ವಾಮಿ ವಿವೇಕಾನಂದರು ಹಡಗನ್ನೇರಿ ಕುಳಿತರು. ಸ್ನೇಹಿತರು ಶಿಷ್ಯರು ವಿವೇಕಾನಂದರಿಗೆ ಬೀಳ್ಕೊಟ್ಟರು. ಹಡಗು ಭಾರತಮಾತೆಯ ಮಡಿಲಿಂದ ಜಾರಿದಾಗ [illegible]ಧಿಯು ತನ್ನ ಮಡಿಲಲ್ಲಿ ಸೇರಿಸಿಕೊಂಡು ಕರೆದೊಯ್ಯತೊಡಗಿತು. ಸ್ಮೃತಿ ಪಟಲದ ಮೇಲ ಬಾರಾ ನಗರ ಮಠದ ಗುರುಭಾಯಿಗಳು, ಶ್ರೀ ರಾಮಕೃಷ್ಣರು ಮತ್ತು ಶ್ರೀ ಶಾರದಾದೇವಿಯವರ ಪವಿತ್ರಬಿಂಬಗಳು ಒಂದೊಂದಾಗಿ ಮೂಡಿ ಸರಿದುಹೋದವು. ವಿವೇಕಾನಂದರ ಹೃದಯದೊಳಗೆ ಮಧುರ ಸಂವೇದನೆ; "ಪವಿತ್ರ ಭೂಮಿ ಭಾರತದಿಂದ ತ್ಯಾಗ ಭೂಮಿಯಿಂದ ಭೋಗ ಭೂಮಿಗೆ ಜ್ಞಾನ ಭೂಮಿಯ ಸಂದೇಶವನ್ನು

ಕರ್ಮಭೂಮಿಗೆ ಮುಟ್ಟಿಸಲು ಹೋಗುತ್ತಿರುವೆ" ಎಂಬ ಭಾವದಿಂದ ಮನಸ್ಸು ಪುಳಕಿತವಾಯಿತು.

ಭರತ ಖಂಡದ ಶ್ರೇಷ್ಠ ಅಂಶಗಳ ಸಾರವನ್ನೇ ಹೀರಿಕೊಂಡ ವಿವೇಕಾನಂದರು ಅದನ್ನು ಎರೆಯಲು–ವಿದೇಶದಲ್ಲಿ ಕಾಲಿಟ್ಟರು. ಯಂತ್ರ ನಾಗರಿಕತೆಯ ಜನರ ಕಣ್ಣಲ್ಲಿ ಬೆಳಕನ್ನು ತುಂಬಲೆಂದು, ಅವರ ಸಂಕುಚಿತ ಹೃದಯವನ್ನು ವಿಶಾಲ ಮಾಡಲೆಂದು, ತಾಯಿ ಭಾರತಿಯು ಶ್ರೇಷ್ಠ ಪುತ್ರನನ್ನೇ ಕಳಿಸಿದ್ದಳು. ಚಿಕ್ಯಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಸಾವಿರ ಸಾವಿರ ಜನರ ಹೃದಯ ಹಾಳೆಯಲ್ಲಿ ಭಾರತದ ತತ್ತ್ವಗಳ ಚಿತ್ರ ಮೂಡಿಸಿದಾಗ ಭಾರತಮಾತೆ ಹರುಷ ಸಂಭ್ರಮದಿಂದ ನಲಿದಳು. ೧೮೯೩ನೇ ಸಪ್ಟೆಂಬರ್ ೧೧ನೇ ಸೋಮವಾರ ಚಿಕ್ಯಾಗೋ ನಗರದಲ್ಲಿ ಭಾರತಮಾತೆಯ ಪುತ್ರನಿಗಾಗಿ ಸಂಭ್ರಮದ ಸ್ವಾಗತಗಳು ದಾರಿ ಕಾಯುತ್ತಿದ್ದವು. ಹದಿನೈದು ನಿಮಿಷಗಳವರೆಗೆ ಮಾತಾಡಿದರು ವಿವೇಕಾನಂದರು. ಸಾವಿರ ಸಾವಿರ ಜನರ ಕ್ಯಾಮರಾ ಕ್ಲಿಕ್ ಮಾಡಿಕೊಂಡು ಧನ್ಯತೆ ಪಡೆದವು. ಉಪನ್ಯಾಸ ಮುಗಿದಾಗ ಇದ್ದ ಸಭಿಕರೆಲ್ಲಾ ಓಡಿ ಬಂದು ಕೈಕುಲುಕಿದರು. ನೂರಾರು ಕಾರುಗಳು ಸಾಲಾಗಿ ನಿಂತು ಇವರಿಗಾಗಿ ಕೈಮಾಡಿದ್ದವು. ಕೋಟ್ಯಾಧೀಶರೂ ಸಹ ತಮ್ಮ ಮನೆಗೆ ಇವರನ್ನು ಕರೆದೊಯ್ಯಲು ಸ್ಪರ್ಧೆ ನಡೆಸುತ್ತಿದ್ದರು. ಆದರೆ ಇವರ ಮನ ಅಹಂಕಾರದಿಂದ ಬೀಗಲಿಲ್ಲ. ಏಕೆಂದರೆ ಆಡಂಬರವು ಚಿರವಾದ ನೆರಳಲ್ಲ ಎಂದು ಅರಿತ ಹೃದಯ ಅವರದು. ಅಲ್ಲಿಯ ಸುಖಕ್ಕೆ ಮರುಳಾಗಿ ಭಾರತದ ಬೆಳವಣಿಗೆ ಮರೆಯುವ ಸ್ವಾರ್ಥಿ ಇವರಲ್ಲ.

ಚಿಕ್ಯಾಗೋ ಸಮ್ಮೇಳನದಲ್ಲಿ ಭಾಗವಹಿಸಿ ಆ ದೃಶ್ಯಕಣ್ಣಾರೆ ಕಂಡ ಅನಿಬೆಸೆಂಟರು ತಮ್ಮ ಲೇಖನದಲ್ಲಿ "ಗೈರಿತ ವಸನ ಭೂಷಿತ ಮಹಿಮಾಮಯ ಮೂರ್ತಿ, ಚಿಕ್ಯಾಗೋ ನಗರದ ಧೂಮಮಲಿನ ಧೂಸರ ವೃಕ್ಷ ಸ್ಥಳದಲ್ಲಿ ಭಾರತೀಯ ಸೂರ್ಯನು ಮೂಡಿದಂತಿತ್ತು. ಇವರನ್ನುಸನ್ಯಾಸಿ ಎನ್ನುವದಕ್ಕಿಂತ ಯೋಧ ಎನ್ನುವದು ಯೋಗ್ಯ. ಗರ್ವಿಷ್ಟ ಪಾಶ್ಚಾತ್ಯ ದೇಶಗಳಿಗೆ ಭಾರತಮಾತೆ ಯೋಗ್ಯತಮ ಪುತ್ರನನ್ನು ಕಳಿಸಿ ಗೌರವಾನ್ವಿತೆಯಾದಳು" ಎಂದು ಬರೆದಿದ್ದಾರೆ. ನಿಜವಾಗಿಯೂ ಆ ವಿದ್ವತ್ತು ತಪಸ್ಸು, ಕೆಚ್ಚು, ಸಾಹಸ, ಬಡವರ ಬಗ್ಗೆ ಕಳಕಳಿ, ಇವುಗಳಿಂದಲೇ ಉದಿಸಿತ್ತೆಂದು ಹೇಳಬಹುದು.

'ಇವನು ಪ್ರಪಂಚವನ್ನೆ ಅಲ್ಲಾಡಿಸುತ್ತಾನೆ' ಎಂಬ ರಾಮಕೃಷ್ಣರ ನುಡಿಯು ನೂರು ಪಾಲು ಸತ್ಯವಾಯಿತು. ಇದರಿಂದ ಭಾರತದಲ್ಲಿ ವಿವೇಕಾನಂದರ ಪ್ರಭಾವ ಹತ್ತು ಪಾಲು ಹೆಚ್ಚಾಯಿತು. ಸರ್ವಧರ್ಮ ಸಮ್ಮೇಳನ ಮುಗಿದ ಮರುದಿನದಿಂದ ಇವರಿಗೆ ದಿನಕ್ಕೆ ಬಿಡುವಿರದಷ್ಟು ಸಭೆಗಳಿಗೆ ಆಹ್ವಾನ ಬಂದವು. ಇಂಗ್ಲಂಡ್ ಪ್ಯಾರೀಸ್‌ಗಳಿಂದ ಕರೆ ಬಂದಾಗ ಅತ್ತ ಇವರು ಪ್ರಯಾಣ ಬೆಳೆಸಬೇಕಾಯ್ತು ಅಲ್ಲೆಲ್ಲ ಕಾರ್ಯಕ್ರಮ ಮುಗಿಸಿ ತಿರುಗಿ ಅಮೇರಿಕಾಕ್ಕೆ ಬಂದು ಧರ್ಮ ಪ್ರಸಾರ ಕೈಗೊಂಡರು. ಆ ವೇಳೆಗೆ

Digitalized by e-Sahithya Documentation Forum
Sponsored by Sarayu Foundation Trust

ಭಾರತದ ನೆಲ ನೋಡಲು ವಿವೇಕಾನಂದರ ಕಂಗಳು ಹಸಿದಿದ್ದವು. ಮನ ಅತ್ತಲೇ ಎಳೆಯುತ್ತಿತ್ತು. ಮಾತ್ರ ಭೂಮಿಯತ್ತ ಪಯಣಿಸಿದರು. ಭಾರತದ ಜನ ಇವರ ಆಗಮನಕ್ಕಾಗಿ ಹಾತೊರೆದು ಕಾದಿತ್ತು. ಸಿಂಹಳದ ನಾಡಿನಲ್ಲೂ ಸಂಚರಿಸಿ ಭಾರತದ ನೆಲಕ್ಕೆ ಕಾಲಿಟ್ಟಾಗ ಎಲ್ಲೆಲ್ಲೂ ಜಯ ಘೋಷವೇ ಕೇಳಿತು. ಲಕ್ಷ ಲಕ್ಷ ಜನ ಧಾವಿಸಿ ದರ್ಶನ ಪಡೆದರು. ಕೆಲವು ತರುಣರಂತೂ ಇವರ ಮೆರವಣಿಗೆ ಗಾಡಿಗೆ ಕಟ್ಟಿದ ಕುದುರೆಗಳನ್ನು ಬಿಚ್ಚಿ ತಾವೇ ಎಳೆದರು. ಮದ್ರಾಸಿನಲ್ಲಿ ಪುರಾತನ ಕಾಲದಿಂದಲೂ ಇಂಥ ಸಮಾರಂಭ ಮೆರವಣಿಗೆಗಳೇ ನಡೆದಿರಲಿಲ್ಲವಂತೆ. ವಿವೇಕಾನಂದರ ಈ ಅದ್ಭುತ ಯಶಸ್ಸಿಗೆ ತನ್ಮೂಲಕ ಹಿಂದೂ ಸಂಸ್ಕೃತಿಯ ಜಯಭೇರಿಗೆ ಬಹುಪಾಲು ಮದ್ರಾಸಿನವರೇ ಕಾರಣರೆಂದು ಹೇಳಬೇಕು. ಮದ್ರಾಸಿನ ಆ ತ್ಯಾಗಿಗಳಿಗೆ ದೇಶವೇ ಋಣಿಯಾಗಬೇಕು.

ಒಂದು ದಿನ ವಿವೇಕಾನಂದರು ಬಂಗಾಳಿಯ ಪಂಚಾಂಗವನ್ನು ನೋಡುತ್ತಿದ್ದರು. ಎಲ್ಲ ಶಿಷ್ಯರಿಗೂ ಇದು ಆಶ್ಚರ್ಯದ ಸಂಗತಿಯಾಗಿತ್ತು. ಪಂಚಾಂಗದ ಪ್ರತಿ ಹಾಳೆಗಳನ್ನು ಕೂಲಂಕುಶವಾಗಿ ನೋಡಿ ಮುಗಿಚುತ್ತಿಧ್ದರು. ತಿಥಿ, ವಾರ, ನಕ್ಷತ್ರದ ಪುಟಗಳೆಲ್ಲವೂ ಮುಗಿದವು, ಆ ಪಂಚಾಂಗವನ್ನು ಬದಿಗಿರಿಸಿದವರೇ ಎದ್ದು ನಿಂತು ಆಶ್ರಮದ ಬಯಲಿನಲ್ಲಿ ನಡೆದು ಬಂದರು. ಶಿಷ್ಯಂದಿರನ್ನು ಕರೆದು ಗಂಗಾನದಿಯ ತೀರದ ಒಂದು ಸ್ಥಳವನ್ನು ತೋರಿಸಿ 'ನಾನು ದೇಹವನ್ನುವಿಸರ್ಜಿಸಿದ ಮೇಲೆ ಇಲ್ಲಿ ಅಂತ್ಯಕ್ರಿಯೆಮಾಡಿ' ಎಂದಾಗ ಶಿಷ್ಯಂದಿರ ಕಣ್ಣುಗಳು ಹನಿಯಿಂದ ತುಂಬಿದವು. ಜುಲೈ ೪ ಶುಕ್ರವಾರ ಬೆಳಿಗ್ಗೆ ವಿವೇಕಾನಂದರ ತೇಜಃಪುಂಜವಾದ ಕಣ್ಣುಗಳು ಕಾಳಿಕಾ ಮಾತೆಯನ್ನು ನೋಡುತ್ತಿವೆ. ಭಕ್ತಿ ಉಕ್ಕಿ ಎರಡು ತುಟಿಗಳ ಮಧ್ಯರಾಗರೂಪ ತಾಳಿ ಹೊರಬಂದು, ಸುಂದರವಾದ ಹಾಡಾಯಿತು. ಇಂಪಾದ ಹಾಡು ಅಲೆ ಅಲೆಯಾಗಿ ತೇಲಿ ದೂರವಾಗುತ್ತಿತ್ತು, ಅದೇ ಅವರ ಕೊನೆಯ ಹಾಡಾಯಿತು. ಅದೇ ಅವರ ಕೊನೆಯ ಪೂಜೆಯಾಯಿತು. ಆದರೆ ಅದೇ ಕೊನೆ ಎಂದು ಯಾರಿಗೆ ತಾನೆ ಗೊತ್ತಿತ್ತು?

ಮಧ್ಯಾಹ್ನದ ಸಮಯ. ಅವರ ದೇಹ ಹಾಸಿಗೆಯ ಮೇಲೆ ಕಣ್ಮುಚ್ಚಿ ಮಲಗಿದೆ, ಆದರ ಚಲನವಲನವಿಲ್ಲ. ಅವರ್ಣನೀಯ ಕಾಂತಿ ಮಾತ್ರ ಅವರ ಮುಖದಲ್ಲಿ ತುಂಬಿದೆ. ಸಾವಿರ ಸಾವಿರ ಕಿವಿಗಳಿಗೆ ತತ್ವದ ಕೊಳಲಗಾನ ಕೇಳಿಸಿದ ನಾಲಿಗೆ ಇಂದು ನಿಶ್ಚೇತನಗೊಂಡಿದೆ. ಭಾರತದ ಆಧ್ಯಾತ್ಮ ತಾರೆಯೊಂದು ಉಜ್ವಲವಾಗಿ ಮಿನುಗಿ ಈಗ ಐಹಿಕ ನಭದಿಂದ ಮಾಯವಾಗಿತ್ತು. ಆ ...ದ...ರೆ ಅವರ ತುಟಿ ಮೌನವಾಗಿ ಉಲಿಯುತ್ತಿತ್ತು "ನಾನೊಂದು ಜೀರ್ಣ ವಸನದಂತೆ ದೇಹವನ್ನು ಎಸೆಯಬಹುದು. ಆದರೆ ಜಗತ್ತಿಗೆ ಕಲ್ಯಾಣ ಮಾಡುವದನ್ನು ಬಿಡುವದಿಲ್ಲ".

ಯಾರು ರಾಮಕೃಷ್ಣ ಪರಮಹಂಸರನ್ನು ನಾಸ್ತಿಕವಾದದ ವಿಚಿತ್ರ ಪ್ರಶ್ನೆಗಳಿಂದ ಕೆಣಕಿದನೋ ಅಂಥವನೇ ರಾಮಕೃಷ್ಣರ ಪಾದಾರವಿಂದಗಳಿಗುರುಳಿದ. ಪರಮ ವಿಭೂತಿ

ಯಾದ ಆ ವ್ಯಕ್ತಿಯೇ, ಭಾರತವನ್ನು ಹೀನರು, ಕರಿಯರು, ಅಜ್ಞಾನಿಗಳು ಇರುವ ನಾಡೆಂದು ಕರೆದರೋ ಅಂಥವರೇ ಭಾರತವು ಧೀರರ, ಯೋಗಿಗಳ ಪವಿತ್ರ ತಾಣ ಎಂದು ಬಣ್ಣಿಸುವಂತೆ ಮಾಡಿದರು. ಆ ಧೀಮಂತ ಮೂರ್ತಿ "ವಿಶ್ವ ಕೋಟಿ ತಾವು ದೇವರಲ್ಲಿ ಒಂದು ಎಂದು ಅರಿಯುವವರೆಗೆ ಚಿರಂತನ ಸ್ಫೂರ್ತಿಯಾಗಿ ಕೆಲಸ ಮಾಡುವೆನು" ಎಂದು ಹೇಳುವ ಆ ಪಾಂಚಜನ್ಯ ಇಂದಿಗೂ ಜೀವಂತ.

(ಜನವರಿ ೩೧ರಂದು ಬರುವ ವಿವೇಕಾನಂದ ಜಯಂತಿಯ ಸ್ಮರಣಾರ್ಥ)

★★★★

ಉಡುಗೊರೆಯಾಗಿ
(ಕಲ್ಯಾಣ ಕಿರಣ)

ಹಬ್ಬ ಹುಣ್ಣಿಮೆ ಜಯಂತಿಗಳಲ್ಲಿ ನೀವು ಮಿತ್ರರಿಗೆ ಹಿರಿಯರಿಗೆ ಉಡುಗೊರೆ ಕಳಿಸುವಿರಷ್ಟೇ. ಉಡುಗೊರೆ ಕೇವಲ ಸಂತೋಷಕ್ಕಾಗಿ ಅಲ್ಲ ; ಜ್ಞಾನೋದಯಕ್ಕಾಗಿ ಕೂಡ ಎಂಬುವ ಹೊಸ ಮಾರ್ಗ ನೀವು ಹಾಕಿ ಕೊಡಬೇಕು.

ಮಕರ ಸಂಕ್ರಮಣದ ದಿನ — ಸಿದ್ಧರಾಮೇಶ್ವರ ಜಯಂತಿ
ಯುಗಾದಿ ಪ್ರತಿಪದೆಯ ದಿನ — ಪ್ರಭುದೇವ ಜಯಂತಿ
ದವನದ ಹುಣ್ಣಿಮೆಯ ದಿನ – ಅಕ್ಕಮಹಾದೇವಿ ಜಯಂತಿ
ಅಕ್ಷಯ ತೃತೀಯ ಮೇ ೭ರಂದು ಬಸವ ಜಯಂತಿ

ಅಂದು ನಿಮ್ಮ ಮಿತ್ರರಿಗೆ ಉಡುಗೊರೆ ಕಳಿಸಲೇಬೇಕು.

ಎಂಥಾ ಉಡುಗೊರೆ?

ಹನ್ನೊಂದು ರೂಪಾಯಿ ಮನಿಯಾರ್ಡರ್ ಮಾಡಿ ನಿಮ್ಮ ಗೆಳೆಯರ ವಿಳಾಸ ನೀವು ಕೊಟ್ಟರೆ ನಿಮ್ಮ ಪರವಾಗಿ ನಾವು ಸುಂದರ ಪ್ಯಾಕೇಜಿನೊಡನೆ ಕಲ್ಯಾಣ ಕಿರಣ ಪತ್ರಿಕೆ ಅವರಿಗೆ ಕಳಿಸುತ್ತೇವೆ. ನಿಮ್ಮ ಹೆಸರೂ ಅದರಲ್ಲಿ ಸೂಚಿಸುತ್ತೇವೆ. ಒಂದು ವರ್ಷ ಪರ್ಯಂತರ ಅವರಿಗೆ ಕಲ್ಯಾಣ ಕಿರಣ ಕಳಿಸುತ್ತೇವೆ.

Digitalized by e-Sahithya Documentation Forum
Sponsored by Sarayu Foundation Trust

ತುರ್ತು ಪರಿಸ್ಥಿತಿ

—ಪಿ. ಬಸವಣ್ಣ.

ತ್ವರಿತದಿಂ ಬಡತನವನೋಡಿಸುವ ನೆಪ ಹೇಳಿ
ಗುರುತರದ ನಾಯಕರ ಸೆರೆಯೊಳಿಟ್ಟು
ಮರಣಪರ್ಯಂತ ನಾ ಬಿಡೆನು ಪದವಿಯನೆಂದು
ಮೆರೆವವರ ಕೆಳಗಿಳಿಸು—ಬೋಳು ಬಸವ ॥ ೧ ॥

ಸಮತೆಯನು ಸಾರುತ್ತ ವಿಷಮತೆಯ ಬೆಳೆಸುತ್ತ
ಶ್ರಮಪಡದೆ ತಾ ಮಾತ್ರ ಧನಿಕನಾಗಿ
ತುಮುಲವೆಬ್ಬಿಸಿ ಬರಿದೆ ಜನಮನವ ನೋಯಿಪನ
ಯಮಪುರಿಗೆ ನೀ ಕಳಿಸು—ಬೋಳು ಬಸವ ॥ ೨ ॥

ಪರಕೀಯರಾಳ್ವಿಕೆಯ ಕೊನೆಗೊಳಿಸಿ ಭಾರತಕೆ
ಗುರುತರ ಸ್ವಾತಂತ್ರ್ಯ ಗಳಿಸಿಕೊಟ್ಟ
ವರಶೂರ ಜನರಿಂದು ಕೈಕಟ್ಟಿ ಬಾಯ್ಮುಚ್ಚಿ
ಕುರಿಗಳಾಗಿಹರೇಕೆ—ಬೋಳು ಬಸವ ॥ ೩ ॥

ಸೆರೆಮನೆಯ ವಾಸಕ್ಕೆ ಬೆದರಿ ಸುಮ್ಮನೆ ಕುಳಿತು
ಗುರುತರದ ಹಕ್ಕುಗಳ ಕಳೆದುಕೊಂಡು
ಕುರಿಗಳಂದದಿ ಬರಿದೆ ತಲೆತಗ್ಗಿ ಬಾಳ್ವುದಕೆ
ಪರತಂತ್ರವೇ ಲೇಸು—ಬೋಳು ಬಸವ ॥ ೪ ॥

ವೀರತನದಲಿ ಪ್ರಜಾಸ್ವಾತಂತ್ರ್ಯ ಗಳಿಸಲಿಕೆ
ನೂರಾರು ಲಕ್ಷಜನ ಸೆರೆಯಾದರು
ಚೂರುಗೈದರು ಪ್ರಜಾಸ್ವಾತಂತ್ರ್ಯವನ್ನೀಗ
ಹೋರಿ ಕೇಳ್ವವರಿಲ್ಲ—ಬೋಳು ಬಸವ ॥ ೫ ॥

ಪರರು ಸುರಿಸಲಿ ಬೆವರ ಹರವಿ ತುಂಬಲಿ ಮೊಸರ
ಸುರಿಯೋಣ ಬಾಯ್ಗದನು ಎಂಬ ಜನರ
ಖರದ ಮೇಲ್ಕುಳ್ಳಿರಿಸಿ ಕೆರದಮಾಲೆಯನಿಕ್ಕಿ
ಮೆರೆಸು ನೀ ಬೀದಿಯೊಳು—ಬೋಳು ಬಸವ ॥ ೬ ॥

ತಂದೆಯಾಳ್ದನು ನಾಡ ತನ್ನ ಸಾಮರ್ಥ್ಯದಲಿ
ತಂದೆ ಹೆಸರಲಿ ಬಂದ ಮಗಳಿಗಿಂದು
ಮುಂದಿನಧಿಕಾರವನು ಮಗನಿಗೀಯುವ ಯತ್ನ
ಚೆಂದವೇ ನೀ ಹೇಳು—ಬೋಳು ಬಸವ ॥ ೭ ॥

ತನುಧನವನರ್ಪಿಸುತ ಹೋರಾಡಿ ಗಳಿಸಿರ್ಪ
ಘನತರ ಸ್ವಾತಂತ್ರ್ಯವನ್ನು ಮೆಟ್ಟಿ
ಮನಬಂದ ರೀತಿಯಲ್ಲಾಳ್ವವರ ಕೆಳಗಿಳಿಸೆ
ಜನರನೆಬ್ಬಿಸು ಬೇಗ—ಬೋಳು ಬಸವ ॥ ೮ ॥

ಗುಂಡಿನೇಟಿಗೆ ಹೆದರಿ ಹಿಮ್ಮೆಟ್ಟುತೋಡದಲೆ
ಗುಂಡಿಗೆಯನೊಪ್ಪಿಸಿ ಸ್ವಾತಂತ್ರ್ಯಕೆ
ಬಂಡೆದ್ದ ಜನರಿಂದು ಪಾರತಂತ್ರ್ಯದಿ ಬಿದ್ದು
ಭಂಡರಾಗಿಹರೇಕೆ—ಬೋಳು ಬಸವ ॥ ೯ ॥

ಬೆಂದುಬೇಗುದಿಗೊಂಡು ಗುಂಡಿನೇಟನು ತಿಂದು
ಹೊಂದಿರುವ ಪಾವನಪ್ರಜಾತಂತ್ರವ
ಚಿಂದಿಗೈಯುತ ಮೆರೆವ ಸರ್ವಾಧಿಕಾರಿಗಳ
ಕೊಂದಿಕ್ಕಿ ಸೆರೆಬಿಡಿಸು—ಬೋಳು ಬಸವ ॥ ೧೦ ॥

ದೇಶಸೇವೆಯ ಗೈವ ವೇಷವನು ಸಲೆಧರಿಸಿ
ಮೋಸಗೈವರ ಹಿಡಿದು ಕಟ್ಟಿಹಾಕಿ
ಹೇಸಿ ಮೊಗಕುಗಿಯುತ್ತ ಪಿಡಿದವರ ಕುತ್ತಿಗೆಗೆ
ಪಾಶವನು ನೀ ಬಿಗಿಯೊ—ಬೋಳು ಬಸವ ॥ ೧೧ ॥

ದೀನದಲಿತರ ಸೇವೆ ಗೈಯುವೆವು ನಾವೆಂದು
ದೀನರಂ ಶೋಷಿಸುವ ಹೀನಜನರ
ಕಾನನಕೆ ಕರೆದೊಯ್ದು ಕಣ್ಕಿತ್ತು ಕೈಕಡಿದು
ಶ್ವಾನನರಿಗಳಿಗಿಕ್ಕು—ಬೋಳು ಬಸವ ॥ ೧೨ ॥

★★★★

ಕಲ್ಯಾಣ ಕಿರಣಕ್ಕೆ ಚಂದಾದಾರರಾಗಿರಿ

Digitalized by e-Sahithya Documentation Forum
Sponsored by Sarayu Foundation Trust

ಗೀತಾಮೃತ

—ವಿಶ್ವಧರ್ಮಿ

ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ
ಪಾರ್ಥೋವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಮ್ ಮಹತ್।।

ಉಪನಿಷತ್ತುಗಳೇ ಗೋವುಗಳು, ಶ್ರೀ ಕೃಷ್ಣನೇ ಗೋಪಾಲಕನು, ಪಾರ್ಥನೇ ಕರುವು, ಜ್ಞಾನಿಗಳೇ ಉಂಟುವವರು. ಗೀತೆಯೇ ಅಮೃತವು! ಎಂತಹ ಸುಂದರ ಉಪಮಾ ಸಮುದಾಯ! ಭಾರತೀಯ ತತ್ತ್ವಶಾಸ್ತ್ರದ ಪ್ರಕಾರ ತತ್ತ್ವಜ್ಞಾನವು ಕೇವಲ ಬೌದ್ಧಿಕ ವ್ಯಾಯಾಮವಲ್ಲ, ಜೀವನ ವಿಧಾನ. ಅಂತೆಯೇ ಭಗವದ್ಗೀತೆಯು ಜೀವನ ಧರ್ಮ ಶಾಸ್ತ್ರವು. ಮಾನವ ಜೀವನದ ದೋಣಿಯು ಲೋಕಸಾಗರದಲ್ಲಿ ಮುಂಸಾಗಲು ದಿಕ್ಸೂಚಿಯು.

ಈ ವಿಚಾರವನ್ನು ತಾತ್ತ್ವೀಕರಿಸಿ, ವಿಶಾಲಗೊಳಿಸಿ ಮಾತನಾಡಿದರೆ ಒಂದು ಸಿದ್ಧಾಂತ ಇಲ್ಲಿ ಸ್ಫುಟವಾಗದಿರದು. ಧರ್ಮಶಾಸ್ತ್ರಗಳು ಗೋವುಗಳು. ಗೋವಿನ ಕೆಚ್ಚಲಲ್ಲಿ ತುಸು ಕೊಳೆ ಮೆತ್ತಿರಬಹುದು, ಸಗಣಿ ಅಂಟಿರಬಹುದು. ಅದನ್ನು ನೀರಿನಿಂದ ಶುಭ್ರವಾಗಿ ತೊಳೆದು ಗೋವಳಿಗನು ಹಾಲನ್ನೀಂಟಲು ಅಣಿಗೊಳಿಸಬೇಕು. ಅದೇ ರೀತಿ ಧರ್ಮ ಶಾಸ್ತ್ರಗಳಲ್ಲಿ ಕೆಲವು ಮತಾಂಧ (dogmatic) ವಿಚಾರಗಳು, ಮೂಢನಂಬಿಕೆಗಳು, ತಾತ್ಕಾಲಿಕ ಮೌಲ್ಯ (Transitory values)ಗಳು ಅಂಟಿರ ಬಹುದು. ಅಂಥವನ್ನು ಚಿಂತನ ಶೀಲತೆ, ವಿಮರ್ಶಾಪ್ರಜ್ಞೆಯ ನೀರಿನಿಂದ ತೊಳೆದು ಬೋಧಕನು, ಸದ್ಗುರುವು ಧರ್ಮಶಾಸ್ತ್ರ ವಿಚಾರಗಳೆಂಬ ಹಾಲನ್ನು ಹಿಂಡಲು ಅಣಿಗೊಳಿಸಬೇಕು. ಗುರುವಿನ ಮೇಲೆ ಹಾಲಿಂಡುವ ಬಹುದೊಡ್ಡ ಜವಾಬ್ದಾರಿಯಿದೆ. ಆದರೆ ಆ ಕಾರ್ಯಕ್ಕೆ ಪ್ರೇರಣೆ ನೀಡಲು ಜಿಜ್ಞಾಸು, ಮುಮುಕ್ಷುವೆಂಬ ಕರುವು ಬೇಕು ಆಗ ಮಾತ್ರವೇ ಕರುವನ್ನು ಸಾಧಕವಾಗಿ ಬಳಸಿಕೊಂಡು ಜ್ಞಾನಾಮೃತದ ಹಾಲನ್ನು ಹಿಂಡಿ ಗುರುವು ಲೋಕದ ಮನುಜರಿಗೆ ಹಂಚಬಲ್ಲ ಗೀತೆಯು, ಧರ್ಮಶಾಸ್ತ್ರ ಬೋಧೆಯು ಒಂದು ಅಮೃತವೇ ಸರಿ. ಅಮೃತವೆಂಬೊಂದು ವಸ್ತು ಉಂಟೋ ಇಲ್ಲವೋ, ಅದನ್ನೀಂಟಿದವರು ಮರಣವನ್ನು ಗೆಲಿದರೋ ಇಲ್ಲವೋ ನಮ್ಮ ಬಳಿ ದಾಖಲೆಯಿಲ್ಲ. ಆದರೆ ಭಗವದ್ಗೀತೆ, ಬಸವಗೀತೆ, ಬುದ್ಧಗೀತೆ ಮುಂತಾದ ಮಹಾಂತರ ವಚನಾಮೃತ ಕೇಳಿ ಮರಣವ ಗೆಲಿದ ಸಂತ-ಶರಣರ ಉಲ್ಲೇಖಗಳು ಹೇರಳವಾಗಿವೆ. ಅಷ್ಟಲ್ಲದೇ ಹೇಳುವರೇ ದೇವರ ದಾಸಿಮಯ್ಯನವರು ?

ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನ್ನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ
ನಿಮ್ಮನ್ನಿತ್ತೆ ಕಾಣಾ ರಾಮನಾಥ.

ಮಂಡೆ ಮಾಸಿದಾಗ ಅಭ್ಯಂಗನ ಸ್ನಾನ ಮಾಡುವಂತೆ, ವಸ್ತ್ರ ಮಾಸಿದಾಗ ಮಡಿವಾಳನ ಸಹಾಯ ಬಯಸುವಂತೆ, ಮನದ ಮೈಲಿಗೆಯ ತೊಳೆಯಲಿಕ್ಕೆ ಗೀತಾಮೃತದಂತಹ ಜ್ಞಾನವಾಹಿನಿಯು ಬೇಕೇ ಬೇಕು.

★★★★

ಕನ್ನಿಕಾ ಪರಮೇಶ್ವರಿಯ ಬಗ್ಗೆ ಒಂದು ಸ್ಪಷ್ಟೀಕರಣ


ಇತ್ತೀಚೆಗೆ ನಾನು ಚಿಕ್ಕಮಗಳೂರು, ತಿಪಟೂರು, ಅರಸೀಕೆರೆ ಮುಂತಾದಲ್ಲಿ ಪ್ರವಚನ ಮಾಡುತ್ತಲಿರುವಾಗ, ಶ್ರೀ ಆರ್ಯ ವೈಶ್ಯಜನಾಂಗದ ಸಹೃದಯರು ವಿಶ್ವಧರ್ಮ ಪ್ರವಚನಕ್ಕೆ ಬರಲು ಸಂಕೋಚಪಡುವುದು ಗಮನಕ್ಕೆ ಬಂದಿತು. ಆಗ ನಾನು ಕಾರಣವನ್ನರಸಲು ಯತ್ನಿಸಿದಾಗ ತಿಳಿಯಿತು; "ನಾನು ಆರ್ಯ ವೈಶ್ಯರ ಕುಲದೇವತೆ ಶ್ರೀ ಕನ್ನಿಕಾ ಪರಮೇಶ್ವರಿ(ವಾಸವಿ)ಯ ಬಗ್ಗೆ ನಿಂದಾತ್ಮಕ ಮಾತುಗಳನ್ನಾಡಿದ್ದೆನೆಂಬ ತಪ್ಪು ಕಲ್ಪನೆ. ನಿಜಕ್ಕೂ ಆಶ್ಚರ್ಯವೆನಿಸಿತು. ನಾನು ಇಂತು ಮಾತನಾಡಿದ್ದೇನೆಂದು ಬೆಂಗಳೂರಿನ ಒಂದು ಪತ್ರಿಕೆ ವರದಿ ಮಾಡಿತ್ತಂತೆ, ಇದನ್ನು ನಂಬಿ ಸ್ವಭಾವತಃ ಆಧ್ಯಾತ್ಮ ಪಿಪಾಸುಗಳು, ಸಹೃದಯರು, ಸದ್ಭಕ್ತರೂ ಆದ ಶ್ರೀ ಆರ್ಯ ವೈಶ್ಯ ಸಮಾಜದವರು ನೊಂದುಕೊಂಡರೆ ತಪ್ಪೇನು ?

ಶ್ರೀ ವಾಸವಾಂಬೆಯ ಬಗೆಗೆ ನಾನು ಯಾವುದೇ ನಿಂದೆಯ ಮಾತುಗಳನ್ನಾಡಿಲ್ಲ; ಆಡುವುದು ನಮ್ಮ ಮತ್ತು ನಮ್ಮ ಸಂಸ್ಥೆಯ ಧೋರಣೆಗೆ ಸಂಪೂರ್ಣ ವಿರುದ್ಧವಾಗಿದೆ.

ರಾಷ್ಟ್ರೀಯ ಭಾವೈಕ್ಯತೆ, ಹಿಂದೂ ಸಮಾಜ ಸಂಘಟನೆ, ಬಸವ ತತ್ವ ಪ್ರಸಾರ ಮುಂತಾದ ವಿಧಾಯಕ ಗುರಿಯೊಡನೆ ಹೊರಟ ನಮ್ಮ ಘನೋದ್ದೇಶಗಳನ್ನು ಧರ್ಮವಂತರು ಸರಿಯಾಗಿ ಅರಿತುಕೊಳ್ಳಬೇಕು. ಶ್ರೀ ಆರ್ಯ ವೈಶ್ಯ ಸಮಾಜದವರು ಮತ್ತು ಶ್ರೀ ವಾಸವಿ ಮಂಡಳಿಯವರು ಅಲ್ಲಲ್ಲೆ ಅವರ ಸಂಸ್ಥೆಗಳ ಮುಖೇನ ಮಾಡಿರುವ ಧರ್ಮ ಜಾಗೃತಿ ಅಸದೃಶವಾದುದು. ಧರ್ಮ–ದೇವರ ಬಗ್ಗೆ ಅವರು ಒಳ್ಳೆಯ ಶ್ರದ್ಧೆ ಬೆಳೆಸಿದ್ದಾರೆ. ಶ್ರೇಷ್ಠತಮ ತ್ಯಾಗಮೂರ್ತಿ ದಿವ್ಯ ಯೋಗಿಣಿಯಾದ ಶ್ರೀ ವಾಸವಾಂಬೆಯನ್ನು ಸಂಕೇತವಾಗಿಸಿಕೊಂಡಿದ್ದಾರೆ. ಅದ್ದರಿಂದ ನಾನು ಆ ಪೂಜ್ಯ ವಿಭೂತಿಯನ್ನು ನಿಂದಿಸಿರುವೆನೆಂಬ ತಪ್ಪು ಕಲ್ಪನೆಯನ್ನು ತೆಗೆದು ಹಾಕಬೇಕೆಂದು ಅವರಿಗೆ ಕಳಕಳಿಯಿಂದ ತಿಳಿಸ ಬಯಸುವೆ.

ಮಾತಾಜಿ

Digitalized by e-Sahithya Documentation Forum
Sponsored by Sarayu Foundation Trust



ಮಹಾ ಮಾನವತಾವಾದಿ ಡಾ|| ಮೋದಿ

— ಗೊ. ರು. ಚನ್ನಬಸಪ್ಪ

"ಕಣ್ಣಿಂದ ಅಭಿವ್ಯಕ್ತಿ, ನಾ ವ್ಯಕ್ತಿ, ನೀ ವ್ಯಕ್ತಿ ;
ಕಣ್ಣು ತೆರೆದರೆ ಜಗವೆ ತನ್ನೆದೆಯ ತೆರೆದೀತು !"

ನಿಜ; ಕಣ್ಣಿಲ್ಲದಿದ್ದರೆ ಜಗತ್ತು ಶೂನ್ಯ ; ಕತ್ತಲೆಯ ಗವಿ. ಪಂಚೇಂದ್ರಿಯಗಳಲ್ಲಿ ಪ್ರಧಾನ ಕಣ್ಣು. ಕಣ್ಣಿನಲ್ಲಿ ಏನಿಲ್ಲ ? ಕಣ್ಣಿದ್ದರೆ ಏನೆಲ್ಲ ; ಕಣ್ಣೇ ಎಲ್ಲ !

ಕಾಮ–ಪ್ರೇಮ, ರೂಪ–ಸ್ವರೂಪ, ಮಾತು–ಮಾಟ, ಸ್ನೇಹ–ಮೋಹ, ಭಕ್ತಿ–ವಿರಕ್ತಿ, ಸಾಧನೆ–ಸಿದ್ಧಿ, ವಿಧಿ–ನಿಷೇಧ, ಬಯಕೆ–ಪೂರೈಕೆ,–ಎಲ್ಲಕ್ಕೂ ಕಣ್ಣೇ ಮೂಲ. ಕಣ್ಣಿನಿಂದ ದೃಷ್ಟಿ. ದೃಷ್ಟಿಯಿಂದ ದೇವರ ದರ್ಶನ. ಸೃಷ್ಟಿ ದೇವರ ದಾನ. ದೃಷ್ಟಿಯೂ ಅಷ್ಟೆ. ಆದ್ದರಿಂದ ದೃಷ್ಟಿಯೇ ದೇವರು.

ಮಾನವ ಜೀವನದ ಪಯಣ ಗೀತೆಗೆ ಕಣ್ಣೇ ಪಲ್ಲವಿ. ಕಣ್ತೆರೆದು ನಡೆಯದಿದ್ದರೆ ಪಯಣ ಸಾಗದು ; ಗುರಿ ಸೇರಲಾಗದು. ಬದುಕು ಕೆಡುತ್ತದೆ ; ಸೃಷ್ಟಿಯ ಬೆಡಗು ಬರಿಯ ಕನಸಾಗುತ್ತದೆ. ಸೃಷ್ಟಿ ದರ್ಶನ ಒಂದು ಅಸಾಮಾನ್ಯ ಭಾಗ್ಯ. ಅದು ದೃಷ್ಟಿಯಿಂದ ಮಾತ್ರ ಸಾಧ್ಯ, ಆ ದೃಷ್ಟಿ ಸೃಷ್ಟಿಯಷ್ಟೇ ಘನ. ಬಾಳಿಗೆ ನೇತ್ರವೇ ಸೂತ್ರ.

ಕಣ್ಣನ್ನು '**ಲೋಕ ಕಾರಣ**' ಎಂದಿದ್ದಾನೆ ಸರ್ವಜ್ಞ. ದೃಷ್ಟಿಯನ್ನು ಒಂದು ಯೋಗವೆಂದಿದ್ದಾರೆ ಶರಣರು. ಶಿವಯೋಗದಲ್ಲಿ ಬರುವ '**ಶಾಂಭವೀ ಮುದ್ರೆ**' ದೃಷ್ಟಿಯೋಗದ ಸ್ಪಷ್ಟ ಸ್ಥಿತಿ. '**ಕರಸ್ಥಲದಲ್ಲಿರ್ಪ ಲಿಂಗವ ನೋಡಿ ನೋಡಿ ಕಂಗಳೇ ಪ್ರಾಣವಾಗಿರ್ದೆನಯ್ಯಾ**' ಎನ್ನುವುದು ಅಕ್ಕನ ವಾಣಿ. '**ಕಂಗಳ ಕೊನೆಯ ಮನೆಯಲ್ಲಿ ಕಾಣುವುದು ಲಿಂಗ ತಾನೇ ಅಯ್ಯಾ**' ಎನ್ನುತ್ತಾರೆ ತೋಂಟದ ಸಿದ್ಧಲಿಂಗ ಯತಿಗಳು.

ಇಂತಹ ಪರಮ ಸೂತ್ರವಾದ ದೃಷ್ಟಿದಾನದ ಮಹಾ ಕಾಯಕಯೋಗಿ, ಸಮಷ್ಟಿ ಸೇವೆಯ ಸವ್ಯಸಾಚಿ ಡಾ|| ಮುರಿಗಪ್ಪ ಚನ್ನವೀರಪ್ಪ ಮೋದಿ !

ಹುಟ್ಟಿದುದು ಕನ್ನಡದ ಗಂಡು ಮೆಟ್ಟಿನ ನೆಲದಲ್ಲಿ. ರೈತ ಕುಟುಂಬ. ಬಡತನವೇ ಮನೆತುಂಬ. ಮೋದಿ ಅವರನ್ನು ಮಹಾಮಾನವತೆಗೆ ಏರಿಸಿದುದು ಆ ಬಡತನವೇ ಎಂದರೆ ಬಹಳ ಜನರಿಗೆ ಸೋಜಿಗವೆನಿಸಬಹುದು.

ಬಾಲಕ ಮೋದಿ ಬಡತನದ ಬೇಗೆಯಲ್ಲಿ ಎಷ್ಟೋ ವೇಳೆ ಹಸಿದಿದ್ದಾಗ ಕಣ್ಣಿಗೆ ಕತ್ತಲೆ ಕವಿಯುತ್ತಿತ್ತು; ಆ ತಾತ್ಕಾಲಿಕ ಕತ್ತಲೆಯ ಅನುಭವ ಬಾಲಕ ಮೋದಿಯ ಮೇಲೆ ಮಾಡಿದ ಪರಿಣಾಮ ಅದ್ಭುತ. 'ಹಾಗಾದರೆ ಶಾಶ್ವತ ಕುರುಡರ ಗತಿಯೇನು ?' ಆ ಎಳೆಯ ಹೃದಯದಲ್ಲಿ ಸೇವೆಯ ಬೀಜದ ಅಂಕುರ !

೧೯೪೦ ರಲ್ಲಿ ಮೋದಿ 'ಭಿಷಗ್‌ರತ್ನ' ಆಯುರ್ವೇದ ಪದವೀಧರ. ನಂತರ ಮುಂಬಯಿಯಲ್ಲಿ ಸ್ನಾತಕೋತ್ತರ ತರಬೇತಿ. ತರಬೇತಿಯ ಅವಧಿಯಲ್ಲೇ ವಿಶಿಷ್ಟ ಸಾಧನೆಯ ಕೀರ್ತಿ. ಜೊತೆಯ ಒಂಭತ್ತು ಜನ ವೈದ್ಯರು ನಡೆಸಿದ ಒಟ್ಟು ಶಸ್ತ್ರ ಚಿಕಿತ್ಸೆಗಳಿಗೆ ಮೋದಿ ಒಬ್ಬರೇ ನಡೆಸಿದ ಶಸ್ತ್ರ ಚಿಕಿತ್ಸೆಗಳ ಸಂಖ್ಯೆ ಸಮ !

೧೯೪೩ ರಲ್ಲಿ ನೇತ್ರ ಚಿಕಿತ್ಸೆ ಶಿಬಿರ ಸೇವೆಯ ಆರಂಭ. ಸೌರಾಷ್ಟ್ರದ ರತ್ನ ಎಂಬಲ್ಲಿ ಮೊದಲ ಶಿಬಿರ. ನಡೆದ ಶಸ್ತ್ರ ಚಿಕಿತ್ಸೆ ಐನೂರು. ಆ ವರ್ಷವೇ ಮುಂಬಯಿಯಲ್ಲಿ ಖಾಸಗಿ ಚಿಕಿತ್ಸಾಲಯದ ಆರಂಭ. ೧೯೪೯ ರಲ್ಲಿ ಅಮೇರಿಕಕ್ಕೆ ಪ್ರಯಾಣ. ನೇತ್ರ ವೈದ್ಯದಲ್ಲಿ ಹೆಚ್ಚಿನ ಅನುಭವ ಗಳಿಸುವ ಕಾರಣ.

ರಾಷ್ಟ್ರಪಿತ ಗಾಂಧೀಜಿ ಅವರಿಂದ ಪ್ರಭಾವಿತರಾದವರು ಹಲವರು. ಪರಿಣಾಮಗೊಂಡವರು ಕೆಲವೇ ಕೆಲವರು. ಅಂತಹ 'ಅಲ್ಪಸಂಖ್ಯಾತರಲ್ಲಿ ಒಬ್ಬರು, ಡಾ|| ಮೋದಿ; ಅಚ್ಚ ಗಾಂಧಿವಾದಿ !

Digitalized by e-Sahithya Documentation Forum
Sponsored by Sarayu Foundation Trust

ವೈದ್ಯಕೀಯ ಸೌಲಭ್ಯ, ಪೌಷ್ಟಿಕ ಆಹಾರ, ನಿರ್ಮಲ ಪರಿಸರಗಳ ಕೊರತೆಯಿಂದ ನರಳುವ ಲಕ್ಷಾಂತರ ದೇಶೀಯ ಬಂಧುಗಳ ದಾರುಣ ವ್ಯಥೆಯ ಪ್ರಜ್ಞೆ. ಆಸ್ಪತ್ರೆಗೆ ಹೋಗಲಾಗದ ಬಡ ಕಣ್ಣು ರೋಗಿಗಳ ಬಗ್ಗೆ ಅನುಕಂಪ. ಆಸ್ಪತ್ರೆಯನ್ನೇ ರೋಗಿಗಳ ಬಳಿಗೆ ಕೊಂಡೊಯ್ಯುವ ಸಂಕಲ್ಪ !

ಡಾ॥ ಮೋದಿಯವರ ಆರಂಭದ ಹಾದಿ ಸುಗುಮವಾಗೇನೂ ಇರಲಿಲ್ಲ. ಅವರ ನೇತ್ರ ಚಿಕಿತ್ಸೆ ಶಿಬಿರ ಸೇವೆಯನ್ನು ಕಂಡು ಸಂತೋಷಪಟ್ಟವರಿಗಿಂತ ಸಂಶಯಪಟ್ಟವರೇ ಹೆಚ್ಚು. 'ಕುರುಡರೇನೋ ನಂಬಬಹುದು (ಕುರುಡು ನಂಬಿಕೆ !) ; ನಾವು ಕಣ್ಣಿದ್ದವರು ನಂಬಲಾದೀತೆ ?' ಎಂದು ಪ್ರಶ್ನಿಸಿದವರುಂಟು. 'ನಕಲಿ ವೈದ್ಯ,' 'ಅಳಲೆಕಾಯಿ ಪಂಡಿತ,' 'ಕನ್ನಡಕದ ವ್ಯಾಪಾರಿ' – ಇವೆಲ್ಲ ಕೆಲವು ವೃತ್ತಿ 'ಬಲ್ಲಿದ' ರು ಆಗ ಕೊಟ್ಟ 'ಬಿರುದು' ಗಳು ! ಆ 'ಬಿರುದು' ಗಳ ಸುರಿಮಳೆ ಡಾ॥ ಮೋದಿಯವರ ಸೇವೆಯನ್ನೇನೂ ನಿಲ್ಲಿಸಲಾಗಲಿಲ್ಲ ! ಅವರದು ಇನ್ನೊಬ್ಬರನ್ನು ನಂಬಿಸಲು ಕೈಗೊಂಡ ಕಾಯಕವಲ್ಲ ; ಆತ್ಮ ಸಾಕ್ಷಿಗಾಗಿ ಕೈಗೊಂಡ ಕಾಯಕ.

ನಮ್ಮ ಕೆಲವು ವೃತ್ತಿ ಬಂಧುಗಳ ಅಣಕ ನಿಂತದ್ದು–ಅಮೇರಿಕಾದ ರೊಟೇರಿಯನ್ನರು, "ಅಮೇರಿಕಾದಲ್ಲಿ ಅಬ್ರಹಾಂ ಲಿಂಕನ್, ಭಾರತದಲ್ಲಿ ಮೋದಿ" ಎಂದು ಕರೆದಾಗ: ಅಂತರ ರಾಷ್ಟ್ರೀಯ ಲಯನ್ಸ್ ಸಂಸ್ಥೆಯವರು "Saint of the Sightless" (ದೃಷ್ಟಿರಹಿತರ ಸಂತ) ಎಂದಾಗ : ಅಮೇರಿಕಾದ ನ್ಯೂಸ್ ವೀಕ್ ಪತ್ರಿಕೆ "India's Cataract King" (ಭಾರತದ ಕಣ್ಣಪೊರೆಯ ದೊರೆ) ಎಂದು ಉಲ್ಲೇಖಿಸಿದಾಗ.

ಡಾ॥ ಮೋದಿ ಅವರ ದೃಷ್ಟಿದಾನದ ಕಾಯಕ ಮೂರೂವರೆ ದಶಕದಿಂದ ನಡೆದಿದೆ. ಅವರ ಅಮೃತ ಹಸ್ತದ ಸ್ಪರ್ಶ ಪಡೆದ, ಅವರ ಕಾರುಣ್ಯದ ದೃಷ್ಟಿ ಕಂಡ ಕಣ್ಣುಗಳ ಸಂಖ್ಯೆ ೮೦ ಲಕ್ಷಕ್ಕೂ ಮಿಗಿಲು ! ನೇತ್ರ ಶಸ್ತ್ರಚಿಕಿತ್ಸೆಗಳ ಸಂಖ್ಯೆಯೇ ೪ ಲಕ್ಷದ ಗಡಿ ದಾಟಿದೆ ! ಒಂದೇ ದಿನದಲ್ಲಿ ೮೩೩ ಶಸ್ತ್ರಚಿಕಿತ್ಸೆ ನಡೆಸಿ ವಿಶ್ವ ದಾಖಲೆ ಸ್ಥಾಪಿಸಿದ ಅದ್ಭುತ ವೈದ್ಯ ಡಾ॥ ಮೋದಿ ! ಚಿಕಿತ್ಸೆಯ ಫಲಿತಾಂಶ ಖಚಿತ ; ಸೇವೆಯೆಲ್ಲ ಉಚಿತ!

ಇಷ್ಟೆಲ್ಲ ಆದರೂ, ಡಾ॥ ಮೋದಿ ಅತ್ಯಂತ ಸರಳ ಜೀವಿ. ಸದುವಿನಯ ಅವರ ಶೀಲ. 'ಮಾಡಿದೆನೆಂಬುದು ಮನದಲ್ಲಿ ಹೊಳೆಯದ, ಸುಳಿಯದ' ನಿರ್ಲಿಪ್ತತೆ. ಹಗಲಿರುಳೆನ್ನದ ದುಡಿಮೆ; ಮಾತಿಗಿಂತ ಮೌನಕ್ಕೆ ಹಿರಿಮೆ. ಕೃತಿಯೇ ಮಾತು !

ಹ್ಯಾರಿ ಡೇವಿಡ್ ಎಂಬುವರು ಒಮ್ಮೆ, "ಎಲ್ಲಿಯವರೆಗೆ ನೀವು ಹೀಗೆ ಸೇವೆ ಸಲ್ಲಿಸಲು ಸಾಧ್ಯ?" ಎಂದು ಕೇಳಿದಾಗ, ಡಾ॥ ಮೋದಿ ಅವರಿಂದ ಬಂದ ಉತ್ತರ: **"ನನ್ನ ಕೈಗಳು ಭಗವಂತ ಕೊಟ್ಟದಾನ. ನಾನು ಕೇವಲ ಅವನ ಸಾಧನ. ನಾನು ಮರಣ ಹೊಂದಿದರೂ ನನ್ನ ಕೈಗೆ ಶಸ್ತ್ರಚಿಕಿತ್ಸೆಯ ಚಾಕು ಕೊಟ್ಟರೆ ಮತ್ತೆ ಜೀವಂತನಾಗುತ್ತೇನೆ !"**

ನೇತ್ರ ಚಿಕಿತ್ಸೆಯಲ್ಲಿ, ಇಂದು ಡಾ॥ ಮೋದಿ ಇಡೀ ವಿಶ್ವದಲ್ಲಿ ಮೊದಲ ಹೆಸರು. ಅವರು ಮಾಡಿರುವಷ್ಟು ಶಸ್ತ್ರಚಿಕಿತ್ಸೆಗಳನ್ನು ಇಡೀ ಜಗತ್ತಿನಲ್ಲಿ ಬೇರಾವ ಶಸ್ತ್ರವೈದ್ಯನೂ ತನ್ನ ಜೀವನದ ಅವಧಿಯಲ್ಲಿ ಮಾಡಿಲ್ಲ. ಶಸ್ತ್ರಚಿಕಿತ್ಸೆ ಮಾಡುವ ಅವರ ಕೈಗಳಲ್ಲಿ ಏನೋ ಮಂತ್ರಶಕ್ತಿಯಿದೆ; ಶಸ್ತ್ರಚಿಕಿತ್ಸೆ ನಡೆಸುವ ರೀತಿ ಒಂದು ಪವಾಡವೋ ಎಂದೆನಿಸುತ್ತದೆ !

ಹುಟ್ಟಿದ ನೆಲದ ಸೇವೆ ಸಲ್ಲಿಸುವ ಕರ್ತವ್ಯ ದೀಕ್ಷೆ. ರೋಗಿಗಳ ಅಭಿಮಾನವೇ ದಿವ್ಯ ರಕ್ಷೆ. ಅವರ ಸಂಚಾರೀ ನೇತ್ರಚಿಕಿತ್ಸೆಯ ಆಸ್ಪತ್ರೆಯ ಚಕ್ರಗಳು ಇಡೀ ವರ್ಷ ತಿರುಗುತ್ತಿರುತ್ತವೆ. '**ದುಡಿಮೆ**' ಗೆ ಮೊದಲ ಸ್ಥಾನವಿರುವ ಅವರ ಶಬ್ದಕೋಶದಲ್ಲಿ '**ಬಿಡುವಿ**' ಗೆ ಸ್ಥಾನವೇ ಇಲ್ಲ,

ಪಾಶ್ಚಿಮಾತ್ಯ ತಜ್ಞ ವೈದ್ಯರೊಬ್ಬರು ಹೇಳುವಂತೆ, ಡಾ॥ಮೋದಿ- "Surgeon with lions heart, lady's fingers, eagle's eyes and mother's love" (ಸಿಂಹದ ಹೃದಯ, ಹೆಣ್ಣಿನ ಬೆರಳು, ಹದ್ದಿನ ಕಣ್ಣು ಮತ್ತು ತಾಯಿಯ ಪ್ರೇಮವುಳ್ಳ ಶಸ್ತ್ರವೈದ್ಯ). ರೋಗಿಗಳ ಬಗ್ಗೆ ಅಪಾರ ಅಂತಃಕರುಣೆ. ಬಡವ ಬಲ್ಲಿದರೆನ್ನದ ಸಮ ದೃಷ್ಟಿ.

ಅವರಿಗೆ 'ಶಸ್ತ್ರಚಿಕಿತ್ಸೆ ನಡೆಯುವ ಕೊಠಡಿಯೇ ದೇವಾಲಯ. ರೋಗಿಯೇ ದೇವರು. ಶಸ್ತ್ರಚಿಕಿತ್ಸೆಯ ಸಾದನ ಸಲಕರಣೆಗಳೇ ಗಂಟೆ ಜಾಗಟೆಗಳು. ರೋಗಿಯೊಡನೆ ಆಡುವ ಮಾತೇ ಮಂತ್ರ ; ನಡೆಸುವ ಚಿಕಿತ್ಸೆಯೇ ನೈವೇದ್ಯ ; ರೋಗಿಯ ನಗುವೇ ಪ್ರಸಾದ!'

ಡಾ॥ ಮೋದಿ ಅವರದು ಇತಿಹಾಸ ಮರೆಯಲಾಗದ ಸೇವೆ. ಅವರ ನೇತ್ರ ಚಿಕಿತ್ಸಾ ಶಿಬಿರಗಳಲ್ಲಿ ದೃಷ್ಟಿದಾನದ ಜೊತೆಗೆ ಅನ್ನದಾನವೂ ನಡೆಯುತ್ತದೆ. ರೋಗಿಗಳ ಜೊತೆಗೆ ಅವರನ್ನು ನೋಡಿಕೊಳ್ಳುವವರಿಗೂ ಉಚಿತ ಊಟ–ವಸತಿ. ದಲಿತ ವರ್ಗಕ್ಕಂತೂ '**ಮೋದಿ ಶಿಬಿರ**' ವರಪ್ರದಾನ !

ಡಾ॥ ಮೋದಿ ಕೈಗೊಂಡಿರುವ ಮಹಾ ಕಾರ್ಯಕ್ಕೆ ಸಾವಿರ ಕೈಗಳಾದರೂ ಸಾಲದು. ಕಣ್ಣು ಕೊಡುವ ಈ ಪುಣ್ಯದ ಕೆಲಸಕ್ಕೆ ಎಲ್ಲ ಜನರೂ ಮುಂದಾಗಬೇಕು. ಉಳ್ಳವರಂತೂ ಈ ಸೇವೆಗೆ ಮೊದಲ ಸಾಲಿನಲ್ಲಿ ನಿಲ್ಲಬೇಕು. ಡಾ॥ ಮೋದಿ ಅವರ ಸಾರ್ವಜನಿಕ ಟ್ರಸ್ಟ್‌ಗೆ ಕೊಡುವ ಕಾಣಿಕೆಗೆ ತೆರಿಗೆಯ ವಿನಾಯಿತಿಯಿದೆ.

ಭಾರತದಲ್ಲಿ ಉಚಿತ ಸಂಚಾರಿ ಕಣ್ಣಾಸ್ಪತ್ರೆ ಸ್ಥಾಪಿಸಿದ ಮೊದಲಿಗರು ಡಾ॥ ಮೋದಿ. ಭಾರತೀಯ ಸೇವಾದಳದ ಅಧ್ಯಕ್ಷರಾಗಿ, ರೋಟರಿ ಲಯನ್ಸ್ ಸದಸ್ಯರಾಗಿ ಅವರದು

Digitalized by e-Sahithya Documentation Forum
Sponsored by Sarayu Foundation Trust

ಅಚಲ ಸೇವಾ ನಿಷ್ಠೆ.

ಡಾ|| ಮೋದಿ ಅವರ ಸಂಚಾರೀ ನೇತ್ರ ಚಿಕಿತ್ಸೆಯ ಘಟಕ ಇಡೀ ವಿಶ್ವದಲ್ಲೇ ದೊಡ್ಡದು. ವಿಶ್ವದ ಅನೇಕ ರಾಷ್ಟ್ರಗಳಿಗೆ ಅದು ಮಾರ್ಗದರ್ಶಕ. ಸಂಪರ್ಕವಿರುವ ಅಂತರ ರಾಷ್ಟ್ರೀಯ ಸಂಘ ಸಂಸ್ಥೆಗಳು ಅನೇಕ.

ಜನಸೇವೆಗಾಗಿ ಇದುವರೆಗೆ ಸಂಘಟಿಸಿರುವ ಅಮೂಲ್ಯ ಆಸ್ತಿಯೆಲ್ಲ ಡಾ|| ಮೋದಿ ಅವರ ಸಾರ್ವಜನಿಕ ಟ್ರಸ್ಟ್. ಆ ಟ್ರಸ್ಟಿನ ದಾಖಲೆಯ ಮಾತುಗಳು ಹೃದಯ ಸ್ಪರ್ಶಿ :

"ಜೀವನ ಅಶಾಶ್ವತ. ಆದರೆ ಸಾವು ನಿಶ್ಚಿತ. ನನ್ನ ಬದುಕಿನ ಪಯಣ ಯಾವ ಗಳಿಗೆಯಲ್ಲಾದರೂ ಮುಗಿದು, ನಾನು ಈ ಜಗತ್ತನ್ನು ಬಿಡಬೇಕಾಗಬಹುದು. ಆದುದರಿಂದ ಡಾ|| ಎಂ. ಸಿ. ಮೋದಿಯಾದ ನಾನು ನನ್ನ ಜೀವನದ ಅವಧಿಯಲ್ಲಿ ಮತ್ತು ಮರಣದ ನಂತರ, ದೇಶಕ್ಕೆ ಮತ್ತು ಮಾನವ ಕುಲಕ್ಕೆ ಉಪಯುಕ್ತವಾಗುವಂತಹ ಹಿತಸಾಧನೆಯ ಸೇವೆಗಾಗಿ ಒಂದು ಸಾರ್ವಜನಿಕ ಟ್ರಸ್ಟ್ ರಚಿಸಲು ಇಚ್ಛಿಸುತ್ತೇನೆ. ಈ ವಿಶ್ವದ ಓರ್ವ ನಾಗರಿಕನಾಗಿ ಅದು ನನ್ನ ಕರ್ತವ್ಯ, ಹೊಣೆಗಾರಿಕೆ ಮತ್ತು ಸಲ್ಲಿಸಬೇಕಾದ ಋಣವೆಂದು ಭಾವಿಸಿದ್ದೇನೆ.

ಮಾನವ ಜನಾಂಗಕ್ಕೆ ಈ ನನ್ನ ಅಲ್ಪ ಕಾಣಿಕೆ ಕಿಂಚಿತ್ತಾದರೂ ಸಹಾಯವಾದರೆ ಅದೇ ನನ್ನ ಆತ್ಮಕ್ಕೆ ಶಾಂತಿ. ಆದುದರಿಂದ ನನ್ನ ಉಚಿತ ನೇತ್ರ ಚಿಕಿತ್ಸೆ ಆಸ್ಪತ್ರೆಗಳನ್ನು ನನ್ನ ಮರಣಾನಂತರವೂ ದೇಶಕ್ಕೆ ಮತ್ತು ಮಾನವ ಜನಾಂಗಕ್ಕೆ ಸೇವೆ ಸಲ್ಲಿಸಿಕೊಂಡು ಹೋಗುವ ಸಾರ್ವಜನಿಕ ಟ್ರಸ್ಟ್ ಆಗಿ ಅರ್ಪಿಸುತ್ತೇನೆ. ಈ ವಿಶ್ವಸ್ಥ ಆಸ್ತಿಯ ಹಾಗೂ ಅದರ ಉದ್ದೇಶ ನಿರ್ವಹಣೆಗಾಗಿ ಧರ್ಮದರ್ಶಿಗಳಿರುತ್ತಾರೆ.

ನನ್ನ ಮೃತ ಶರೀರವನ್ನು ವೈದ್ಯಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳಬಹುದು. ನನ್ನ ಮರಣಾನಂತರ ನನ್ನ ಕಣ್ಣು ಮತ್ತಿತರ ಅಂಗಾಂಗಗಳನ್ನು ಅಗತ್ಯವಿರುವ ಯಾವುದೇ ಜೀವಂತ ವ್ಯಕ್ತಿಗೆ ಜೋಡಿಸಬಹುದು. ನನ್ನ ಮರಣಾನಂತರ ನನ್ನ ಎರಡು ಕಣ್ಣುಗಳನ್ನೂ 'ಕಣ್ಣಿನ ಬ್ಯಾಂಕಿ' ನಲ್ಲಿಟ್ಟು ಕಣ್ಣಿಲ್ಲದ ವ್ಯಕ್ತಿಗಳಿಗೆ ಬಳಸಬಹುದು. ಉಪಯುಕ್ತ ಅಂಗಾಂಗಗಳನ್ನು ತೆಗೆದ ಮೇಲೆ ನನ್ನ ಮೃತ ದೇಹವು ಉಪಯೋಗಕ್ಕೆ ಬರದಿದ್ದಲ್ಲಿ ಅದನ್ನು ಬೇರಾರಿಗೂ ತೊಂದರೆ ಅಥವಾ ಹೊರೆಯಾಗದ ರೀತಿಯಲ್ಲಿ ಅಂತ್ಯ ಸಂಸ್ಕಾರ ನಡೆಸಬಹುದು.

ಈ ಸಾರ್ವಜನಿಕ ಟ್ರಸ್ಟಿನ ಧ್ಯೇಯ : "**ಮಾನವತೆ ಮತ್ತು ದೇಶಸೇವೆ !**"

ಇದು ಶರಣರು ಹೇಳುವ 'ಇಲ್ಲಿ–ಅಲ್ಲಿ ಸಲ್ಲುವ' ಬಗೆ! ಅದ್ಭುತ ಸೃಷ್ಟಿಯೆನಿಸಿರುವ ಮಾನವನ ಬದುಕಿಗೆ ಮೋದಿ ಅವರ ಟ್ರಸ್ಟ್ ಒಂದು ಶಾಸನ !

ಡಾ|| ಮೋದಿ ಅವರ ಶಸ್ತ್ರಚಿಕಿತ್ಸೆಯ ಹಸ್ತ ಕುಶಲತೆ ಅನನ್ಯ ! ಪ್ರತ್ಯಕ್ಷ ಕಂಡಿರುವ ಅಮೇರಿಕಾ ಇವರನ್ನು 'ನೇತ್ರಶಸ್ತ್ರ ಚಿಕಿತ್ಸಾ ಶಿಲ್ಪಿ' ಎಂದು ಕರೆದರೆ, ರಷ್ಯ 'ನೇತ್ರಶಸ್ತ್ರಚಿಕಿತ್ಸೆಯ ರಾಜ' ಎಂದು ಕರೆದಿದೆ. ಇಂತಹ ಮೇಧಾವಿಯನ್ನು ಪಡೆದಿರುವುದು ಭಾರತದ ಪುಣ್ಯ ; ಕನ್ನಡಿಗರ ಹೆಮ್ಮೆ. ವಿಶ್ವ ಪ್ರಸಿದ್ಧ ಸಾಮಾಜಿಕ ಸೇವಾ ಕರ್ತೆ ಮಿಸ್‌ಹೆಲನ್ ಕೆಲರ್, ಡಾ|| ಮೋದಿ ಅವರನ್ನು "**ನಿಸ್ವಾರ್ಥ ಸೇವೆಯ ಮೂಲಕ ಕತ್ತಲೆಯನ್ನು ಕಳೆಯುವ ಬೆಳಕು**" ಎಂದು ಕರೆಯುವುದು ಎಷ್ಟೊಂದು ಅರ್ಥಪೂರ್ಣ? ಭಾರತಕ್ಕಂತೂ ಡಾ|| ಮೋದಿ '**ಕಣ್ಣು ಕೊಡುವ ಅಣ್ಣ!**

ಡಾ|| ಮೋದಿ ಅವರ ವಿಶ್ವಮನ್ನಣೆಗೆ ಜಗತ್ತಿನ ಅನೇಕ ನಾಯಕರು ಹಾಗೂ ಪ್ರಮುಖ ಪತ್ರಿಕೆಗಳು ಬಳಸಿರುವ ಈ ಅಭಿಮಾನದ ಕೆಲವು ನುಡಿಗಳು ಸಾಕು :

ದೇಶ ಸೇವೆಗೆ ಬಂದ ಮಾಂತ್ರಿಕ, ನಿಷ್ಕಾಮ ಕರ್ಮಯೋಗಿ, ಶ್ರೇಷ್ಠ ದೇಶಭಕ್ತ, ಸಮರ್ಪಣ ಭಾವದ ಸಾರ್ವಜನಿಕ ವ್ಯಕ್ತಿ, ವೈದ್ಯಕೀಯ ಕಲಾವಿದ, ಸ್ಪೂಟ್ನಿಕ್ ವೇಗದ ನೇತ್ರ ಶಸ್ತ್ರವೈದ್ಯ, ಸಾಮಾನ್ಯ ಜನರ ಮನುಷ್ಯ, ಪವಾಡ ಪುರುಷ, ದೃಷ್ಟಿರಹಿತರ ಸಂತ, ಸಾಮೂಹಿಕ ಶಸ್ತ್ರಚಿಕಿತ್ಸೆಯ ನಾಯಕ, ಆಧ್ಯಾತ್ಮಿಕ ವೈದ್ಯ, ಕ್ರಾಂತಿಕಾರಿ, ಅಂಧತ್ವದ ವಿರುದ್ಧ ಯುದ್ಧ ಸಾರಿದ ವೀರ, ಶಸ್ತ್ರಚಿಕಿತ್ಸೆಯ ಚಾಕು ಹಿಡಿದ ಮಂತ್ರವಾದಿ, ಪ್ರಾಮಾಣಿಕ ತತ್ವಜ್ಞಾನಿ, ಚರಿತಾರ್ಥ ವ್ಯಕ್ತಿ, ಆಜನ್ಮ ವೈದ್ಯ, ವೈದ್ಯಕೀಯ ಸೇವೆಯ ಹರಿಕಾರ, ಕುರುಡರ ಬಾಳಿನ ಬೆಳಕು, ಮಹಾವ್ಯಕ್ತಿ, ಮಹಾಮಾನವತಾವಾದಿ"

— ಹೀಗೆ ಒಂದೆರಡಲ್ಲ ; ಯಾವ ಮಾತಯ ಹೆಚ್ಚಿಲ್ಲ ?

ಅಹುದು; ಡಾ|| ಮೋದಿ ಮಹಾ ಮಾನವತಾವಾದಿ ! ಶುದ್ಧ ಆಧ್ಯಾತ್ಮ ಜೀವಿ. ಲಕ್ಷಾಂತರ ಕುರುಡರಿಗೆ ದೃಷ್ಟಿ ದಾನ ಮಾಡಿದ್ದರೂ "**ನಾನೂ ಒಬ್ಬ ಅಂಧ, ಭಗವಂತನೊಬ್ಬನೇ ವೈದ್ಯ**" ಎನ್ನುವ ಕಿಂಕರತ್ವ. ಹೊರಗಣ್ಣು ಕೊಡುವುದು ತಮ್ಮಿಂದ ಸಾಧ್ಯವಾಗಬಹುದಾದರೂ, ಒಳಗಣ್ಣು ಕೊಡುವವನು ಭಗವಂತನೊಬ್ಬನೇ ಎಂಬುದು ಅವರ ಮಾತಿನ ಅಂತರಂಗ. ಡಾ|| ಮೋದಿ ಅವರ ಬಾಳಿನ ಪರಮ ಧ್ಯೇಯ :

"**ಒಳ್ಳೆಯದನ್ನು ಮಾಡು ; ಬಳಿಕ ಈ ಜಗತ್ತಿನಿಂದ ಮೌನವಾಗಿ ಮರೆಯಾಗು.**"

ಪರ್ಷಿಯಾದ ಮಹಾಕವಿ ಷಾದಿ ಹೇಳುವ ಮಾತೊಂದಿದೆ. "**ನೀನು ಈ ಜಗತ್ತಿಗೆ ಬರುವಾಗ ಅಳುತ್ತ ಬಂದೆ; ಜಗತ್ತೆಲ್ಲ ನಗುತ್ತಿತ್ತು. ನೀನು ಈ ಜಗತ್ತನ್ನು ಬಿಡುವಾಗ ನಗುತ್ತ ಹೋಗು ; ಜಗತ್ತೆಲ್ಲ ನಿನಗಾಗಿ ಅಳುತ್ತಿರಲಿ**" :— ನಮ್ಮ ನೇತ್ರದಾನಿಗೆ ಈ ಮಾತು ಸೂತ್ರ !

———

Digitalized by e-Sahithya Documentation Forum
Sponsored by Sarayu Foundation Trust

ಕಲ್ಪತರುವಿನ ಕಮನೀಯ ನಾಡಿನಲ್ಲಿ

ವಿಶ್ವಧರ್ಮ ಪ್ರವಚನದ ಮಂದ ಮಾರುತ ಸಂಚಾರ

—ಎಸ್. ಪಾಟೀಲ, ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ

ಕೇಸರಿ ಮಿಶ್ರಿತ ಹಾಲಿನಂತಹ ಕೆಂಬಣ್ಣದ ನೀರನ್ನು ಒಡಲಲ್ಲಿ ತುಂಬಿಕೊಂಡು ಕೋಡಿ ಹರಿಸುವ ಕೆರೆ ಕಟ್ಟೆಗಳು, ನಳನಳಿಸುವ ಪೈರು, ಹಸಿರು ಬಣ್ಣದ ಗರಿ ಹಿಡಿದು ಚಾಮರ ಬೀಸಿ ಸ್ವಾಗತಿಸುವ ತೆಂಗಿನ ತೋಟಗಳು, ಸಿಹಿಯಾದ ನೀರನ್ನಿತ್ತು ತಣಿಸುವ ನಾರಿಕೇಳ ವೃಕ್ಷಗಳು-ಪ್ರಕೃತಿಯ ಬೆಸಲಾಗಿ ನಿಂತಂತಿತ್ತು ಕಲ್ಪತರುವಿನ ನಾಡಿನಲ್ಲಿ.

ಭೌತಿಕ ಕೆರೆಗಳಷ್ಟೇ ತುಂಬಿದರೆ ಸಾಲದೆಂದು ಅರಿವಿನ ಕೆರೆಯನ್ನೂ ತುಂಬಿಸಲು, ಪ್ರವಚನದ ಮೇಘಗಳಲ್ಲಿ ಜ್ಞಾನದ ನೀರನ್ನು ಹೊತ್ತು ಸಾಗಿ, ಹಸಿದ ಆಧ್ಯಾತ್ಮ ಪಿಪಾಸುಗಳ ಹೃದಯಗಳಿಗೆ ಧಾರೈಸಲು ಸಂಕಲ್ಪಿಸಿದರು ಪೂಜ್ಯರಾದ ಶ್ರೀ ಜಗದ್ಗುರು ಮಾತಾಜಿಯವರು ಮತ್ತು ಪೂಜ್ಯರಾದ ಸದ್ಗುರು ಲಿಂಗಾನಂದ ಸ್ವಾಮಿಗಳವರು. ಪ್ರಕೃತಿಯ ಹೊಲದಲ್ಲಿ ಪೈರು ನಳನಳಿಸಿದರಷ್ಟೇ ಸಾಲದು ಮತಿ (Intellect)ಯ ಕ್ಷೇತ್ರದಲ್ಲಿ ವಿಚಾರಗಳು ಕಳಾಯುಕ್ತವಾಗಿ ನಸುನಗಬೇಕೆಂದು, ತೋಟಗಳಲ್ಲಿ ತೆಂಗು ಚಾಮರ ಬೀಸಿದರೆ ಸಾಲದು ಹೃದಯ ಕ್ಷೇತ್ರದಲ್ಲಿ ಸದಾಚಾರವು ದೇವರಿಗೆ ಚಾಮರ ಬೀಸುವಂತಾಗಬೇಕು, ಕೇವಲ ಎಳನೀರನ್ನೀಂಟಿ ದೇಹದ ದಾಹ ಇಂಗಿಸಿಕೊಂಡರಷ್ಟೇ ಅಲ್ಲ, ಸದ್ಭಕ್ತಿಯ ಸುಜಲವನ್ನು ಪಾನಗೈದು ಆತ್ಮದ ದಾಹ ತಣಿಸಿಕೊಳ್ಳುವಂತಾಗಬೇಕೆಂದು ಗುರುದ್ವಯರ ಅಪೇಕ್ಷೆ.

ತಿಪಟೂರು

ಇಂತಹ ಆದಮ್ಯ ಆಕಾಂಕ್ಷೆಯನ್ನು ಕಾರ್ಯರೂಪಕ್ಕಿಳಿಸುವಂತೆ ಪ್ರಾರಂಭವಾಯಿತು, ವಿಶ್ವಧರ್ಮ ಪ್ರವಚನ ತುಮಕೂರು ಜಿಲ್ಲೆಯ ತಿಪಟೂರು ನಗರದಲ್ಲಿ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ದಿ. ೨೦-೧೦-೧೯೭೭ರಂದು ಆಗಮಿಸಿ ಪ್ರವಚನವನ್ನಾರಂಭಿಸಿದರು. ಪ್ರಾರಂಭದ ದಿನದಂದು ಶಾಸಕರಾದ ಶರಣ ಮಂಜುನಾಥರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ವೀರಶೈವಾಶ್ರಮ, ಭ್ರಮರಾಂಬ ಬಳಗ, ಶ್ರೀ ವಾಸವಿ ಮಂಡಳಿ, ಶ್ರೀ ಅಕ್ಕಮಹಾದೇವಿ ಸಮಾಜದವರು ಮಾಲಾರ್ಪಣೆಗೈದು ಸ್ವಾಗತ ಕೋರಿದರು. ಶ್ರೀ ವಾಸವಿ ಮಹಿಳಾ ಮಂಡಳಿಯ ಅಧ್ಯಕ್ಷೆ ಹೃತ್ಪೂರ್ವಕ

ಸ್ವಾಗತ ಕೋರಿದರೆ, ಶರಣ ಹೀ. ಚಿ. ಶಾಂತವೀರಯ್ಯನವರು ಮಾತೆಯವರ ಪರಿಚಯ ಗೈದುಕೊಟ್ಟರು. ಲವಲವಿಕೆಯ ವಾತಾವರಣದಲ್ಲಿ ಪ್ರವಚನ ಸಭೆ ಆರಂಭವಾಯಿತು.

ನವೆಂಬರ್ ಒಂದರ ರಾಜ್ಯೋತ್ಸವದಂದು 'ಕಲ್ಯಾಣ ಕಿರಣ' ಮಾಸಪತ್ರಿಕೆಯ ರಾಜ್ಯೋತ್ಸವ ಸಂಚಿಕೆ ಬಿಡುಗಡೆಯಾಯಿತು. ಕಲ್ಪತರು ವಿದ್ಯಾಲಯದ ಪ್ರಿನ್ಸಿಪಾಲ್ ಶರಣ ಸುಬ್ಬಣ್ಣ ಇವರಿಂದ. ಬಿಡುಗಡೆ ಕಾಣುತ್ತಲೇ ನೂರಾರು ಪ್ರತಿಗಳು ವಿಕ್ರಯಿಸಲ್ಪಟ್ಟವು. ನವೆಂಬರ್ ೧೨ ಮತ್ತು ೧೩ರಂದು ತಿಪಟೂರಿನ ಶ್ರೋತೃಗಳಿಗೆ ವಿಶೇಷ ಹಬ್ಬ. ಪುಣ್ಯ ವಿಶೇಷ ಪುರುಷ ರೂಪಾಗಿ ಬಂದಂತಹ ಅಸಂಖ್ಯಾತ ಸಾಹಿತಿಗಳ ಆಗಮನ ಮತ್ತು ಕೇವಲ ಸಮ್ಮೇಳನವಲ್ಲ, ಸಮ್ಮಿಲನ. ಕಾರಣವಿಷ್ಟೇ, "ತರಂಗಿಣಿ" ಎಂಬ ಅಕ್ಕಮಹಾದೇವಿಯ ಕಾದಂಬರಿಯ ದ್ವಿತೀಯ ಮುದ್ರಣ ಮತ್ತು "ಹೆಪ್ಪಿಟ್ಟ ಹಾಲು" ಎಂಬ ಸಾಮಾಜಿಕ ಕಾದಂಬರಿಯ ದ್ವಿತೀಯ ಆವೃತ್ತಿಗಳ ಬಿಡುಗಡೆ. ದಿ. ೧೨ರಂದು ಜಾನಪದ ಕಲಾರತ್ನ ಕೆ. ಆರ್. ಲಿಂಗಪ್ಪನವರು ಗ್ರಂಥ ಉದ್ಘಾಟಕರು. ಗ್ರಂಥ ಪರಿಚಯಗೈಯುವವರು ಕೊಳ್ಳೇಗಾಲದ ಶರಣ ಪಿ. ಬಸವಣ್ಣ, ಶರಣ ಗೋ. ರು. ಚನ್ನಬಸಪ್ಪ, ಅಧ್ಯಾಪಕ ಶರಣ ಬಸವರಾಜರು. ಅಂದು ಗ್ರಂಥದ ಆಶ್ರಯದಾತರಾದ ಚಿಕ್ಕಮಗಳೂರಿನ ಪ್ರಸಿದ್ಧ ಕಾಫಿ ಬೆಳೆಗಾರರಾದ ಶ್ರೀ ಎಂ. ಎಲ್. ಶ್ರೀನಿವಾಸ ಶ್ರೇಷ್ಠಿ ಮತ್ತು ಶ್ರೀ ಎ. ಎಮ್. ಬಸವೇಗೌಡರನ್ನು ಸತ್ಕರಿಸಲಾಯಿತು. ಮುಖ್ಯ ಅತಿಥಿಗಳಾಗಿ ಬಂದ ಡಾ|| ಲಲಿತಾ ಗುರುಬಸವಯ್ಯ ಇವರನ್ನು ಸತ್ಕರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಶಿವಮೊಗ್ಗೆಯ ಸಮಾಜ ನೇತಾರರಾದ ಹೆಚ್. ಎಂ. ಲಿಂಗಮರಿಯಪ್ಪನವರು ವಹಿಸಿದ್ದರು. ಗ್ರಂಥಗಳ ಮಳಿಗೆಯನ್ನು ಚಿಕ್ಕಮಗಳೂರಿನ ಶರಣರಾದ ಎನ್. ಎಸ್. ಮುರಿಗೆಪ್ಪನವರು ಉದ್ಘಾಟಿಸಿದರು (ಚಿತ್ರದಲ್ಲಿ ಕಾಣಬಹುದು. ತರಂಗಿಣಿ ಬಿಡುಗಡೆಯ ಚಿತ್ರ ಡಿಸೆಂಬರ್ ಸಂಚಿಕೆಯಲ್ಲಿ ಬಂದಿದೆ.)

ಮರುದಿನ ಹೆಪ್ಪಿಟ್ಟ ಹಾಲು ಕೃತಿಯ ಬಿಡುಗಡೆ ಹೀ. ಚಿ. ಶಾಂತವೀರಯ್ಯನವರಿಂದ. ಗ್ರಂಥ ಪರಿಚಯ ಗೋ. ರು. ಚನ್ನಬಸಪ್ಪನವರಿಂದ. ಸಭಾಧ್ಯಕ್ಷತೆಯನ್ನು ತಿಪಟೂರಿನ ಸುಪ್ರಸಿದ್ಧ ವ್ಯಾಪಾರಿಗಳಾದ ಎಸ್. ಸಿ. ಗಂಗಾಧರಪ್ಪನವರು ವಹಿಸಿದ್ದರು. ಹೆಪ್ಪಿಟ್ಟ ಹಾಲು ಕೃತಿಗೆ ಧನ ಸಹಾಯ ನೀಡಿ ಆಶ್ರಯದಾತರಾಗಿರುವ ಮಡಿಕೇರಿಯ ಎಂ. ಎಸ್. ವಸಂತರವರನ್ನು ಸತ್ಕರಿಸಲಾಯಿತು. ತಿಪಟೂರಿನಲ್ಲಿ ಪ್ರವಚನ ಸಾಗಿದ್ದಂತೆಯೇ ಸುತ್ತಮುತ್ತಲ ಗ್ರಾಮೀಣ ಪ್ರದೇಶಗಳಲ್ಲಿ ಕೆಲವಕ್ಕೆ ಭೇಟಿ ನೀಡಿ ಜ್ಞಾನದಾಸೋಹವನ್ನು ನೀಡಿದರು ಮಾತಾಜಿಯವರು. ನಾಗರಘಟ್ಟ, ಮಾರನಗೆರೆ, ಗೌಡನಕಟ್ಟೆ ಮುಂತಾದೆಡೆಗಳಲ್ಲಿ ಸುತ್ತಲಿಂದ ಜನರು ಆಗಮಿಸಿ ಪ್ರವಚನಾಮೃತ ಪಾನಗೈದರು. ಪ್ರತಿ ಭಾನುವಾರ ನಡೆಯುತ್ತಿದ್ದ ಸಾಮೂಹಿಕ ಪ್ರಾರ್ಥನೆಗಳಲ್ಲಿ ಜನರು ಶ್ರದ್ಧೆಯಿಂದ ಭಾಗವಹಿಸಿದರಷ್ಟೇ ಅಲ್ಲದೆ, ಸಾಮೂಹಿಕ ಪೂಜೆಯಲ್ಲಿ ನೂರಾರು ಜನ ಭಾಗವಹಿಸಿದರು.

Digitalized by e-Sahithya Documentation Forum
Sponsored by Sarayu Foundation Trust

ಇಂತಹ ಪ್ರವಚನ ಕಾರ್ಯಕ್ರಮವು ತಮ್ಮ ನಗರದ ಇತಿಹಾಸದಲ್ಲಿ ನಡೆದುದು ಕೇವಲ ಎರಡನೇ ಬಾರಿ ಮಾತ್ರ (ಮೊದಲ ಬಾರಿ ಪರಮ ಪೂಜ್ಯ ಲಿಂಗಾನಂದ ಸದ್ಗುರುಗಳು ೧೯೭೫ರಲ್ಲಿ ಪ್ರವಚನ ಮಾಡಿದಾಗ) ಎಂದು ಜನತೆಯು ಉದ್ಗರಿಸದೇ ಇರಲಿಲ್ಲ.

ಪ್ರವಚನ ಮುಕ್ತಾಯ ಸಮಾರಂಭ ದಿ. ೪-೧೨-೧೯೭೭ರಂದು ನ್ಯಾಯಾಧೀಶರಾದ ಶರಣ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆದಾಗ, ಜನರು ಸಹಸ್ರಾರು ಸಂಖ್ಯೆಯಲ್ಲಿ ನೆರೆದು ತಾಲ್ಲೋಕಾ ಕಛೇರಿ ಮೈದಾನ ತುಂಬಿ ತುಳುಕದೇ ಇರಲಿಲ್ಲ. ಅಂದಿನ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಸುಜಯಾ ಮಹಾಲಿಂಗಯ್ಯನವರು ಮತ್ತು ಶ್ರೀಮತಿ ಶಕುಂತಲಾ ನಾಗರಾಜರವರು ಆಗಮಿಸಿದ್ದರು. ಕಲ್ಯಾಣ ಕ್ರಾಂತಿಯ ಹೃದಯಸ್ಪರ್ಶಿ ಕಥೆಯಿಂದ ಮತ್ತು ಒಂದೂವರೆ ತಿಂಗಳ ಪ್ರವಚನದ ಆನಂದದಿಂದ ಅಗಲಬೇಕಾದ ವ್ಯಥೆಯಿಂದ ಅಶ್ರು ದ್ರವಿಸಿದ ಆಲಿಗಳಿಂದ ಅಗಲಿದರು. ಮರುದಿನ ಹನ್ನೊಂದುವರೆಗೆ ಮಂಗಳವನ್ನು ಹಾಡಿ, ಶ್ರೀ ಮಾತೆಯವರನ್ನು ಅರಸೀಕೆರೆಗೆ ಬೀಳ್ಕೊಟ್ಟರು.

ಅರಸೀಕೆರೆ

ಐತಿಹಾಸಿಕ ರಾಣಿಯೋರ್ವಳ ಚಿರಸ್ಮಾರಕವಾಗಿ ಉಳಿದಿರುವ ಪಿರಿದಾದ ಕೆರೆಯುಳ್ಳ ಅರಸೀಕೆರೆ, ಅರುಹಿನಕೆರೆಯಾದುದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಕ್ರಾಂತಿದನಿಯ ಕಹಳೆಯಿಂದ, ಧರ್ಮಜಾಗೃತಿಯ ಪಾಂಚಜನ್ಯದ ಶಂಖ ಧ್ವನಿಯಿಂದ. ದಿ. ೮-೧೧-೧೯೭೭ರಂದು ಪೂಜ್ಯಶ್ರೀಗಳು ಕರ್ನಾಟಕ ರೋಟರಿ ಭವನದವರ ಸ್ಫೂರ್ತಿ-ಸಹಕಾರ-ಸ್ಥಳದಾನದಿಂದ ಪ್ರವಚನಾರಂಭ ಮಾಡಿದರು. ಶ್ರೀ ಬಸವರಾಜೇಂದ್ರ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶಂಕರ ಲಿಂಗಪ್ಪನವರು ಸೂತ್ರಧಾರತ್ವ ವಹಿಸಿಕೊಳ್ಳಲು ಮುಂದಾದರು. ಗಾಂಧೀ ಮೈದಾನವು ಜನರನ್ನು ಮಡಿಲಲ್ಲಿ ತುಂಬಿಕೊಳ್ಳ ತೊಡಗಿದಾಗ, ಗಣಪತಿ ಉತ್ಸವ ಸಮಿತಿಯವರು ಸುಂದರ ವೇದಿಕೆಯೊಂದನ್ನು ನಿರ್ಮಿಸಿ ಪ್ರವಚನಕ್ಕೆ ಅನುವು ಮಾಡಿಕೊಟ್ಟರು. ಪ್ರವಚನವು ದಿನ ದಿನಕ್ಕೆ ಕಳೆ ಏರುತ್ತಾಸಾಗಿ, ಜನರು ಜ್ಞಾನಾಮೃತ ಪಾನಗೈಯಲು ಕಿಕ್ಕಿರಿಯ ತೊಡಗಿದರು. ಪ್ರಾರಂಭದಂದು ಶ್ರೀ ಶ್ರೀರಂಗರು ಪೂಜ್ಯ ಸ್ವಾಮೀಜಿಯವರ ಸ್ವಾಗತವನ್ನು ಹೃತ್ಪೂರ್ವಕವಾಗಿ ಬಯಸಿದರು. ಪುರಪ್ರಮುಖರಾದ ಜೋಗೀಹಳ್ಳಿ ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು.

ಶರಣರಾದ ಆರ್. ಸಿ. ಬಸವರಾಜರು ಕಲ್ಯಾಣ ಕಿರಣದ ನವೆಂಬರ್ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಅರಸೀಕೆರೆಯಲ್ಲಿ ಇದೊಂದು ಐತಿಹಾಸಿಕ ಸಭೆಯೆಂದರೂ ಉತ್ಪ್ರೇಕ್ಷೆಯಾಗದು. ಆಗಾಗ ಧಾರ್ಮಿಕ ಸಭೆಗಳು ನಡೆದು ಸಿನಿಮಾ

ಗಾಯಕರು ಬಂದಾಗ ಜನ ಕಿಕ್ಕಿರಿದು ಬಂದರೂ ಮನೋರಂಜನೆಯ ಮಂದಿಯ ಗುಂಪಾಗುತ್ತಿತ್ತೇ ವಿನಾ ಇಂತಹ ವಿಚಾರಶೀಲ, ಧರ್ಮಾಸಕ್ತಿಯ ಪ್ರೌಢಜನರ ಸಮಾವೇಶವೆಂದೂ ಆಗಿರಲಿಲ್ಲ. ಅಜ್ಞಾನದ ಗವಿಯಿಂದ ಜನತೆಯನ್ನು ಹೊರತರುವ, ಮಲಗಿದ್ದವರನ್ನು ವಿಚಾರ ಪ್ರಜ್ಞೆಯ ಗುಡುಗಿನಿಂದ ಎಚ್ಚರಿಸುವ ಕ್ರಾಂತಿ ಮೊದಲ ಬಾರಿಗೆ ನಡೆಯಿತೆಂದು ಅಬಾಲವೃದ್ಧರಾದಿಯಾಗಿ ಉದ್ಗರಿಸುತ್ತಿದ್ದರು.

ಬಿದಿಗೆ ಚಂದ್ರನಂತೆ ಆರಂಭವಾದ ಪ್ರವಚನ ಕಾರ್ಯಕ್ರಮ ಪೂರ್ಣಚಂದ್ರನ ಕಾಂತಿಶಕ್ತಿಗಳನ್ನು ಪಡೆಯುವಾಗಲೇ, ತಿಪಟೂರಿನ ಪ್ರವಚನ ಮಂಗಲಗೊಳಿಸಿ ಶ್ರೀ ಮಾತಾಜಿಯವರು ಆಗಮಿಸಿದರು, ಅರಸೀಕೆರೆಗೆ. ಪುರಸಭಾಧ್ಯಕ್ಷರಾದ ಶ್ರೀ ಸುಂದರ ರಾಜಶೆಟ್ಟಿಯವರು ಇತರ ಸದಸ್ಯರು ಮತ್ತು ಪುರಪ್ರಮುಖರು ನಗರದ ಪ್ರವೇಶ ವಲಯದಲ್ಲೇ ವೈಭವದಿಂದ ಸ್ವಾಗತಿಸಿ, ಅಲಂಕರಿಸಿದ ಮಂಟಪದಲ್ಲಿ ಕರೆದೊಯ್ದರು. ಹೂವುಗಳಿಂದ ಸಾಲಂಕೃತವಾದ ಮಂಟಪವು ಪೂಜ್ಯರನ್ನು ಪ್ರತಿಷ್ಠಾಪಿಸಿಕೊಂಡು ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಸಂಜೆಯ ಸಾರ್ವಜನಿಕ ಸಭೆ ಬೃಹತ್ ಸಭೆಯಾಗಿ ಜನತೆಯ ಧೀಮಂತ ಶಕ್ತಿ ಮತ್ತು ಪೂಜ್ಯ ಗುರುಗಳ ಜ್ಞಾನ ಕಿರಣಗಳ ಪ್ರಖರತೆಯಿಂದ ಅರಳಿದ ತಾವರೆಯ ಸಮೂಹದಿಂದ ಕೂಡಿದ ಸರಸಿಯಂತಿತ್ತು. ಪುರಸಭಾಧ್ಯಕ್ಷರು ನಗರಕ್ಕೆ ಮಾತೆಯವರನ್ನು ಸಾರ್ವಜನಿಕವಾಗಿ ಸ್ವಾಗತಿಸಿದರು. ಮಾಸ್ಟರ್ ಶಂಕರ ಲಿಂಗಪ್ಪನವರು ಪರಿಚಯ ಮಾಡಿದರು. ಮಾಸ್ಟರ್ ಶಿವಣ್ಣನವರು ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಂದಾಳುಗಳು ಭಾಷಣಗಳನ್ನು ಮಾಡಿದರು. ನಗರದ ಪ್ರಸಿದ್ಧ ವ್ಯಾಪಾರಿಗಳಾದ ಶರಣ, ಬಸಪ್ಪನವರು ಸ್ವಯಂ ಸ್ಫೂರ್ತಿಯಿಂದ ಸಂಸ್ಥೆಯ ಧ್ಯೇಯೋದ್ದೇಶಕ್ಕಾಗಿ ಐದು ಸಾವಿರ ಒಂದು ರೂ.ಗಳನ್ನು ದಾನಮಾಡಿದರು.

ದಿ. ೧೧-೧೨-೧೯೭೭ರಂದು ಮಂಗಲಗೊಳ್ಳಬೇಕಿದ್ದ ಸಭೆ ಜನತೆಯ ಉತ್ಕಟ ಅಪೇಕ್ಷೆಯ ಮೇರೆಗೆ ದಿ. ೧೫-೧೨-೧೯೭೭ರ ವರೆಗೆ ಮುಂದರಿಯಿತು. ಮಂಗಲಾಚರಣೆಯ ದಿನದಂದು ಸಭೆಯನ್ನು ಕಂಡವರಿಗೆ ಇದೊಂದು ಪವಾಡ ಎಂಬ ಉದ್ಗಾರ ಬರದಿರಲು ಸಾಧ್ಯವೇ ಇರಲಿಲ್ಲ. ಅಂತಹ ಜನ ಸಮುದ್ರ. ಓಡಾಡಲು ತಾವಿಲ್ಲದಷ್ಟು ದಟ್ಟವಾಗಿ ಜನರು ವಿಶಾಲ ಮೈದಾನವನ್ನು ತುಂಬಿಕೊಂಡಿದ್ದರು. ಒಂದೆಡೆ ಹರ್ಷದ ಕಥೆ, ಮತ್ತೊಂದೆಡೆ ನೋವಿನ ವ್ಯಥೆ. ಮರುದಿನವೇ 'ಆ' ಲೋಕ ಕೈಗೆ ಸಿಗದಂತಾಗುವುದು ಜ್ಞಾನಿಧಿಗಳನ್ನು ಕಳುಹಿಸಿ ಕೊಡಬೇಕೆಂಬ ತಳಮಳ. ಇಂಥ ಸಮ್ಮಿಶ್ರಭಾವದಿಂದ ಸಭೆ ಜರುಗಿತು.

ಪುರಸಭಾಧ್ಯಕ್ಷ ಶ್ರೀ ಸುಂದರರಾಜ ಶೆಟ್ಟಿಯವರು, ಸದಸ್ಯರು ಮತ್ತು ಪುರಪ್ರಮುಖರು ಅಖಂಡವಾಗಿ ತಿಂಗಳು ಕಾಲ ಪ್ರವಚನಗೈದು ಜನಜಾಗೃತಿ ಮಾಡಿದ ಪೂಜ್ಯಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರಿಗೆ ಮತ್ತು ಮುಕ್ತಾಯದ ದಿನಗಳಲ್ಲಿ

Digitalized by e-Sahithya Documentation Forum
Sponsored by Sarayu Foundation Trust

ಆಗಮಿಸಿ, ತಮ್ಮ ಅನುಭವ ವಾಣಿ ನೀಡಿದ ಮಾತೆಯವರಿಗೆ ಪುರಸಭೆ ಪರವಾಗಿ ಬಿನ್ನವತ್ತಳೆಗಳನ್ನು ಅರ್ಪಿಸಿ ಗುಣಗಾನ ಮಾಡಿದರು. ಪೂಜ್ಯ ಸ್ವಾಮಿಗಳ ಸಿಂಹವಾಣಿ ಮೊಳಗಿ ಧಾರ್ಮಿಕ ಮೌಲ್ಯಗಳ ತಳಹದಿಯ ಮೇಲೆ ಸಮಾಜವನ್ನು ಕಟ್ಟುವ ಮಾರ್ಗ ದರ್ಶನ ನೀಡಿತು. ಮಾಸ್ಟರ್ ತಿಮ್ಮಪ್ಪನವರ ಕೃತಜ್ಞತಾ ಸ್ಮರಣೆ ಮಾರ್ಮಿಕ ವಾಗಿದ್ದಿತು. ಪೂಜ್ಯ ಶ್ರೀ ಮಾತಾಜಿಯವರು ತಮ್ಮ ಧೀರ–ಮಧುರವಾಣಿಯಿಂದ ಆಡಿದ ಕ್ರಾಂತಿಯುಕ್ತ ಮಾತುಗಳು ಅದೆಷ್ಟು ಮಂತ್ರಮುಗ್ಧರನ್ನಾಗಿ ಮಾಡಿದುವೆಂದರೆ ಹತ್ತೂಮುಕ್ಕಾಲು ಗಂಟೆಯಾದರೂ, ಮೈ ಕೊರೆವ ಛಳಿಯಲ್ಲಿ ಜನರು ಏಕಾಗ್ರಚಿತ್ತ ರಾಗಿಯೇ ಕುಳಿತಿದ್ದರು. ಅರಿವಿನ ಹೊಳೆಹರಿದು,ಸಂತಸದ ಬೆಳಕನ್ನು ಬೀರಿ ಅರಸೀಕೆರೆಯು ಪರಮ ಪಾವನವಾಯಿತೆಂಬ ಧನ್ಯಭಾವ ಪಡಿಮೂಡಿತ್ತು ಎಲ್ಲರ ಮುಖಾರವಿಂದಗಳಲ್ಲಿ.

★★★★

ನಗು ನಗುತಾ ನಲೀ ನಲಿ

ಏನಾಯಿತು ? ಏಕಾಯಿತು ? ಎಂಬೋದು ನೀ ಮರೆತು ಬಾಳು ।
ಸಾವಾಗಲಿ ನೋವಾಗಲಿ ಒಳ್ಳೇದಕೇ ಎಂದು ಹೇಳು ॥

ಹಲವಾರು ಜನರು ಈ ನಿನ್ನ ನಡೆಯನ್ನು ತೂಗಿ ನೋಡುವರು
ನೂರಾರು ಜನರು ನೂರೊಂದು ಮಾತು ಆಡಿ ಹೋಗುವರು
ಆ ಮಾತನೆಲ್ಲ ನೀ ದೂರ ಚೆಲ್ಲು ಅವಕೆ ಬೆಲೆ ಇಲ್ಲ ಎಂದಾದರೂ ॥

ಹೂ ಬಳ್ಳಿಯಿಂದ ಹೂವನ್ನು ಚಿವುಟಿ ದೂರ ಎಸೆದರೇನು ?
ಆ ಹೂ ಬಳ್ಳಿ ನಿನ್ನ ಎದುರಾಗಿ ಬಂದು ಮುಳ್ಳಾಗಿ ನಿಲುವದೇನು ?
ಬೇರೊಂದು ಹೂವನ್ನು ತಾನರಳಿಸಿ ಮರುಚಣದಲ್ಲೇ ತಾನಗದೆ ಏನು ॥

ಹೂವಂತಿರು ಲತೆಯಂತಿರು ಮೌನದಲಿ ನೀ ನಗುತಾ ಬಾಳು
ಸಾವಾಗಲಿ ನೋವಾಗಲಿ ಒಳ್ಳೇದಕೆ ಎಂದು ಹೇಳು ॥

—ಬಿ. ಸೋಮಲಿಂಗ, ಪಾಟೀಲ.
(ವಿಜಾಪುರ)

ಶಿವಯೋಗಿ ಸಿದ್ಧರಾಮೇಶ್ವರ

ಸೋದರಿ ಕುಮುದಾ

ಶಿವನೊಳಗೆ ಪ್ರಾಣವನು ತವೆಬೆರೆಸಿ ಹೊರಗಳಿದು
ಶಿವ ಬೆಳಗಿನೊಳು ಪರಮ ತಪವನೈದಿ
ಶಿವನು ತಾನಾಗಿರ್ದ ಶಿವ ಸಿದ್ಧರಾಮಯ್ಯ
ಶಿವಯೋಗ ಭಿಕ್ಷವನು ನೀಡು ಎನಗೆ.

—ಮುಪ್ಪಿನ ಷಡಕ್ಷರಿಗಳು.

ಯಾರು ಈ ಸಿದ್ಧರಾಮಯ್ಯ ?

ಅಷ್ಟಶತಮಾನಗಳ ಹಿಂದೆ ಸಮಾಜದ ಎಲ್ಲಾ ರಂಗಗಳಲ್ಲಿಯೂ ಕ್ರಾಂತಿಗೈದು, ಮರ್ತ್ಯವನ್ನು ಅಮರ್ತ್ಯವಾಗಿಸಿದ, ಭುವಿಯನ್ನು ದಿವಿಯಾಗಿ ಪರಿವರ್ತಿಸಿದ ಕಾರಣಿಕ ಪುರುಷರು ವಿಶ್ವಗುರು ಬಸವಣ್ಣನವರು. ಅವರ ಸಮಕಾಲೀನರಾಗಿದ್ದು, ಬಸವಣ್ಣನವರು ಸ್ಥಾಪಿಸಿದ ನೂತನ ಧರ್ಮದ ಅನುಯಾಯಿಯಾಗಿ, ಧಾರ್ಮಿಕ ರಂಗಕ್ಕೆ ಅವರು ಕೊಟ್ಟ ಅನುಪಮ ಕೊಡುಗೆಯಾದ ಅನುಭವ ಮಂಟಪದ ಪ್ರಮುಖ ವ್ಯಕ್ತಿಗಳಲ್ಲೊಬ್ಬರಾಗಿ, ಶೂನ್ಯ ಪೀಠದ ಮೂರನೆಯ ಅಧಿಕಾರಿಯಾಗಿ, ಆಧ್ಯಾತ್ಮ ಸರಸಿಯಲ್ಲಿ ಅನುಭಾವದ ಅರಸಂಚೆಯಾಗಿ ವಿಹರಿಸಿದ ದಿವ್ಯ ಚೇತನ ಶಿವಯೋಗಿ ಸಿದ್ಧರಾಮಣ್ಣನವರು. ಇವರ ಜೀವನವೇ ನಿರಂತರ ಸಾಧನೆಯ ಸುಂದರ ಕಾವ್ಯ. ಸಮತೆ–ಸಮ್ಯಕ್ ಜ್ಞಾನ–ಸದ್ಭಕ್ತಿಗಳ ಸಮ್ಮಿಲನವಾಗಿದ್ದ ಸಿದ್ಧರಾಮಣ್ಣನವರ ಜೀವನ–ಸಾಧನೆ–ಸಿದ್ಧಿ, ಇವುಗಳ ಸೂಕ್ಷ್ಮ ಪರಿಚಯವೇ ಈ ಲೇಖನದ ಉದ್ದೇಶ.

ಮಹಾಯೋಗಿ ರೇವಣಸಿದ್ಧೇಶ್ವರರು ಅಂದು ಸೊನ್ನಲಿಗೆಯಲ್ಲಿ ರಾಣಿ ಚಾಮಲಾ ದೇವಿ ಕಳಿಸಿದ್ದ ವಾಹನಗಳನ್ನು ಬಿಟ್ಟು ಕಾಲ್ನಡಿಗೆಯಲ್ಲಿ ಹೊರಟಿದ್ದಾರೆ. ಎಲ್ಲಿಗೆ ? ಎಂದು ಶಿಷ್ಯರೆಲ್ಲರೂ ವಿಸ್ಮಿತರಾಗಿ ಹಿಂಬಾಲಿಸುತ್ತಿರಲು ಸದ್ಭಕ್ತ ದಂಪತಿಗಳಾದ ಸುಗ್ಗಲಾದೇವಿ ಮತ್ತುಮುದ್ದೇಗೌಡರ ಮನೆಯ ಮುಂದಿದ್ದರು, ಆ ಯೋಗಿವರೇಣ್ಯರು. ಇಳಿವಯಸ್ಸಿನ ಗೃಹಿಣಿಯು ಗುರುಗಳ ಆಗಮನದಿಂದ ಹರ್ಷಿತಳಾಗಿ ನಮಸ್ಕರಿಸುವಷ್ಟರಲ್ಲಿ ರೇವಣ ಸಿದ್ಧರೇ ಆಕೆಗೆ ವಂದಿಸಿದರು. ಆಕಸ್ಮಿಕವಾಗಿ ಜರುಗಿದ ಈ ಘಟನೆಯಿಂದ ದಿಗ್ಭ್ರಾಂತಳಾದ ಸುಗ್ಗಲೆ ‘ ಏನಿದೀ ವೈಪರೀತ್ಯ ಗುರುವರ್ಯರೇ ? ’ ಎಂದಳು. ಆಗ ಗುರುಗಳು, ‘ ತಾಯಿ ನಿನ್ನ ಚಿದ್ಗರ್ಭದಿಂದ ಶಿವನ ಕರುಣೆಯನ್ನು ಹೊತ್ತು, ಲೋಕೋದ್ಧಾರಕ್ಕಾಗಿ

Digitalized by e-Sahithya Documentation Forum
Sponsored by Sarayu Foundation Trust

ಜನಿಸುವ ಚಿತ್‌ಸ್ವರೂಪಿಗೆ ನಮನ' ಎನ್ನುವರು. ಅದಕ್ಕೆ ಸುಗ್ಗಲೆ "ನನಗೀಗಾಗಲೇ ಮಕ್ಕಳಾಗುವ ವಯಸ್ಸು ಮೀರಿದೆ, ನನಗೆ ಮಗ ಹುಟ್ಟಲು ಹೇಗೆ ಸಾಧ್ಯ ?" ಎಂದಳು. "ಎಲ್ಲ ಲೌಕಿಕರಂತೆ ಹರೆಯದ ಕಾಮದ ಕಾವಿನಲ್ಲಿ ಜನಿಸದೆ, ನಿರ್ಮಲವಾದ ಪ್ರೇಮದಲ್ಲಿ ಜನಿಸಲಿದೆ ಒಂದು ಚಿತ್ಕೂಸು. ಆ ಮಗುವಿಗೆ 'ಸಿದ್ಧರಾಮ' ಎಂದು ಹೆಸರಿಡಿರಿ" ಎಂದು ತಿಳಿಸಿ ಗುರುಗಳು ನಿರ್ಗಮಿಸಿದರು.

ಗುರು ಹರಕೆಯೋ, ದೈವೀ ಕರುಣೆಯೋ, ಅಂತೂ ಸುಗ್ಗವ್ವೆ ಗರ್ಭಧರಿಸಿದಳು. ನವಮಾಸ ತುಂಬುತಿದ್ದಂತೆ, ಪೂರ್ಣ ಚಂದಿರನಂತಿದ್ದ ಗಂಡು ಮಗುವಿಗೆ ಜನ್ಮವಿತ್ತಳು. ಆ ಮಗುವಿಗೆ ಗುರುವಿನಾಣತಿಯಂತೆ ಸಿದ್ಧರಾಮನೆಂದು ಹೆಸರಿಡದೆ, ತಮ್ಮ ಮನೆ ದೇವರಾದ 'ಧೂಳಿಮಾಕಾಳ'ನ ಹೆಸರೇ ಇಟ್ಟರು. ಸಿದ್ಧರಾಮ ಎಂದರೆ, ಓಗೊಡುತ್ತಿದ್ದ ಮಗು, ಧೂಳಿಮಾಕಾಳ ಎಂದರೆ, ತಿರುಗಿಯೂ ನೋಡುತ್ತಿರಲಿಲ್ಲ. ಸಿದ್ಧರಾಮನ ಶೈಶವಾವಸ್ಥೆ ತುಂಬಾ ವಿಚಿತ್ರವಾಗಿತ್ತು. ಉಳಿದ ಮಕ್ಕಳಂತೆ ಯಾವ ಆಟಪಾಠಗಳಲ್ಲಿಯೂ ಆಸಕ್ತಿಯಿಲ್ಲದ ಸಿದ್ಧರಾಮ ಸದಾ ಏನನ್ನೋ ಚಿಂತಿಸುವಂತೆ ತೋರುತ್ತಿತ್ತು. ಮಗನ ತೊದಲ್ನುಡಿ, ಬಾಲಲೀಲೆಗಳನ್ನು ಕಾಣದೆ ನಿರಾಶರಾದ ತಂದೆ-ತಾಯಿಗಳು ಅವನು ಸದಾ ದೇವನ ಧ್ಯಾನದಲ್ಲಿರುವನೆಂದು ಊಹಿಸುವುದೂ ಸಾಧ್ಯವಿರಲಿಲ್ಲ.

ಹೀಗೆಯೇ ದಿನ-ಮಾಸಗಳುರುಳಿದವು. ಸಿದ್ಧರಾಮ ಎಂಟು ವರುಷದವನಾದ. ವಯಸ್ಸು-ದೇಹ ಬೆಳೆದಷ್ಟು ಬುದ್ಧಿ ಬೆಳೆಯಲಿಲ್ಲವಲ್ಲಾ ಎಂದು ಕೊರಗುವಂತಾಯಿತು ಸುಗ್ಗವ್ವೆ – ಮುದ್ದೇಗೌಡರಿಗೆ. ಯಾವ ಚಟುವಟಿಕೆಯಿಲ್ಲದೆ, ಯಾರೊಡನೆಯೂ ಬೆರೆಯದೆ ಇದ್ದ ಸಿದ್ಧರಾಮ ಹಿರಿಯರೆಲ್ಲರಿಗೂ ಸಮಸ್ಯೆಯಾಗಿದ್ದ. ಮನೆಯಲ್ಲೇ ಇದ್ದರೆ, ಹುಡುಗ ಇನ್ನಷ್ಟು ಮಂಕಾಗುವನೇನೋ ಎಂದು ಹೊಲದಲ್ಲಿ ದನಕಾಯುವ ಕೆಲಸಕ್ಕೆ ಕಳಿಸಿದರು. ಆದರೆ, ಹೊಲಕ್ಕೆ ಕಳಿಸಿದ ಬಳಿಕವೂ ಇವನ ವಿಚಿತ್ರಲೀಲೆ ಮುಂದುವರೆಯಿತು. ದನಗಾಹಿ ಹುಡುಗರೆಲ್ಲರೂ ಇವನನ್ನು ಆಟಕ್ಕೆ ಕರೆದರೆ ಹೋಗದೆ ಅಲ್ಲೇ ಮರಳಿನ ಲಿಂಗಮಾಡಿ, ಪೂಜಿಸಿ, ಆನಂದಿಸುತ್ತಿದ್ದ. ಜಗತ್ತಿನ ಕಣ್ಣಿಗೆ ಬೆಪ್ಪನಂತೆ ಕಂಡರೂ ಆಂತರಂಗಿಕವಾಗಿ ತನ್ನ ಸಾಧನೆಯಿಂದ ಚೈತನ್ಯದ ಬುಗ್ಗೆಯಾಗಿದ್ದ. ಯಾವೊಂದು ಏರುಪೇರಿಲ್ಲದೆ ಸಾಗಿದ್ದ ಈ ಬಾಲಯೋಗಿಯ ಜೀವನ ಹೀಗೇ ಸಾಗಿಸಲು ಬಿಡಬಾರದೆಂಬ ಇಚ್ಛೆ ದೇವನದಿತ್ತೇನೋ ಅಂತೆಯೇ ಸಿದ್ಧರಾಮನ ಭಕ್ತಿಯನ್ನು ಒರೆಗೆ ಹಚ್ಚುವ ಪ್ರಸಂಗ ಬಂದಿತು.

ಒಂದು ದಿನ ಸಂಜೆ ಸಿದ್ಧರಾಮ ರವಿಯ ಹೊಂಗಿರಣದ ಆಲಿಂಗನದಲ್ಲಿ ಪ್ರಕೃತಿಯು ಮೈಮರೆತಿರುವ ಸುಂದರ ದೃಶ್ಯವನ್ನು ತನ್ಮಯತೆಯಿಂದ ನೋಡುತ್ತಿದ್ದಾಗ, ತೇಜಸ್ವಿಯಾದ ಜಂಗಮನ ಆಗಮನವಾಗುವುದು. ತೇಜಃಪುಂಜವಾದ ಅವರ ಯೋಗನೇತ್ರಗಳು, ಹಣೆಯಲ್ಲಿ ರಾರಾಜಿಸುತ್ತಿದ್ದ ತ್ರಿಪುಂಡ್ರ, ಧರಿಸಿದ್ದ ಕಾವಿ ಕಾಷಾಯ, ಕೊರಳಲ್ಲಿ ಎದ್ದು

ಕಾಣುವ ರುದ್ರಾಕ್ಷಿಮಾಲೆ ಎಲ್ಲವನ್ನೂ ನೋಡುತ್ತಲೇ ಬಾಲಕನ ಶರೀರದಲ್ಲಿ ಮಿಂಚು ಹರಿದಂತಾಗಿ, ಓಡಿ ಹೋಗಿ ಅವರ ಪಾದಗಳಿಗೆರಗಿದ. "ಏಳು ಮಗು" ಎನ್ನುತ್ತಾ ಸಿದ್ಧರಾಮನನ್ನು ಎತ್ತಿದ ಆ ದಿವ್ಯ ಯೋಗಿಯನ್ನು ಕಂಡ ಸಿದ್ಧರಾಮನಿಗೆ ಆನಂದದಲ್ಲಿ ಮಾತೇ ಹೊರಡದಾಯ್ತು. ಕ್ಷಣಕಾಲದ ಬಳಿಕ ಸಾವರಿಸಿಕೊಂಡು ತನ್ನಲ್ಲಿ ಇದ್ದ ಕಂಬಳಿಯನ್ನು ಹಾಸಿ, ಕುಳ್ಳಿರಲು ಹೇಳಿದ. ರಸವತ್ತಾಗಿ ಬೆಳೆದಿದ್ದ ಬೆಳೆಸಿ (ಸೀತೆನೆ)ಯನ್ನು ಸ್ವೀಕರಿಸಬೇಕೆಂದು ಬಿನ್ನವಿಸಿದಾಗ, ಆ ಯೋಗಿಗಳು ಸಂತೋಷದಿಂದ ಸ್ವೀಕರಿಸಿ, ತೃಪ್ತಿಯಾಗದೆ, "ಮನೆಗೆ ಹೋಗಿ ಮೊಸರನ್ನ ತರುವೆಯಾ ?" ಎಂದು ಕೇಳಿದರು. ಅದಕ್ಕೆ ಸಿದ್ಧರಾಮ "ಓಹೋ ! ಈಗಲೇ ತಂದು ಬಿಡುವೆ" ಎಂದು ಹೇಳಿ ಮನೆಯ ಕಡೆ ಓಡಿದ. ಅಷ್ಟರಲ್ಲೇ ತಾನು ಬುತ್ತಿ ತರುವವರೆಗೂ ಇಲ್ಲಿಯೇ ಇರುವರೋ ಇಲ್ಲವೋ ಎಂಬ ಸಂಶಯ ಬಂದು, ಅವರ ಹೆಸರು ಮತ್ತು ಸ್ಥಳವನ್ನು ಪ್ರಶ್ನಿಸಿದ. ಅದಕ್ಕೆ ಉತ್ತರವಾಗಿ, "ನನ್ನ ಹೆಸರು ಮಲ್ಲಯ್ಯ. ಶ್ರೀಶೈಲ ನನ್ನ ಸ್ಥಳ" ಎಂದು ಹೇಳಿದರು. 'ಶ್ರೀ ಶೈಲ' ಎಂಬ ಪದವು ಕರ್ಣದ್ವಾರವನ್ನು ಪ್ರವೇಶಿಸುತ್ತಲೇ ಸಿದ್ಧರಾಮನ ಮೈರೋಮಾಂಚನಗೊಂಡಿತು. "ನಾನೂ ಅಲ್ಲಿಗೆ ಬರಲೆ ?" ಎಂದು ಕೇಳಿದ. "ಬರುವೆಯಂತೆ, ಮೊದಲು ಮೊಸರನ್ನ ತರುವುದಿಲ್ಲವೆ ?" ಎಂದರು ಮಲ್ಲಯ್ಯ. "ಇದೀಗ ತರುವೆ. ನಾನು ಬರುವವರೆಗೂ ಇಲ್ಲಿಯೇ ಇರಬೇಕು" ಎನ್ನುತ್ತಾ ಮನೆಗೆ ಓಡೋಡಿ ಬಂದು, "ಅಮ್ಮಾ....ಅಮ್ಮಾ....ಮೊಸರನ್ನ ಕಟ್ಟಿಕೊಡಮ್ಮಾ" ಎಂದು ಕೇಳಿದಾಗ, ಸುಗ್ಗವ್ವೆಗೆ ಇದು ಕನಸೇ ಎಂಬಷ್ಟು ಆಶ್ಚರ್ಯವಾಗಿ, ಒಂದು ಕ್ಷಣ ಮೂಕಳಾಗಿ ನಿಂತಳು. "ಬೇಗ ಕೊಡಮ್ಮಾ" ಮತ್ತೊಮ್ಮೆ ಅದೇ ಧ್ವನಿ ಎಚ್ಚರಿಸಿದಾಗ, ಸುಗ್ಗವ್ವೆಯ ಆನಂದಕ್ಕೆ ಪಾರವೇಯಿಲ್ಲದಾಯಿತು. ಎಂದೂ ಮಾತನ್ನೇ ಆಡದ ಮಗನು ಇಷ್ಟು ಸ್ಪಷ್ಟವಾಗಿ ಮಾತನಾಡಿದುದಕ್ಕೆ ಮನದಲ್ಲೇ ದೇವನನ್ನು ಸ್ಮರಿಸಿ, ಭಕ್ತಿಯಿಂದ ವಂದಿಸಿದಳು. ಮೊಸರನ್ನದ ಬುತ್ತಿ ಕಟ್ಟಿ ಸಿದ್ಧರಾಮನ ಕೈಯಲ್ಲಿರಿಸಿದಾಗ, ಸಂತೋಷದಿಂದ ಕುಣಿಯುತ್ತ ಹೊಲದೆಡೆಗೆ ತನ್ನ ಅತಿಥಿಯನ್ನು ಕುಳ್ಳಿರಿಸಿದೆಡೆಗೆ ಬಂದು ನೋಡಿದ. ಅಲ್ಲಿ ಹಾಸಿದ್ದ ಕಂಬಳಿ ಮಾತ್ರ ಜಂಗಮನು ಹೋದುದರ ಸಾಕ್ಷಿಯಂತಿತ್ತು. ಆದರೆ, ಜಂಗಮನ ಸುಳಿವೇ ಇಲ್ಲ. ಇಲ್ಲಿಯೋ ಎಲ್ಲಿಯೋ ಸುತ್ತಾಡುತ್ತಿರಬೇಕೆಂದು ಹೊಲವನ್ನೆಲ್ಲಾ ಒಮ್ಮೆ ಸುತ್ತು ಹಾಕಿ ಬಂದ. ಎಲ್ಲಿಯೂ ಕಾಣಲಿಲ್ಲ ಅವನ ಮಲ್ಲಯ್ಯ.

ನಿರಾಶೆಯ ನಿಶೆಯಾವರಿಸಿ ದಾರಿಗಾಣದಂತಾದಾಗ, ಅತೀವ ದುಃಖ ಉಮ್ಮಳಿಸಿ ಬಂತು, ಸಿದ್ಧರಾಮನಿಗೆ. ಮಲ್ಲಯ್ಯ ಶ್ರೀ ಶೈಲದಲ್ಲಿರುವೆನೆಂದು ತಿಳಿಸಿದ್ದುದು, ಆ ನಿರಾಶೆಯಂಧಕಾರದಲ್ಲಿ ಆಶಾಕಿರಣದಂತೆ ಕಂಡಿತು. ಶ್ರೀ ಶೈಲದ ಮಲ್ಲಯ್ಯನನ್ನರಸುತ್ತ ಬಾಲಕ ಹೊರಟೇ ಬಿಟ್ಟ. 'ಮಲ್ಲಯ್ಯಾ....ಮಲ್ಲಯ್ಯಾ' ಎಂದು ಒರಲುತ್ತ ಹಲುಬುತ್ತ 'ಓ ಮಲ್ಲಯ್ಯ ಎಲ್ಲಿರುವೆ ? ನನ್ನನ್ನು ಹೀಗೇಕೆ ಕಾಡಿಸುವೆ' ಎಂದು ಹಂಬಲಿಸುತ್ತ ನಟ್ಟಿರುಳಿನಲ್ಲಿ ದಟ್ಟಾರಣ್ಯದಲ್ಲಿ ಕರೆಯುತ್ತ ನಡೆದ. ಅವನ ಕರೆಗೆ ಮಾರುತ್ತರವಾಗಿ

Digitalized by e-Sahithya Documentation Forum
Sponsored by Sarayu Foundation Trust

ಬರಿದೇ ಗಿರಿಗಹ್ವರಗಳು ಪ್ರತಿಧ್ವನಿಸಿ ಸುಮ್ಮನಾದವು, ಅವನದೇ ಧ್ವನಿಯನ್ನು. ಆದರೂ ಧೃತಿಗೆಡದೆ, ಮಲ್ಲಯ್ಯನನ್ನು ಕಂಡೇ ತೀರುವೆನೆಂದು ಸಂಕಲ್ಪಿಸಿದ.

ಹಗಲಿರುಳೆನ್ನದೆ, ಬಿಸಿಲು ಮಳೆಯೆನ್ನದೆ, 'ಮಲ್ಲಯ್ಯಾ....ಮಲ್ಲಯ್ಯಾ' ಎನ್ನುತ್ತ ಶ್ರೀ ಶೈಲದತ್ತ ಹೋಗುತ್ತಿದ್ದಾಗ, ಯಾತ್ರೆಗೆಂದು ಹೊರಟಿದ್ದ ಕೆಲವು ಯಾತ್ರಾರ್ಥಿಗಳು ಈ ಮುಗ್ಧ ರಾಮನನ್ನು ನೋಡಿ, ಕನಿಕರದಿಂದ ಮಾತನಾಡಿಸಿದರು. ಶ್ರೀ ಶೈಲದ ಮಲ್ಲಯ್ಯನಿಗಾಗಿ ಅರಸುತ್ತಿರುವ ವಿಷಯವರಿತು, ವಿಸ್ಮಿತರಾಗಿ ಅವನನ್ನೂ ತಮ್ಮೊಡನೆ ಕರೆದುಕೊಂಡು, ಶ್ರೀ ಶೈಲದತ್ತ ಪಯಣ ಬೆಳೆಸಿದರು. ಹೀಗೆ ಮಾರ್ಗಕ್ರಮಿಸಿ ಬಂದು, ಶ್ರೀಶೈಲ ತಲುಪಿದಾಗ, ಸಿದ್ಧರಾಮನಿಗೆ ಆದ ಆನಂದ ಅಪಾರ. ತನ್ನ ಮಲ್ಲಯ್ಯನನ್ನು ಕಾಣುವೆನೆಂಬ ಆತುರದಿಂದ ಸರಸರನೆ ಗುಡಿಯೊಳಗೆ ಪ್ರವೇಶಿಸಿದ. ಅಲ್ಲಿ ಎಲ್ಲಿಯೂ ಮಲ್ಲಯ್ಯನನ್ನು ಕಾಣದೆ, ಅಲ್ಲಿದ್ದವರನ್ನು ಮಲ್ಲಯ್ಯ ಎಲ್ಲಿ ? ಎಂದು ಕೇಳಿದಾಗ, ಗರ್ಭ ಗುಡಿಯಲ್ಲಿದ್ದ ಜ್ಯೋತಿರ್ಲಿಂಗವನ್ನು ತೋರಿಸಿ, " ಇವನೇ ಮಲ್ಲಯ್ಯ " ಎಂದರು. ತಕ್ಷಣವೇ ಅವನ ಉತ್ಸಾಹವೆಲ್ಲಾ ಬಿಸಿಲಿಗೊಡ್ಡಿದ ಮಂಜಿನಂತೆ ಕರಗಿ, 'ಇವನು ಮಲ್ಲಯ್ಯನಲ್ಲ, ಕಲ್ಲಯ್ಯ' ಎಂದವನೇ ತಾನು ಕಂಡ ಮಲ್ಲಯ್ಯನನ್ನು ಕಾಣದೆ, ಹಿಂತಿರುಗ ಬಾರದೆಂದು ನಿಶ್ಚಯಿಸಿ, 'ಮಲ್ಲಯ್ಯಾ' ಎಂದು ಕೂಗುತ್ತ ಹೊರಟ. ಕಾಲುಕರೆದೊಯ್ದತ್ತ ಸುತ್ತಾಡಿ ದಣಿದು ಒಂದೆಡೆ ಬಂದು ನಿಂತು ಕೆಳಗೆ ನೋಡುತ್ತಾನೆ ದೃಷ್ಟಿಗೆ ನಿಲುಕದಷ್ಟು ಆಳವಾದ ಕಮರಿ. ತಟ್ಟನೆ ಅಂತರಂಗ ಮೊರೆಯಿಟ್ಟಿತು. "ಮಲ್ಲಯ್ಯ, ನಿನ್ನನ್ನು ಕಾಣದ ನಾನಿದ್ದೇನು ಪ್ರಯೋಜನ ? ಇದು ನನ್ನ ನಿಷ್ಠೆಯ, ನಿನ್ನ ದಯಾಗುಣದ ಪರೀಕ್ಷೆ ! ಮೂರು ಬಾರಿ ಕರೆದು ನೀನು ಓಗೊಡದಿದ್ದರೆ, ಆಶ್ರಯ ನೀಡದಿದ್ದರೆ ಈ ರುದ್ರಗಮ್ಮರಿಯೊಳಕ್ಕೆ ಹಾರುವೆ." ಮೂರು ಬಾರಿ ಕೂಗಿ ಭರವಸೆ ಸಿಗದಾಗ ನಿಮಿಷಾರ್ಧದಲ್ಲಿ ಕಣ್ಮುಚ್ಚಿ ಕಮರಿಯಲ್ಲಿ ಹಾರಿದ.

ಎಚ್ಚರಗೊಂಡ ಸಿದ್ಧರಾಮ ಕಣ್ಣು ಬಿಡುತ್ತಿದ್ದಂತೆಯೇ, ಯಾರಿಗಾಗಿ ಹಗಲಿರುಳು ಹಂಬಲಿಸಿ, ಪರಿತಪಿಸುತ್ತಿದ್ದನೋ ಆ ಮಲ್ಲಯ್ಯನ ತೊಡೆಯ ಮೇಲೆಯೇ ಮಲಗಿದ್ದ. ವಾತ್ಸಲ್ಯದಿಂದ ಮೈನೇವರಿಸುತ್ತಿದ್ದ ಮಲ್ಲಯ್ಯನನ್ನು ಕಂಡು ಸಂತಸದ ಹೊನಲಿನಲ್ಲಿ ಮೈಮರೆತ. " ಮಗು ನೀನಿನ್ನು ಮನೆಗೆ ಹೋಗಬೇಕು ಏಳಪ್ಪಾ" ಎಂದು ಮಲ್ಲಯ್ಯ ಹೇಳಿದಾಗ, "ಹೀಗೆನ್ನಬೇಡ ತಂದೆ, ನಿನ್ನನ್ನು ಬಿಟ್ಟು ನಾನೆಲ್ಲೂ ಹೋಗಲಾರೆ" ಎಂದು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದ. ಸಾಂತ್ವನಗೊಳಿಸುತ್ತ ಮಲ್ಲಯ್ಯ "ನಿನ್ನ ನಿಷ್ಠೆಗೆ ಮೆಚ್ಚಿದೆ, ನಿನ್ನನ್ನು ನನ್ನೊಡನೆ ಇರಲೆಂದು ಹುಟ್ಟಿಸಿಲ್ಲ, ನಿನ್ನಿಂದ ಲೋಕಕ್ಕೆ ಉಪಕಾರ ಆಗಬೇಕಾಗಿದೆ. ಸೊನ್ನಲಾಪುರವನ್ನೇ ಅಭಿನವ.ಶ್ರೀಶೈಲವನ್ನಾಗಿಮಾಡು" ಎಂದನು. "ನೀನು ನನ್ನೊಡನೆ ಬಂದರೆ ಮಾತ್ರ ಹೋಗುವೆ ಎಂದು ಹಟಹಿಡಿದಾಗ, "ಆಗಲಿ ಕಂದಾ, ನಿನ್ನೊಡನೆ ಬರುವೆ ಆದರೆ, ಲಿಂಗರೂಪದಲ್ಲಿ ಬರುವೆ" ಎಂದು ಸಂತೈಸಿ ಮಲ್ಲಯ್ಯನು ಸಿದ್ಧರಾಮನನ್ನು ಸೊನ್ನಲಾಪುರಕ್ಕೆ ಕಳುಹಿಸಿದ.

ಶ್ರೀಶೈಲದಿಂದ ಸೊನ್ನಲಾಪುರಕ್ಕೆ ಬಂದ ಸಿದ್ಧರಾಮ, ಅಸಾಮಾನ್ಯರೀತಿಯಲ್ಲಿ ಜನಸೇವೆ ಮಾಡಲು ಕಾರ್ಯಗಳನ್ನು ಹಮ್ಮಿಕೊಂಡು, ಕರ್ಮಯೋಗಿಯಂತೆ ದೇವನ ಆಣತಿಯನ್ನು ಪೂರ್ಣಗೊಳಿಸಲು ಟೊಂಕಕಟ್ಟಿ ನಿಂತಿದ್ದ. ಯೋಗದಂಡ ಹಿಡಿಯ ಬೇಕಿದ್ದ ಹಸ್ತ, ಗುದ್ದಲಿ ಹಿಡಿಯಿತು. ಕೆಲವಾರು ವರ್ಷಗಳಲ್ಲಿಯೇ ಜನಗಳೆಲ್ಲರ ಸಹಕಾರದಿಂದ ಊರಿನ ರೂಪವನ್ನೇ ಬದಲಿಸಿದ. ಕೆರೆ, ಭಾವಿ, ದೇಗುಲ ಇವುಗಳ ನಿರ್ಮಾಣದಲ್ಲೇ ತೊಡಗಿದ ಸಿದ್ಧರಾಮ ತನ್ನ ನಿಜಗುರಿಯನ್ನೇ ಮರೆತ. ದಿನಕಳೆದಂತೆ ಅವನಲ್ಲಿದ್ದ ದೈವೀಗುರಿಯು ಮಾಯವಾಗಿ, ಅವನು ಹೊಗಳಿಕೆಗೆ ಮಾರುಹೋಗಿ, ಕೀರ್ತಿ–ಮೋಹಗಳಿಗೆ ಎಡೆಮಾಡಿಕೊಟ್ಟನು.

ಕಲ್ಯಾಣದೆಡೆಗೆ ಪಯಣ ಬೆಳೆಸಿದ್ದ ಅಲ್ಲಮ ಪ್ರಭುಗಳು, ಸಿದ್ಧರಾಮನನ್ನು ಆವರಿಸಿದ್ದ ಅಜ್ಞಾನದ ತೆರೆಯನ್ನು ಸರಿಸಲೆಂದು ಸೊನ್ನಲಿಗೆಗೆ ಬಂದರು. ಸಿದ್ಧರಾಮನ ಜೀವನದಲ್ಲಿ ಮತ್ತೊಮ್ಮೆ ಹೊಸತಿರುವು. ಅರಿವಿನ ಪರಿಮಳವನ್ನು ಪಸರಿಸಲು ಬಂದ ಅಲ್ಲಮ ಪ್ರಭುವು ನೇರವಾಗಿ ಸಿದ್ಧರಾಮನಲ್ಲಿ ಹೋಗಿ ತತ್ತ್ವೋಪದೇಶ ಮಾಡದೆ, ಅವನ ಶಿಷ್ಯರ ಮುಂದೆ, ಅವನನ್ನು ವಿಡಂಬಿಸಿ ನುಡಿಯಲು ಪ್ರಾರಂಭಿಸಿದರು. ಗುರು ನಿಂದೆಯನ್ನು ಕೇಳಲಾಗದೆ, ಶಿಷ್ಯರು, ಅಲ್ಲಮನತ್ತ ಕಲ್ಲುಗಳನ್ನು ಬೀಸಿದರು. ವ್ಯೋಮ ಕಾಯ ಸಿದ್ಧಿಪಡೆದ ಅಲ್ಲಮಪ್ರಭುಗಳಿಗೆ ಯಾವ ಕಲ್ಲಿನಿಂದಲೂ ಪೆಟ್ಟು ಬೀಳಲಿಲ್ಲ. ತಮ್ಮ ಪ್ರಯತ್ನ ವಿಫಲವಾದಾಗ, ಎಲ್ಲರೂ ಸಿದ್ಧರಾಮನ ಬಳಿಗೆ ಬಂದು "ಯಾರೋ ಮಾಯಾವಿಯೊಬ್ಬ ಬಂದು, ನಿಮ್ಮನ್ನು ತೆಗಳುತ್ತಿದ್ದಾನೆಂದು" ತಿಳಿಸಿದರು. ಆದನ್ನು ಕೇಳುತ್ತಲೇ ಸಿದ್ಧರಾಮ ಕೋಪದಿಂದ, ಬಂದವರಾರೆಂದು ಅರಿಯದೆ, ತನ್ನ ಉರಿನೇತ್ರವನ್ನು ತೆರೆದ. ಕಾಡ್ಗಿಚ್ಚಿನಂತೆ ತನ್ನತ್ತ ಬರಲಿದ್ದ ಬೆಂಕಿಯನ್ನು ಅಲ್ಲಮ ಪ್ರಭುಗಳು ತಮ್ಮ ಅಂಗಾಲ ಕಣ್ಣು ತೆರೆದು ಅಡಗಿಸಿಬಿಟ್ಟರು. ಸಿದ್ಧರಾಮನ ಸಿಟ್ಟು, ಉರಿತಗುಲಿದ ಕರ್ಪೂರದಂತೆ ಕರಗಿತು. ಪಶ್ಚಾತ್ತಾಪಪಟ್ಟು, ಪ್ರಭುವಿನೆಡೆಗೆ ಬಂದು ಭಕ್ತಿಯಿಂದ ನಮಿಸಿ, ತನ್ನಿಂದಾದ ಅಪರಾಧಕ್ಕಾಗಿ ಕ್ಷಮೆ ಯಾಚಿಸುತ್ತಾನೆ. ಆಗ ಜ್ಞಾನಿಗಳಾದ ಪ್ರಭುದೇವರು, ಆತನು ಮಾಡುತ್ತಿದ್ದ ಅಸ್ಥಿರವಾದ ಕಾರ್ಯಗಳ ಬಗ್ಗೆ ತಿಳಿಸಿ ಹೇಳಿ "ಹೀಗೆ ಕೆರೆ, ಭಾವಿ ಕಟ್ಟಿಸಿ, ಅರವಟ್ಟಿಗೆಗಳನ್ನು ಇಡುವುದರಿಂದ ಮರಣದ ಬಳಿಕ ಸ್ವರ್ಗ ಸಿಗಬಹುದೇ ಹೊರತು, ಮುಕ್ತಿ ಸಿಗಲಾರದು. ಭೌತಿಕವಾದ ಕೆರೆಯನ್ನು ಕಟ್ಟುವ ಕಾರ್ಯ ನಿಲ್ಲಿಸಿ, ಆಂತರಂಗಿಕವಾದ ಕೆರೆ ಕಟ್ಟುವುದನ್ನು ಕಲಿಯಬೇಕು" ಎಂದು ಹೇಳುತ್ತಾ, ತಾವು ಎಂಥಹ ಕೆರೆ ಕಟ್ಟಿರುವರೆಂದು ತಿಳಿಸುತ್ತಾರೆ :

ತನುವೆಂಬ ಏರಿಗೆ ಮನವೆಂಬ ಕಟ್ಟೆ
ಆಚಾರವೆಂಬ ಸೋಪಾನ ಪರಮಾನಂದವೆಂಬ ಜಲವ ತುಂಬಿ
ಕೆರೆಯ ಕಟ್ಟಬಲ್ಲವರಾರನೂ ಕಾಣೆ !
ನಾ ಕಟ್ಟಿದ ಕೆರೆ ಸ್ಥಿರವಾಯಿತ್ತು, ಗುಹೇಶ್ವರಾ ನಿಮ್ಮಾಣೆ !

Digitalized by e-Sahithya Documentation Forum
Sponsored by Sarayu Foundation Trust

ಪ್ರಭುದೇವರ ನುಡಿಗಳಿಂದ ಸಿದ್ಧರಾಮನಿಗೆ ಜ್ಞಾನೋದಯವಾಗಿ, ತನ್ನ ಅಂತರಾವಲೋಕನ ಮಾಡತೊಡಗುವನು. ನಾನು ಇಷ್ಟು ದಿನ ಮಾಡಿದ ಎಲ್ಲಾ ಕೆಲಸ ಕಾರ್ಯಗಳೂ ಅಸ್ಥಿರವಾದುವೆ ? ಕರ್ಮಯೋಗ ಮಾಡದೆ ನಿರ್ಮಲ ಚಿತ್ತವನ್ನು ಪಡೆವುದಾದರೂ ಹೇಗೆ ? ಸ್ಥಾವರಲಿಂಗ ಪೂಜೆ ಕರ್ಮ, ಇಷ್ಟಲಿಂಗ ಪೂಜೆ ಅಕರ್ಮವೆ? ಮುಂತಾದ ಸಂಶಯದ ಹುಳು ತಲೆಯಲ್ಲಿ ಸುತ್ತ ತೊಡಗಿದಾಗ, ಪ್ರಭುದೇವರ ಮುಂದೆ ಪ್ರಶ್ನೆಗಳ ಮಾಲೆಯನ್ನೇ ಇರಿಸುತ್ತಾನೆ. ಅಲ್ಲಮರು ಪ್ರಶ್ನೆಗಳೆಲ್ಲಕ್ಕೂ ಮಾರ್ಮಿಕವಾಗಿ ಉತ್ತರಿಸುತ್ತಾ "ಕಾಯ–ಜೀವದ ಹೊಲಿಗೆಯ ಬಿಚ್ಚಿ, ನಿಜಪದವಿಯ ಪಡೆಯಲು ಇಷ್ಟ ಲಿಂಗವೆಂಬ ಕುರುಹಿನಿಂದ ಸಾಧ್ಯ. ಈ ಕುರುಹುವಿಡಿದು, ಕುರುಹುಗೆಡಬೇಕು"ಎಂದಾಗ ಸಿದ್ಧರಾಮನಿಗೆ ಆವರಿಸಿದ್ದ ಸಂದೇಹ ದೂರವಾಗಿ, ಇಷ್ಟಲಿಂಗದ ಬಗ್ಗೆ ಹೆಚ್ಚು ತಿಳಿಯ ಬೇಕೆಂಬ ಅಪೇಕ್ಷೆ ಉಂಟಾಗಿ, ಅದರ ಪೂರ್ಣ ಜ್ಞಾನವನ್ನು ತಿಳಿಸೆಂದು ಕೇಳಲು, 'ಇಷ್ಟಲಿಂಗದ ಕರ್ತೃ ಕಲ್ಯಾಣದ ಬಸವಣ್ಣ. ಅವನೊಬ್ಬನೇ ಅದರ ರಹಸ್ಯಗಳನ್ನು ಹೇಳಬಲ್ಲ, ಅಲ್ಲಿಗೇ ಹೋಗೋಣ' ಎಂದರು. ಬಸವಣ್ಣನವರ ಬಹುಮುಖ ವ್ಯಕ್ತಿತ್ವದ ಬಗ್ಗೆ ಕೇಳಿದ್ದ ಸಿದ್ಧರಾಮನಿಗೂ ಅವರ ದರ್ಶನ ಪಡೆಯಬೇಕೆಂಬ ಅಪೇಕ್ಷೆಯಿದ್ದುದರಿಂದ ಪ್ರಭುಗಳೊಡನೆ ಕಲ್ಯಾಣದತ್ತ ಪಯಣ ಬೆಳೆಸಿದ.

ಕಲ್ಯಾಣನಗರ ಯೋಗಿ ಅಲ್ಲಮರೊಡನೆ ಪ್ರವೇಶಿಸಿದಾಗ,ಹೊಸ ಲೋಕವೊಂದನ್ನು ಪ್ರವೇಶಿಸಿದಂಥಾ ಅನುಭವ, ಸಿದ್ಧರಾಮಣ್ಣನವರಿಗೆ. ಶರಣ ಸಂಗನ ಬಸವಣ್ಣನ ಮಹಾಮನೆಯನ್ನು ಕಾಣಲು ಹಲಕಾಲ ತಪಿಸಿದ್ದ ಸಿದ್ಧರಾಮಣ್ಣ ಕಂಡೊಡನೆಯೇ 'ನಮೋ ನಮೋ' ಎಂದು ಕೈಮುಗಿದ. ಕರ್ಮಯೋಗಿಯಾಗಿದ್ದ ಸಿದ್ಧರಾಮಣ್ಣ ಶರಣ ತಿಂಥಿಣಿಯಲ್ಲಿ ಒಂದಾದ ಬಳಿಕ ತನ್ನ ಮೂಲತನವನ್ನೇ ಕಳೆದುಕೊಳ್ಳುವರು, ವಿಶ್ವಗುರು ಬಸವಣ್ಣನವರ, ಚಿಜ್ಞಾನಿ ಚನ್ನಬಸವಣ್ಣ–ಅಲ್ಲಮ ಪ್ರಭುಗಳೆಲ್ಲರಿಂದ ಇಷ್ಟಲಿಂಗದ ಮಹತಿಯನ್ನುಅರಿತುಕೊಂಡು, ಷಟ್ಸ್ಥಲ ಚಕ್ರವರ್ತಿ ಚನ್ನಬಸವಣ್ಣನನ್ನೇ ಗುರುವಾಗಿ ಸ್ವೀಕರಿಸಿ, ಇಷ್ಟಲಿಂಗವನ್ನು ಧರಿಸಿ, ಶಿವಯೋಗ ಸಾಧನೆಯಲ್ಲಿ ನಿರತರಾಗು ವರು. ಅವರ ಸಾಧನೆಯ ಗತಿ ಹೇಗೆ ಮುಂದುವರಿಯಿತೆಂದು ತಮ್ಮದೇ ಆದ ವಚನದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. "ಬರುವ ಮುನ್ನ ಪುರುಷನಾಗಿದ್ದೆ, ಬಂದ ಬಳಿಕ ಸ್ತ್ರೀಯಳಾದೆ, ಇನ್ನು ಮುಂದೆ ನಪುಂಸಕನಾದೆ" ಎಂದರೆ, "ಕಲ್ಯಾಣಕ್ಕೆ ಬರುವ ಮುನ್ನ ಪುರುಷನೆಂಬ ಭಾವ ನನ್ನಲ್ಲಿ ಅಡಗಿತ್ತು. ಇಲ್ಲಿಗೆ ಬಂದ ಬಳಿಕ, ಗುರುಕರುಣೆ ಪಡೆದು, ಲಿಂಗಪತಿಯನ್ನು ಪಡೆದಂದಿನಿಂದ ಸ್ತ್ರೀಗುಣಗಳಳವಟ್ಟು ಸ್ತ್ರೀಯಳಾದೆ. ಮುಂದೆ, ಯೋಗ ಸಾಧನೆ ಮುಂದುವರೆಯುತ್ತಿದ್ದಂತೆ ಭಾವ ನಿರ್ಭಾವವಾಗಿ, ಪರಮನಲ್ಲಿ ಒಂದೇ ಎಂಬ ಭಾವ ದಿಂದಾಗಿ, ನಪುಂಸಕನಾದೆ" ಎಂದು ಹೇಳುವರು.

ಹೀಗೆ ಸಾಧನಾ ಮಾರ್ಗದಲ್ಲಿ ತೀವ್ರವಾಗಿ ಮುಂಬರಿದು, ಶಿವಯೋಗಿಯಾಗಿ, ಷಟ್ಸ್ಥಲಕ್ಕೂ ಒಡೆಯರಾಗಿ, ಮಹಾನುಭಾವಿಗಳಾದರು, ಸಿದ್ಧರಾಮಣ್ಣ. ಬಸವಣ್ಣ

ನವರು ನಿರ್ಮಿಸಿದ್ದ ಪೊಟ್ಟಮೊದಲನೆ ಲೋಕಸಭೆಯಾಗಿದ್ದ ಅನುಭವ ಮಂಟಪದ ಪ್ರತಿಭಾನ್ವಿತ ಸದಸ್ಯರಾಗಿ, ಬಸವಣ್ಣನವರು ಹಮ್ಮಿಕೊಂಡಿದ್ದ ಕಾರ್ಯಗಳಿಗೆ ತಮ್ಮದೇ ಆದ ಸಹಾಯ ಸಲ್ಲಿಸುವಲ್ಲಿ ಅನುಭವ ಮಂಟಪದ ಆಧಾರ ಸ್ತಂಭದಷ್ಟು ಪ್ರಮುಖ ಪಾತ್ರವಹಿಸಿದ್ದರು.

ಮುಂದೆ ಶೂನ್ಯಸಿಂಹಾಸನದ ತೃತೀಯ ಅಧಿಕಾರಿಗಳಾದ ಸಿದ್ಧರಾಮೇಶ್ವರರು ಕಲ್ಯಾಣದ ಕ್ರಾಂತಿ ನಡೆದ ಬಳಿಕ ಸೊನ್ನಲಿಗೆಗೆ ಬಂದು ನೆಲೆಸಿ, ತಮ್ಮ ಜೀವಿತದ ಕೊನೆಯ ಕಾಲವನ್ನು ಜನ ಸೇವೆಗಾಗಿ ಮೀಸಲಿಟ್ಟರು. ಹೀಗೆ ಕೆಲಕಾಲ ಲೋಕಸೇವೆ ಗೈದ ಆ ದಿವ್ಯ ಚೇತನ ಪರಮನಲ್ಲಿ ವಿಲೀನವಾಯಿತು. ಇಂದಿಗೂ ಸೊನ್ನಲಿಗೆಯಲ್ಲಿ ಅವರು ನಿರ್ಮಿಸಿದ ದೇವಾಲಯ ಮತ್ತು ಅವರ ಸಮಾಧಿಯನ್ನು ಕಾಣಬಹುದು.

ಸಮತೆಯ ಸಾಕಾರರೂಪಿ ಶಿವಯೋಗಿ ಸಿದ್ಧರಾಮಯ್ಯನವರ ಜೀವನ ಜ್ಞಾನ ಪಿಪಾಸುಗಳಿಗೆ, ಮುಮುಕ್ಷುಗಳಿಗೆ, ಮಾರ್ಗದರ್ಶನವಾಗಿದೆ. ಅವರ ಒಂದೊಂದು ವಚನಗಳೂ ಅನುಭವದ ಆಣಿಮುತ್ತುಗಳು. ವಚನ ಶಾಸ್ತ್ರಕ್ಕೆ ಅವರ ಕೊಡುಗೆ ಅದ್ವಿತೀಯ. 'ಬಸವ ಸ್ತೋತ್ರ ತ್ರಿವಿಧಿ', 'ಮಿಶ್ರ ಸ್ತೋತ್ರ ತ್ರಿವಿಧಿ', 'ಅಷ್ಟಾವರಣ ಸ್ತೋತ್ರ ತ್ರಿವಿಧಿ' ಇವುಗಳು ಅನುಭವಕ್ಕೆ ಸವಾಲಿನಂತಿವೆ.

ತಮ್ಮನ್ನು ತಾವರಿತ ಸಿದ್ಧರಾಮಣ್ಣನವರ ಒಂದೊಂದು ವಚನ ಕುಸುಮಗಳೂ ಭಾಷೆಯ ಸೌಂದರ್ಯ, ಭಾವದ ಮಕರಂದ, ಅನುಭವದ ಕಂಪಿನಿಂದ ಓದುಗರ ಹೃದಯ ಗಳೆಂಬ ದುಂಬಿಗಳನ್ನು ತಮ್ಮತ್ತ ಆಕರ್ಷಿಸುತ್ತವೆ. ಅಂಥ ಒಂದು ಅವರ ವಚನವನ್ನು ನೋಡೋಣ.

ತಿಳಿನೀರೆಂಬೆ, ತಿಳಿನೀರೆಂಬೆ.
'ತಿಳಿನೀ' ಎಂದು ಒಂದು ದಿನ ಅಂದಿಲ್ಲಲೆ ಮಾನವ !
ಕ್ಷಣ ಕ್ಷಣಕ್ಕೆ 'ತಿಳಿನೀ' ಎಂದರೆ,
ತಳುಹುದೇ ತನ್ನ ನಿಜವ ಕೊಡನೇ ಕಪಿಲಸಿದ್ಧ ಮಲ್ಲೇಂದ್ರ ?

ಜೀವನದ ಅವಿಶ್ರಾಂತ ಹೋರಾಟದಲ್ಲಿ ಲೌಕಿಕ ಮತ್ತು ಪಾರಮಾರ್ಥ ಪಥಿಕ ರೀರ್ವರಿಗೂ ಅನ್ವಯಿಸುವ, ಅತ್ಯಾವಶ್ಯಕವಾದ ಗುಣ 'ಚಿತ್ತಸಮತೆ' ಎನ್ನುವರು ಸಿದ್ಧರಾಮಣ್ಣನವರು. ಅವರ ಸಮತೆಯನ್ನು ಕುರಿತ ವಿವರಣೆಯನ್ನು ಈ ಕೆಳಗಿನ ವಚನದಲ್ಲಿ ನೋಡಬಹುದು.

ಆರೇನಂದರೂ ಓರಂತಿಪ್ಪುದೇ ಸಮತೆ
ಆರು ಜರಿದರೂ ಅವರೆನ್ನ ಮನದ ಕಾಳಿಕೆ ಕಳೆದರೆಂಬುದೇ ಸಮತೆ

Digitalized by e-Sahithya Documentation Forum
Sponsored by Sarayu Foundation Trust


ಆರು ಸ್ತೋತ್ರವ ಮಾಡಿದರೂ ಅವರೆನ್ನ ಜನ್ಮದ ಹಗೆಗಳೆಂಬುದೇ ಸಮತೆ
ಇಂತಿದು ಗುರುಕಾರುಣ್ಯ, ವಚನ-ಮನ-ಕಾಯದಲಿ
ಅಹಿತವಿಲ್ಲದೆ, ಕಪಿಲಸಿದ್ಧ ಮಲ್ಲಿಕಾರ್ಜುನಾ
ನಿಮ್ಮವರ ನೀವೆಂಬುದೇ ಸಮತೆ.

ಜೀವನವು ನೋವು-ನಲಿವು, ಸುಖ-ದುಃಖ, ಹೊಗಳಿಕೆ-ತೆಗಳಿಕೆ, ಇವುಗಳ ಸಮ್ಮಿಶ್ರಣ. ನಮಗೆದುರಾಗುವ ಸಮಸ್ಯೆಗಳನ್ನು ಯಾವ ರೀತಿ ಎದುರಿಸುವೆವೋ ಅದರ ಮೇಲೆ ನಮ್ಮ ಮಾನಸಿಕ ಸ್ಥಿತಿ ಅರಿವಾಗುತ್ತದೆ. ಯಾರು ಏನೇ ಅಂದರೂ ನಾವು ಸಮುದ್ರದಂತೆ (ಓರಂತೆ) ಇರಬೇಕು. ಅಂದರೆ, ಸಮುದ್ರ ಹೇಗೆ ಎಷ್ಟೇ ನದಿಗಳು ಬಂದು ಸೇರಿದರೂ ಹಿಗ್ಗದೇ, ಎಷ್ಟೇ ನೀರು ಆವಿಯಾಗಿ ಮೇಲೆ ಹೋದರೂ ಕುಗ್ಗದೇ ತನ್ನತನವನ್ನು ಉಳಿಸಿಕೊಂಡಿರುವುದೋ, ಅಂತೆಯೇ ಜೀವನೂ ಸಹ ಸುಖ-ಹೊಗಳಿಕೆ-ನಲಿವು ಬಂದಾಗ ಹಿಗ್ಗದೇ, ನೋವು-ದುಃಖ-ತೆಗಳಿಕೆ ಬಂದಾಗ ಕುಗ್ಗದೇ, ತನ್ನ ಚಿತ್ತ ಸಮತೆಯನ್ನು ಕಾಯ್ದುಕೊಳ್ಳಬೇಕು. ಯಾರಾದರೂ ಜರಿದರೆ, ತನ್ನ ಮನದ ಕಲ್ಮಶವನ್ನು ಕಳೆದರೆಂದು ಭಾವಿಸುವುದೇ ಸಮತೆ. ಅಂದರೆ, ಯಾರಾದರೂ ನಮ್ಮನ್ನು ತೆಗಳಿದಾಗ, ಅವರ ಮೇಲೆ ಸಿಟ್ಟಾಗದೆ, ನಮ್ಮ ನ್ಯೂನತೆಗಳನ್ನು ತೋರಿಸಿ ಕೊಟ್ಟ ಅವರಿಗೆ-ವಂದಿಸಿ, ಅವುಗಳನ್ನು ಸರಿಪಡಿಸಲು ಪ್ರಯತ್ನಿಸಬೇಕು. ಯಾರು ನಮ್ಮನ್ನು ಸ್ತೋತ್ರ ಮಾಡುವರೋ ಅವರು ನಮ್ಮ ಜನ್ಮದ ಹಗೆಗಳೆಂದು ತಿಳಿಯುವುದೇ ಸಮತೆ. ಕಾರಣ, ಹೊಗಳುವವರು ಯಾವಾಗಲೂ ತಮ್ಮ ಸ್ವಾರ್ಥ ಸಾಧನೆಗಾಗಿಯೇ ಹೊಗಳುತ್ತಾರೆ. ಹೊಗಳಿಕೆಯು ಪ್ರಗತಿಯ ಪಥದಲ್ಲಿ ಅಡ್ಡಿಯನ್ನೊಡ್ಡುವುದು. ಅಲ್ಲದೆ, ಹೊಗಳಿಸಿ ಕೊಂಡವ ಅಹಂಕಾರದಿಂದ ಮೆರೆಯುವ ಸಾಧ್ಯತೆಯಿದೆ. ಆದ್ದರಿಂದಲೇ ಸಿದ್ಧರಾಮಣ್ಣನವರು ಹೊಗಳುವವರು ನಮ್ಮ ಜನ್ಮದ ಹಗೆಗಳು ಎಂದು ಕರೆದಿದ್ದಾರೆ. ಹೀಗೆ ಚಿತ್ತ ಸಮತೆಯನ್ನು ಕಾಯ್ದುಕೊಂಡು, ವಚನ-ಮನ-ಕಾಯದಲ್ಲಿ ಗುರು ಕಾರುಣ್ಯವೇ ತುಂಬಿಕೊಂಡಿರುವ ಶರಣರನ್ನು 'ನೀವೇ' (ದೇವರೇ) ಎಂದು ಭಾವಿಸುವುದೇ ಸಮತೆ ಎಂದು ಶರಣರನ್ನು ಗೌರವಿಸುವ ಮಾತನ್ನೂ ನುಡಿದಿದ್ದಾರೆ.

ಹೀಗೆ ಲೌಕಿಕ-ಪಾರಮಾರ್ಥ ಜೀವಿಗಳಿಗೆ ಅನ್ವಯಿಸುವಂತೆ ಅನೇಕ ವಚನಗಳನ್ನು ಮಾರ್ಗದರ್ಶಕ ದೀವಿಗೆಗಳನ್ನಾಗಿ ಕೊಟ್ಟು, ಬಸವ ಧರ್ಮದ ಆಧಾರಸ್ತಂಭಗಳೆನಿಸಿಕೊಂಬ ಅಲ್ಲಮಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣನವರ ಸಾಲಿಗೆ ಸೇರಿ, ಧರ್ಮದಿಗ್ಗಜವಾಗಿ ಮೆರೆದ ಮಹಾವಿಭು ಸಿದ್ಧರಾಮೇಶ್ವರರು.

(ಮಕರ ಸಂಕ್ರಮಣ ೧೪-೧-೧೯೭೮ರ ಶ್ರೀ ಸಿದ್ಧರಾಮ ಜಯಂತಿಯ ಸ್ಮರಣಾರ್ಥ ಈ ಲೇಖನ—ಸಂ.)

★★★★



ಹಿಂದಿನ ಸಂಚಿಕೆಯವರೆಗೆ —

(ತತ್ತ್ವ ಪ್ರಸಾರ-ವಿದೇಶ ಸಂದರ್ಶನದ ಮಣಿಹ ಹೊತ್ತ ಪೂಜ್ಯ ಮಾತೆಯವರು ೧೯೭೭ ಮೇ ೧೪ ರಂದು ತಾಯ್ನಾಡಿನಿಂದ ತೆರಳಿದ್ದರು. ಪ್ರಾರಂಭದಲ್ಲಿ ಸ್ವಲ್ಪ ತೊಂದರೆಗಳಾದರೂ ಸ್ವಧೈರ್ಯದಿಂದ ಪರಿಹರಿಸಿಕೊಂಡು ಮುಂದೆ ಸಾಗುವಾಗಲೇ ಭಾರತಕ್ಕೆ ಬಂದು ಹೋಗಿದ್ದ ಮಿಸ್, ಉಮಾ ಮಹೇಶ್ವರಿ ಆರ್‍ಯಳ ಮೂಲಕ ಯೋಗ ಕೇಂದ್ರದ ಇಂದ್ರನಾಥರ ಪರಿಚಯವಾಗಿ ದಾರಿ ಸುಗಮವಾಗುತ್ತದೆ.)

ಧಾರಾವಾಹಿ—೪. — ಜಗದ್ಗುರು ಮಾತಾಜಿ

ಹರ್ಷಚಿತ್ತಳಾಗಿ ಸುಪ್ರಭಾತದಲ್ಲಿ ಎದ್ದು ನಾನು ಕಾಣಬೇಕಾದ ವಿಳಾಸಗಳ ಪಟ್ಟಿ ತೆಗೆದೆ. ಮನಸ್ಸು ಉಲಹಿತವಾಗಿತ್ತು. ಕಾರ್ಮೋಘ ಭೀಕರವಾಗಿ ಎರಗಿ ಕೊಚ್ಚಿಕೊಂಡು ಹೋಗುವಷ್ಟು ಮಳೆ ಸುರಿಸಿ, ಭಯಪಡಿಸಿ, ನಂತರ ಆಕಾಶ ನೀರಭ್ರವಾಗಿ ಕಾಂತಿ ಯುಕ್ತ ಸೂರ್ಯನು ಆಗಮಿಸಿ ಹೂವುಗಳನ್ನು-ಜನಗಳನ್ನು ಬಿಸಿ ಕಿರಣಗಳಿಂದ ಮುತ್ತಿಡತೊಡಗಿದರೆ ಹೇಗಾದೀತೋ, ಅಷ್ಟೊಂದು ಎಳೆಯಬಿಸಿಲು ಮನದ ಹೂದೋಟದಲ್ಲಿ ಹರಡಿತ್ತು. ಮೇಜರ್ ರಾಮಚಂದ್ರನ್ ಎಂಬ ಓರ್ವರು ಪತ್ರ ಮುಖೇನ ಪರಿಚಯವಾಗಿದ್ದರು. ಮತ್ತು, ಬೆಳಗಾಂವಿಯ ಶರಣ ವಿ. ಸಿ. ಲಗಲೆ, ಮುಖಾಂತರ ನಮ್ಮ ಪ್ರವಾಸದ ಬಗ್ಗೆ ವಿಶೇಷ ಕುತೂಹಲ ತೋರಿದ್ದರು. ಅವರ ದೂರವಾಣಿಯ ನಂಬರ್ ತೆಗೆದು ಪೋನ್ ಮಾಡಿದೆ, ಸಿಕ್ಕಿದರು. ನಾನು ಬಂದ ವಿಚಾರ ತಿಳಿದು ಬಹಳ ಹರ್ಷವ್ಯಕ್ತ ಪಡಿಸಿ, ಅಂದು ಹನ್ನೊಂದು ಗಂಟೆಗೆ ಬರುವುದಾಗಿ, ಅಡ್ರೆಸ್ ತಿಳಿಸಬೇಕೆಂದು ಹೇಳಿ, ಲಂಡನ್ ನಗರದ ಕೇಂದ್ರ ಭಾಗಕ್ಕೆ ಕರೆದುಕೊಂಡು ಹೋಗಿ ಸುಪ್ರಸಿದ್ಧ ರಾಷ್ಟ್ರೀಯ ಸ್ಮಾರಕಗಳನ್ನು, ವಸ್ತು ಸಂಗ್ರಹಾಲಯಗಳನ್ನು ತೋರಿಸುವ ಯೋಜನೆ ಸಿದ್ಧಪಡಿಸಿದರು.

ವೇಳೆಗೆ ಸರಿಯಾಗಿ ಬಂದ ರಾಮಚಂದ್ರನ್ ಕುಶಲವಾರ್ತೆ ಕೇಳಿ, ನನ್ನನ್ನು ಕರೆದೊಯ್ದರು. ಬಹು ಸೂಕ್ಷ್ಮವಾಗಿ ನಾನು ಸುತ್ತಲೂ ನೋಡುತ್ತ, ಬಸ್ಸಿನಲ್ಲಿ ಸಾಗು

Digitalized by e-Sahithya Documentation Forum
Sponsored by Sarayu Foundation Trust

ತ್ತಿದ್ದಂತೆಯೇ, ನಗರದ ಅಚ್ಚುಕಟ್ಟುತನ, ಜನ ಜೀವನ ವಿಧಾನ ವಾಹನ ವ್ಯವಸ್ಥೆ ಮುಂತಾದುವನ್ನು ಗ್ರಹಿಸುತ್ತಿದ್ದೆ. ಪುರುಷರು ಸ್ತ್ರೀಯರೂ ಎಂಬ ಭೇದವಿಲ್ಲದೆ ಜನರು ವರ್ತಿಸುವ ಬಗೆ, ಮಾತುಕತೆ ಏನೊಂದೂ ಇಲ್ಲದೆ ಮೂಕ ಗೊಂಬೆಗಳ ರೀತಿ ಪಯಣಿಸುವ ಪದ್ಧತಿ ಕಂಡು ಅಚ್ಚರಿ ಪಡುತ್ತಿದ್ದೆ. ನಮ್ಮ ವಾಹನವು ಲಂಡನ್ನಿನ ಆಕ್ಸ್‌ಫರ್ಡ್ ಸ್ಟ್ರೀಟ್‌ಗೆ ಬಂದಾಗ, ಹಲವು ಮೈಲಿಗಳುದ್ದದ ಆ ಬೀದಿಯಲ್ಲಿ ಹಾಯ್ದು ಬರುತ್ತಿದ್ದಾಗ ಇಡೀ ವಿಶ್ವವನ್ನು ಒಂದು ಬೆಳಕಿಂಡಿಯಲ್ಲಿ ತೋರಿಸಿದಂತೆನಿಸುತ್ತಿತ್ತು ...

ಪ್ರಜಾಪ್ರಭುತ್ವದ ತವರ್ಮನೆಯೆಂದು, ಕೀರೀಟವೆಂದು ಹೆಸರಾದ ಬ್ರಿಟನ್ ತನ್ನ ಕೀರ್ತಿಯನ್ನು ಉಳಿಸಿಕೊಂಡಿದೆ, ಎಂದೆಂದೂ ಉಳಿಸಿಕೊಳ್ಳಲು ಹೆಣಗುತ್ತಿದೆ. ಚಿತ್ರ ವಿಚಿತ್ರ ಆಕಾರದ ಆ ಪುಟ್ಟನಾಡು ಒಂದು ಕಾಲಕ್ಕೆ ಜಗತ್ತಿನ ಬಹು ಭಾಗವನ್ನು ಆಳಿದ್ದರೆ ಅದಕ್ಕೆ ಕಾರಣಗಳಿಲ್ಲದಿಲ್ಲ. ಇಂದು ಆ ಎಲ್ಲ ಭಾಗಗಳನ್ನು ಆಳದೆ ಇರಬಹುದು, ರಾಜಕೀಯ ಸಾರ್ವಭೌಮತ್ವವನ್ನು ಕಳೆದುಕೊಂಡಿರಬಹುದು, ಯೌವ್ವನದ ಕಾವನ್ನು ಕಳೆದುಕೊಂಡು 'ಮುದಿ ಸಿಂಹ' ವಾಗಿರಬಹುದು ; ಆದರೆ ಸಿಂಹ ಸಿಂಹವೇ ! ತನ್ನ ಭಾಷೆಯ ಪ್ರಭಾವವನ್ನು ಜಗದಾದ್ಯಂತ ವಿಸ್ತರಿಸಿ, ಆ ನಾಡುಗಳಿಂದ ತಾನು ಕಾಲ್ತೆಗೆದರೂ ಆಂಗ್ಲ ಭಾಷೆಯನ್ನು ಬೇರೂರಿಸಿ ಇಂದಿಗೂ ಸಾಹಿತ್ಯಕ–ಸಾಂಸ್ಕೃತಿಕ ಸಾರ್ವಭೌಮತ್ವದಲ್ಲಿ ಬ್ರಿಟನ್ ವಿರಾಜಿಸುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ನಾಡಿನೊಳಕ್ಕೆ ಹರಿದು ಬರುವ ಸಂದರ್ಶಕರು, ಪ್ರವಾಸಿಗಳು, ವಿದ್ಯಾಕಾಂಕ್ಷಿಗಳು, ಉದ್ಯೋಗಾಕಾಂಕ್ಷಿಗಳು, ಸ್ವಾತಂತ್ರ್ಯಾಪೇಕ್ಷಿಗಳು ಮುಂತಾದವರ ಸಂಖ್ಯೆ ವರ್ಷಾಕಾಲದ ಗಂಗಾಪ್ರವಾಹದಷ್ಟು ಬೃಹತ್.

ಇಂದು, ಲಂಡನ್ ಬ್ರಿಟನ್ನಿನ ರಾಜಧಾನಿ ಎಂಬುದಕ್ಕಿಂತ ಜಗತ್ತಿನ ರಾಜಧಾನಿ ಎಂಬಷ್ಟು ವೈವಿಧ್ಯತೆಯನ್ನು ಇಲ್ಲಿ ಕಾಣಬಹುದು. ಆಂಗ್ಲರ 'ಜೀರ್ಣಶಕ್ತಿ' ಅದ್ಭುತ! ಜಗತ್ತಿನ ವಿವಿಧ ಭಾಷೆಗಳ ಅನೇಕ ಶಬ್ದಗಳನ್ನು ಸದ್ದಿಲ್ಲದೆ ಜೀರ್ಣಿಸಿಕೊಂಡು ನಿಘಂಟುಗಳು ಬೆಳೆಯುತ್ತಿದ್ದರೆ, ವಿವಿಧ ಭಾಷೆಗಳ ತಾತ್ತ್ವಿಕ ಸಂಪತ್ತನ್ನು ರಕ್ತಗತ ಮಾಡಿಕೊಂಡು ಭಾಷೆ ಬೆಳೆಯುತ್ತಿದೆ ; ಎಲ್ಲ ನಾಡುಗಳ ಕಲಾ ವೈಭವವನ್ನು ಮೆಚ್ಚಿ, ಗ್ರಹಿಸಿ, ಅಂತರ ರಾಷ್ಟ್ರೀಯ ವೇದಿಕೆಗೆ ತಂದು ಅದಕ್ಕೆ ಮಾನ್ಯತೆ ನೀಡಿ ತನ್ನ ಗುಣಗ್ರಾಹಕ ಪ್ರಜ್ಞೆಯ ಪ್ರದರ್ಶನದಿಂದ ತಾನೂ ಮಾನ್ಯತೆ ಪಡೆಯುವ ಅಭಿರುಚಿ ಆ ನಾಡಿನದು.

ಪ್ರಕೃತಿಯೊಡ್ಡಿದ ಸವಾಲನ್ನು ನಗುನಗುತ್ತ ಸ್ವೀಕರಿಸಿ, ಬೇವನ್ನೂ ಬೆಲ್ಲವನ್ನಾಗಿಸಿದ ಆ ಸಮಾಜದ ಸಾಧನೆ ಮೆಚ್ಚುವಂಥದ್ದು. ಎಲ್ಲಾ ಬಗೆಯ ಬೆಳೆಗಳನ್ನು ಬೆಳೆಯುವಂಥ ಭೂಮಿಯನ್ನಾಗಲೀ, ಸೂರ್ಯ ಪ್ರಖರತೆ ವಾತಾವರಣ ಸೌಲಭ್ಯವನ್ನಾಗಲೀ ಪಡೆಯದ ಆ ನಾಡಿನಲ್ಲಿ ಅನ್ಯ ದೇಶಗಳಿಂದ ತರಿಸಿಕೊಂಡ ಆಹಾರ ಪದಾರ್ಥಗಳೇ ಹೆಚ್ಚು. ದುಸ್ಸಹನೀಯವಾದ ಛಳಿಗಾಲದ ಹಿಮದ ತಾಡನ ಪ್ರಕೃತಿಯ ಶಾಪವೇ

ಸರಿ ! ಆದರೇನಂತೆ ಅದೊಂದು ಕೊರತೆಯಾಗಿಲ್ಲ ಅಲ್ಲಿಯವರಿಗೆ. ವೈವಿಧ್ಯಮಯ ಪ್ರಕೃತಿ ಸಂಪತ್ತು, ಹಿತಕರ ಹವೆ, ಬಗೆಬಗೆಯ ಹೂವು–ಹಣ್ಣು, ದವಸ–ಧಾನ್ಯ ಎಲ್ಲ ಇದ್ದರೂ ಇನ್ನೂ ಬಡತನದ ಕೆಸರಿನಲ್ಲಿ ಸಿಕ್ಕು ಬಳಲುವ, ನಮ್ಮ ಭಾರತೀಯ ಜನಾಂಗವನ್ನು ನೋಡಿದರೆ ನಿಜಕ್ಕೂ ವ್ಯಥೆಯಾಗುವುದು. ಗೋವುಗಳನ್ನು ದಿನನಿತ್ಯ ಪೂಜಿಸುವ ಹಿಂದೂ ಸಮಾಜದಲ್ಲಿ ಹಾಲಿನ ಕೊರತೆ ನೀಗಿಲ್ಲ : ನೀರು ಬೆರೆಸದ ಹಾಲು ಎಲ್ಲರಿಗೆ ಸಿಕ್ಕೀತೆಂಬ ಭರವಸೆ ಇಲ್ಲ, [ಬಹುಶಃ ಗಟ್ಟಿಹಾಲು ಜೀಣಿಸಿಕೊಳ್ಳಲು ಕಷ್ಟವೆಂದು ನಮ್ಮ ಗೌಳಿಗರ ದೂರಾಲೋಚನೆ ಇರಬಹುದು] ಬಿಳಿಯರ ದೇಶದಲ್ಲಿ ದೊರೆಯುವ ಶುದ್ಧ ಹಾಲು, ಮೊಸರು ಅತ್ಯಂತ ರುಚಿಕರ.

ಆಂಗ್ಲರು ತುಂಬಾ ಸ್ವಾಭಿಮಾನಿಗಳು. ತಾವು ಸಾಂಸ್ಕೃತಿಕವಾಗಿ "ಗುರು" ಸ್ಥಾನದಲ್ಲಿದ್ದು ಇತರರಿಗೆ ಪಥ ದರ್ಶಿಗಳಾಗಬೇಕೆಂಬ ಛಲ ಉಳ್ಳವರು. ಅಂತೆಯೇ ಪ್ರಾಮಾಣಿಕತನಕ್ಕೆ ಅತ್ಯಂತ ಹೆಚ್ಚಿನ ಬೆಲೆ ಕೊಡುವವರು. ಸಾಮಾನ್ಯವಾಗಿ ಹೊರನಾಡುಗಳಿಂದ ಬಂದ ಪ್ರವಾಸಿಕ ಲೇಖಕರು ಮೊದಲು ಬರೆಯುವುದು ಈ ಪ್ರಾಮಾಣಿಕತೆಯ ಬಗ್ಗೆಯೇ. ಮನೆಯ ಹೊರಗಡೆ ಹಾಲಿನವನು ಬಿಟ್ಟು ಹೋಗುವ ಹಾಲಿನ ಬಾಟಲಿಗಳನ್ನು ಯಾರೂ ಮುಟ್ಟರೆಂಬ ಅಂಶ ಆಗಲೇ ಎಲ್ಲೆಡೆ ಪ್ರಸಾರವಾಗಿದೆಯಷ್ಟೇ. ಆ ಪ್ರಾಮಾಣಿಕತೆಯ ಬಗ್ಗೆ ಪುಷ್ಟಿಕೊಡಲು ಇನ್ನೆರಡು ಘಟನೆ ಸೇರಿಸುವೆನು.

ನಾನು ವಾಸಿಸುತ್ತಿದ್ದ ಮನೆಯ ಮಾಲಿಕಳು, ಮತ್ತೀರ್ವರು ತಮ್ಮ ಉದ್ಯೋಗಕ್ಕೆ ಹೋಗಿದ್ದರು. ನಾನೋರ್ವಳೇ ಓದುತ್ತ ಕುಳಿತಿದ್ದ ಮನೆಯೊಳಗೆ ನೆರಳು ಸುಳಿಯಿತು. ತಲ್ಲೀನಳಾಗಿ ಓದುತ್ತಿದ್ದ ನನಗೆ ಬಾಗಿಲು ತೆರೆದ ಸದ್ದು ಕೇಳಿಸಿರಲಿಲ್ಲ. ಹೆಜ್ಜೆಯ ಸದ್ದು ಮತ್ತು ಸುಳಿದ ನೆರಳು ಕಂಡು ಗಾಬರಿಯಾಗಿ ಎದ್ದು ನೋಡುವಾಗ ಓರ್ವ ಆಗಂತುಕ ಬಂದಿದ್ದ. 'ನೀನಾರು'? ಎಂದು ಕೇಳಿದಾಗ ಅವನು ಉತ್ತರಿಸಿದ, 'ನಾನೊಬ್ಬ ಪೇಯಿಂಟರ್. ಗೋಡೆಗೆ ಪೇಯಿಂಟು ಮಾಡಬೇಕಾಗಿದೆ. ಅದಕ್ಕೆ ಬಂದೆ...." ನನಗೆ ಸಮಾಧಾನವಾಗಲಿಲ್ಲ. "ಹಾಕಿದ್ದ ಬಾಗಿಲನ್ನು ಹೇಗೆ ತೆರೆದೆ ?" "ಚೀಟಿಯನ್ನು ಕೊಟ್ಟು ಕಳಿಸಿದ್ದರು. ಇಲ್ಲಿದೆ ನೋಡಿ." ನಿಜ, ಅದು ಮನೆಯ ಕೀಲಿಕೈ. ಅಬ್ಬಾ ! ಅಪರಿಚಿತ ಮನುಷ್ಯನ ಕೈಯಲ್ಲಿ ತುಂಬಿದ ಮನೆಯ ಕೀಲಿಯನ್ನು ಕೊಡುವುದೆ ? ನನಗೆ ಆಶ್ಚರ್ಯ ಉಕ್ಕಿಹರಿಯಿತು. ಮನೆಯ ತುಂಬಾ ಬೆಲೆಬಾಳುವ ಸಾಮಾನುಗಳಿರುವಾಗ ಅದೆಂತು ಕೊಡುವರು ! ನಾನು ಕೇಳಿಬಿಟ್ಟೆ : "ಇಂಥ ಸಂಪದ್ಭರಿತ ಸಾಮಾನುಗಳುಳ್ಳ ಮನೆಯ ಕೀಲಿಕೈ ಹೀಗೆ ಕೊಡುವರೇ ?" ಎಂದು ಕೇಳಿಬಿಟ್ಟೆ ! ಆಗ ಆ ಸಾಮಾನ್ಯ ಪೇಯಿಂಟರ್ ನುಡಿದ, "ಪ್ರಾಮಾಣಿಕತೆಯೇ ನಮ್ಮ ದೇವರು. ಅಪ್ರಮಾಣಿಕತೆಗಿಂತ ಬೇರೆ ನಾಚಿಕೆಗೇಡಿತನ–ಪಾಪ ಬೇರಿಲ್ಲವೆಂದು ನಾವು ತಿಳಿಯುತ್ತೇವೆ. ಅವರು (ಅಂದರೆಮನೆ ಮಾಲಿಕರು) ನಮ್ಮಲ್ಲಿ ವಿಶ್ವಾಸವಿಡುತ್ತಾರೆ; ನಾವು ಉಳಿಸಿಕೊಳ್ಳುತ್ತೇವೆ"

Digitalized by e-Sahithya Documentation Forum
Sponsored by Sarayu Foundation Trust

ಈ ಉತ್ತರದಿಂದ ನಾನು ಪುಳಕಗೊಂಡೆ. ಮನೆಯೊಡತಿ ಬಂದ ತಕ್ಷಣ ಅದೇ ಪ್ರಶ್ನೆ ಕೇಳಿದೆ–ಆಕೆ ನುಡಿದಳು : "ನಾವು ಮನುಷ್ಯರನ್ನು ನಂಬುತ್ತೇವೆ. ಮನುಷ್ಯ–ಮನುಷ್ಯನನ್ನು ನಂಬದಿದ್ದರೆಂತು! ನಾವು ಸಣ್ಣವರಿದ್ದಾಗಲಂತೂ ಮನೆಯ ಬಾಗಿಲನ್ನೇ ಮುಚ್ಚುತ್ತಿರಲಿಲ್ಲ : ಬೀಗ ಹಾಕುತ್ತಿರಲಿಲ್ಲ," ಎಂದು ಸ್ವಾಭಿಮಾನದಿಂದ ನುಡಿದು, ನಂತರ ಗೊಣಗಿದಳು, "ದಾರಿಯಲ್ಲಿ ಬಿಟ್ಟ ಸಾಮಾನು ಸಹ ಸುರಕ್ಷಿತವಾಗಿ ಒಡೆಯರ ಕೈ ಸೇರುತ್ತಿದ್ದವು. ಇತ್ತೀಚೆಗೆ ಎಲ್ಲ ದೇಶಗಳ ಜನ ಬಂದು ಸೇರಿ, ಇಲ್ಲಿ ಅಪ್ರಮಾಣಿಕತೆ ಜಾಸ್ತಿಯಾಗಿದೆ. ಅವರಿಗೆ ಹೆದರಿ ಮನೆಗೆ ಬೀಗ ಹಾಕುತ್ತೇವೆ." ಮನೆಯ ಬೀಗ ಹಾಕಿದರೇನಂತೆ ; ವಿಶಾಲವಾದ ಕಿಟಕಿಗಳಲ್ಲಿ ಯಾರಾದರೂ ತೂರಬಹುದು. ಕಬ್ಬಿಣದ ಸಳಿ ಗ್ರಿಲ್ ಏನೂ ಇರದೆ ಕೇವಲ ಅಖಂಡ ಗಾಜಿನ ಕಿಟಕಿಗಳಿರುವವು. ಈ ಕಿಟಕಿಗಳ ಮೂಲಕ ಒಳಗಿನ ಸಂಪತ್ತು ಚೆನ್ನಾಗಿ ಕಾಣುವುದು. ಆದರೂ ಕಳ್ಳತನ ಕಡಿಮೆ. ಆಗುವವು ಸಣ್ಣ ಪುಟ್ಟ ಕಳ್ಳತನಗಳಲ್ಲ, ದೊಡ್ಡ ದೊಡ್ಡ ಅಂಗಡಿಗಳ, ಬ್ಯಾಂಕುಗಳ ದರೋಡೆಗಳು. ಬಡತನದ ಬವಣೆಯಿಂದ ಮಾಡುವ ಕಳ್ಳತನಕ್ಕಿಂತ ಸಾಹಸ ಪ್ರದರ್ಶನಕ್ಕೆಂದೋ, ಸಿನಿಮಾ ಸ್ಫೂರ್ತಿಯಿಂದಲೋ, ಕೇವಲ 'ಚಟ' ಕ್ಕೆಂದೋ ಮಾಡುವವು. (ಈ ಕಡೆಯ ಶಬ್ದ ಭಾರತೀಯರಿಗೆ ಆಶ್ಚರ್ಯಕಾರಕ. ನಾನಲ್ಲಿದ್ದಾಗ ವಿಚಾರಣೆ ನಡೆಯುತ್ತಿದ್ದ ಕೊಲೆಗಾರ ನೆಲ್ಸನ್ನನ ಪ್ರಕರಣ ಮತ್ತು ಹಿಂದೆ ಐವರು ತರುಣಿಯರನ್ನು ಕೊಲೆಗೈದ ಡಾ|| ನಿಹಿಲ್ ಕ್ರೀಮ್ ಅಮಾನುಷ ಕೊಲೆಗಾರರು. "ಏತಕ್ಕೆ ಮಾಡಿದೆ?" ಎಂದು ನಿಹಿಲನನ್ನು ಕೇಳಿದಾಗ ಕೊಟ್ಟ ಉತ್ತರ, "ನನಗೆ ಗೊತ್ತಿಲ್ಲ. ಅವರು ಸಂಕಟಪಟ್ಟು ಸಾಯುವುದನ್ನು ನೋಡದರೆ ನನಗೆ ಸಂತೋಷವಾಗುತ್ತಿತ್ತು." ಸಿಗರೇಟಿನ ಚಟ ಕೆಲವರಿಗಿದ್ದಂತೆ, ಕುಡಿತದ ಚಟ ಹಲವರಿಗಿದ್ದಂತೆ ಕೆಲವರಿಗೆ ಕಳ್ಳತನ ಮತ್ತು ಕೊಲೆಯ ಚಟ !)

ಜನಸಾಮಾನ್ಯರ ಬದುಕಿನ ಪ್ರಾಮಾಣಿಕತೆ ಮೆಚ್ಚುವಂತಹುದು. ಮನೆಯ ಹೊರಗೆ ಹಾಕಿದ ಬಟ್ಟೆಗಳನ್ನು ಕದಿಯುವಂತಹುದು, ಕಾಂಪೌಂಡಿನಲ್ಲಿ ಬಿಟ್ಟ ಸಾಮಾನು ಹಾರಿಸುವಂತಹುದು ಇಲ್ಲವೇ ಇಲ್ಲ. ಈಸ್ಟ್ ಫಿಂಚ್ಲೆ ಮೆಯಿನ್ ರಸ್ತೆಯಲ್ಲಿ Help old aged people "ವೃದ್ಧರಿಗೆ ಸಹಾಯ ಮಾಡಿ" ಎಂದೊಂದು ಅಂಗಡಿ ಬೋರ್ಡ್ ನೋಡಿ ಅಚ್ಚರಿಯಾಗಿ ಒಳಗೆ ಹೋಗಿ ಕೇಳಿದೆ. "ಮಕ್ಕಳು ದೂರವಾಡಿರುವ, ಮಕ್ಕಳಿಲ್ಲದ, ದುಃಖಿತ ವೃದ್ಧರ ಸಹಾಯಾರ್ಥ ಈ ಅಂಗಡಿ. ಕೆಲಸ ಮಾಡುವವರೂ ಅವರೇ. ಜನರು ತಾವು ಉಪಯೋಗಿಸಿದ ಅನೇಕ ಸಾಮಾನನ್ನು ತಂದು ದಾನವಾಗಿ ಇಲ್ಲಿ ಕೊಡುವರು. ಕೆಲವು ಸಲ ಅತ್ಯಂತ ಹೊಸವನ್ನೇ ಕೊಡುವರು. ಇಂಥವನ್ನು ಮಾರಿ ಆ ಹಣವನ್ನು ವೃದ್ಧರಿಗೆ ಕೊಡುವರು. ಪರಸ್ಪರ ಸಹಾಯ ಮಾಡುವ ಈ ಮಾನವೀಯ ವ್ಯಾಪಾರ ನನಗೆ ತುಂಬ ಮೆಚ್ಚುಕೆಯಾಯಿತು. ಅಂದಿನಿಂದ ಹೆಚ್ಚಾಗಿ ಅಲ್ಲೇ ಸಾಮಾನುಕೊಳ್ಳ ತೊಡಗಿದೆ. ಒಂದು ದಿನ ಹೋದಾಗ ಬಾಗಿಲು ಮುಚ್ಚಿತ್ತು.

ಹೊರಗಡೆ, ಅಂದರೆ ರಸ್ತೆಯ ಮಗ್ಗುಲಲ್ಲಿನ ಪ್ರಮುಖ ದ್ವಾರದಲ್ಲಿಯೇ ಬಟ್ಟೆಯ ರಾಶಿ ಮರುದಿನ ಕುತೂಹಲಗೊಂಡು ಪ್ರಶ್ನಿಸಿದೆ, "ಹಾಗೆ ಹಾಕಿದರೆ ಯಾರಾದರೂ ಒಯ್ಯರೇ? ಅಂಗಡಿಯ ಮೇಲ್ವಿಚಾರಕಳು ಕೊಟ್ಟ ಉತ್ತರ ಮನನೀಯ. "ಇಲ್ಲಿ ಯಾರೂ ಹಾಗೆ ಒಯ್ಯರು. ಒಯ್ಯಬೇಕಾದರೆ ತುಂಬ ಬಡವರೇ ಇರಬೇಕು. ಅವರಿಗೆ ಉಪಯೋಗವಾಗುತ್ತಿದ್ದರೆ ಆಗಲಿ. ಸಮಾಜ ಕಲ್ಯಾಣಕ್ಕೆಂದು ತಾನೇ ನಾವು ಶ್ರಮಿಸುವುದು...." ನನಗೆ ರೋಮಾಂಚನವಾಯಿತು. ತಟ್ಟನೆ "ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ; ಕೂಡಲ ಸಂಗಮದೇವ ಏಕೋ ಭಾವ"' ಎಂಬ ಬಸವಣ್ಣನವರ ಮಾತು ಚಿತ್ತ ಪಟಲದಲ್ಲಿ ಮೂಡಿತು. [ಮಹಾತ್ಮರ ಮಾತುಗಳೆಲ್ಲ ಕೇವಲ ಉದ್ಧರಿಸಲಿಕ್ಕೆ; ಭಾಷಣ ಮಾಡಲಿಕ್ಕಷ್ಟೇ ನಮ್ಮ ದೇಶದಲ್ಲಿ ಉಪಯೋಗ !]

ಅಂಗಡಿಗಳು ಬೃಹತ್ತಾಗಿರುವವು ; ವ್ಯವಸ್ಥಾಪಕರು ಒಬ್ಬಿಬ್ಬರು. ತಮಗೆ ಬೇಕಾದ ಸಾಮಾನುಗಳನ್ನು ಆರಿಸಿಕೊಂಡು ಬಂದು ಕೊಟ್ಟರೆ ಬಿಲ್ಲು ಕೊಡುವರು. ಸಹಾಯ ಬೇಕಾದರೆ ಬಂದು ಸಾಮಾನು ಹುಡುಕಿ ಕೊಡುವರು. ಯಾರೂ ಯಾರನ್ನೂ ಕಾಯು (Watch) ವುದಿಲ್ಲ. ಮಾನವ ಮಾನವನಲ್ಲಿ ಇಡುವ ಈ ವಿಶ್ವಾಸ ಅಪ್ರತಿಮ.

ಹಣದ ವಿಷಯದಲ್ಲಷ್ಟೇ ಪ್ರಾಮಾಣಿಕತೆ ಅಲ್ಲ, ಕರ್ತವ್ಯದಲ್ಲಿಯೂ ಅಷ್ಟೇ. ವೇಳೆಗೆ ತಪ್ಪದೆ ಕಾಯಕಕ್ಕೆ ಜನರು ಬರುವರು ; ಕೆಲಸದ ಕಾಲದಲ್ಲಿ ಹರಟೆಯಿಲ್ಲ, ಮಾತಿಲ್ಲ, ಆಲಸ್ಯವಿಲ್ಲ; ಯಂತ್ರದಂತೆ, ಕೀಲುಗೊಂಬೆಗಳಂತೆ ಕಾರ್ಯ ಮಾಡುವರು. ನಮ್ಮ 'ವಿಧಾನ ಸೌಧ' ಗಳಲ್ಲಿಯಂತೆ ಖಾಲಿ ಕುರ್ಚಿಗಳ ಮೇಲೆ ಕೋಟುಗಳನ್ನು ತೂಗು ಹಾಕಿ, ಬೇಕಾದಲ್ಲಿ ಸಂಚರಿಸುವ ಮನೋವೃತ್ತಿಯಾಗಲೀ, ಬ್ರೀಫ್ ಕೇಸನ್ನು ಟೇಬಲ್ ಮೇಲೆ ಸಾಕ್ಷಿಯಾಗಿಟ್ಟು ಕ್ಯಾಂಟೀನ್‌ಗಳಲ್ಲಿ ಹರಟೆ ಕೊಚ್ಚುವ ಪ್ರವೃತ್ತಿಯಾಗಲೀ, ಕುಳಿತ ಸ್ಥಾನಕ್ಕಲ್ಲೇ ಆಳುಗಳಿಂದ ತಿಂಡಿ ಕಾಫಿ ತರಿಸಿ. ಕಾರಕೂನರೆಲ್ಲ ಅಲ್ಲೇ ಗುಂಪುಗೂಡಿ ಮಾತನಾಡುವ ಕುವೃತ್ತಿಯಾಗಲಿ ಇಲ್ಲ. ಲಂಚ್ ವೇಳೆಯಲ್ಲಿ ಅಷ್ಟೇ ಕ್ಯಾಂಟೀನಿಗೆ ಹೋಗಿ ಬರುವುದು. ಶಿಸ್ತು ಮೆಚ್ಚುವಂತಹುದು. ಕೆಲಸದಲ್ಲಿನ ನಿಷ್ಠೆ ಮನನೀಯ. "ಕಾಯಕವೇ ಕೈಲಾಸ," "ಕರ್ಮಣ್ಯೇವಾಧಿಕಾರಸ್ತೆ ಮಾಫಲೇಷು ಕದಾಚನ" ಎಂದು ನುಡಿದು ನುಡಿದು ಮಹಾಂತರು ಕಣ್ಮರೆಯಾದರೇ ವಿನಾ ನಮ್ಮ ನಾಡಿನ ಆದಕ್ಷತೆ ಹೋಗಲಿಲ್ಲ.

ಆಂಗ್ಲನಾಡಿನ ಪೋಲೀಸ್ ಡಿಪಾರ್ಟ್‌ಮೆಂಟು ತುಂಬ ಜಾಗೃತ. ಬಿಳಿಯ ಬಣ್ಣದ ಭವ್ಯಾಕಾರದ ಪೋಲೀಸರು ತಮ್ಮ ನೀಲಿಯ ಬಣ್ಣದ ಸೂಟು, ಸುಂದರ ಹ್ಯಾಟ್, ಮುಗುಳ್ನಗೆಯಿಂದ ಎಲ್ಲರಿಗೆ ಪ್ರೀತಿಪಾತ್ರರು. ಜನರ ಹಿತರಕ್ಷಕರೆಂಬ ಭಾವನೆ ಎಲ್ಲರಲ್ಲಿ. ತುಂಬ ಸ್ನೇಹಯುಕ್ತವಾಗಿ ಅವರು ಮಾತನಾಡಿ, ಬೇಕಾದ ಸಹಾಯ ನೀಡುವರು. ಒರಟುತನ, ದರ್ಪಗಳ ಸೋಂಕು ಎಳ್ಳನಿತೂ ಇಲ್ಲ. ಮೈಯೆಲ್ಲ ಕಣ್ಣಾಗಿ, ಸಮವೇಷ

Digitalized by e-Sahithya Documentation Forum
Sponsored by Sarayu Foundation Trust

ಧಾರಿಗಳಾಗಿ, ಅಥವಾ ನಾಗರಿಕ ವೇಷದಲ್ಲಿ ಸದಾ ಗಸ್ತು ತಿರುಗುವರು. ನಗರದ ಒಂದು ಭಾಗದಲ್ಲಿ ಕಳ್ಳತನ, ಸುಲಿಗೆ, ದರೋಡೆ, ಕೊಲೆ, ಅಪಘಾತವಾದರೆ ಸಾಕು ಮಿಂಚಿನ ವೇಗವಲ್ಲಿ ಸುದ್ದಿ ಮುಟ್ಟಿ ಎಲ್ಲೆಡೆ ಕಾರ್ಯೋನ್ಮುಖತೆ ಕಂಡು ಬರುವುದು. ರೇಡಿಯೋ ದಲ್ಲಿ ತಕ್ಷಣ ಅನೌನ್ಸ್‌ಮಾಡಿ ಸಾಧ್ಯವಾದಷ್ಟು ಬೇಗನೇ ಅಪರಾಧಿಗಳನ್ನು ಹುಡುಕಲೆತ್ನಿಸುವರು.

ಅಲ್ಲಿಯ "ನ್ಯಾಯ" ತುಂಬ ಬಿಗಿ ; ಪ್ರಾಮಾಣಿಕತೆಯ ಪರಮಾವಧಿಯನ್ನು ಕಾಣುತ್ತೇವೆ. ಎಂಥ ದೊಡ್ಡ ಅಧಿಕಾರ ಇರಲಿ ನ್ಯಾಯಾಲಯಕ್ಕೆ ತಲೆಬಾಗಲೇ ಬೇಕು. ಒಬ್ಬ ಡ್ಯೂಕನು ಒಮ್ಮೆ ರಸ್ತೆಯಲ್ಲಿ ಅಪಘಾತಕ್ಕೆ ಕಾರಣನಾದ. ತಪ್ಪು ಅವನದಿತ್ತು. "ನೀನು ಕೇಳಿದ ಪರಿಹಾರ ಕೊಡುವೆ. ನ್ಯಾಯಾಲಯಕ್ಕೆ ಹೋಗುವುದು ಬೇಡ ..." ಎಂದ. ಎದುರಾಳಿ ಒಪ್ಪಲಿಲ್ಲ. ಅತ್ಯಂತ ಉನ್ನತಾಧಿಕಾರಿಯಾದ ಅವನು ನ್ಯಾಯಾಲಯಕ್ಕೆ ಬರಲೇ ಬೇಕಾಯಿತು. "ಹಣದಿಂದ ಅಪರಾಧವನ್ನು ಮುಚ್ಚಬಹುದು, ಶಿಫಾರಸುಗಳಿಂದ ಯಾವುದರಿಂದಲೂ ಪಾರಾಗಬಹುದು" ಎಂಬ ವಿಚಾರಕ್ಕೆ ಅಲ್ಲಿ ಸಾಧ್ಯತೆ ಇಲ್ಲವೇನೋ ಎನ್ನಿಸಿತು. ಏನಾದರೂ ಆಕಸ್ಮಿಕ ದೋಷದಿಂದ ನಿರಪರಾಧಿ ದಂಡಿಸಲ್ಪಟ್ಟು, ನಂತರ ತಿಳಿದು ಬಂದಾಗ ಮತ್ತೆ ಶೋಧನೆ ನಡೆದು ಅಪರಾಧಿಯನ್ನು ಹಿಡಿದು, ಶಿಕ್ಷಿಸುವ ಘಟನೆ ಅನೇಕ. ಹೀಗೆ ವೃತ್ತಿಯಲ್ಲಿ ಅಪ್ರಮಾಣಿಕತೆ, ಅದಕ್ಷತೆ, ಅಜಾಗರೂಕತೆ, ಅನ್ಯಾಯ, ಮುಂತಾದವಕ್ಕೆ ಸಾಧ್ಯವಾದಷ್ಟು ಅವಕಾಶವಿಲ್ಲವೆಂದು ನನ್ನ ತಿಳುವಳಿಕೆ.

ಮಾನವನ ಜೀವಕ್ಕೆ ಕೊಡುವ ಬೆಲೆ ಅಪಾರ ; ವೈದ್ಯಕೀಯ ಸೌಲಭ್ಯ ; ಅಂಬ್ಯುಲೆನ್ಸ್ ಸೌಕರ್ಯ ಮಿಂಚಿನ ವೇಗದಲ್ಲಿ. ದಿನಾಂಕ ೨೨ ರ ಜುಲೈನ ಈವನಿಂಗ್ ಸ್ಟಾಂಡರ್ಡ್ ಪತ್ರಿಕೆ ತೆರೆದೆ. ಮಿ|| ಮೈಕಲ್ ಕಾಕ್ಸ್ ಎಂಬುವವನು ಸರಿಸೃಪಗಳನ್ನು ಸಾಕಿದ್ದ. ನಾಗರ ಹಾವು, ಹೆಬ್ಬಾವು, ರ್‍ಯಾಟಲ್ ಸ್ನೇಕ್ ಮುಂತಾದವು ಅವನ 'ಪೆಟ್ ಅನಿಮಲ್ಸ್'. ರ್‍ಯಾಟಲ್ ಸ್ನೇಕ್ ಕಚ್ಚಿ ಬಿಟ್ಟಿತು. ಸರ್ಪವಿಷ ವಿರೋಧಿ ಚುಚ್ಚುಮದ್ದನ್ನು ನ್ಯೂಕ್ರಾಸ್ ಆಸ್ಪತ್ರೆ, ರೀಜೆಂಟ್ಸ್‌ಸಿ ಪಾರ್ಕ್ ಜೂ ನಿಂದ ತರಿಸಿಕೊಟ್ಟರು. ಪ್ರಸಂಗಕ್ಕೆ ಬೇಕಾದೀತೆಂದು ಲಿವರ್ ಪೂಲಿನಿಂದ, ಎರಡು ನೂರು ಮೈಲುಗಳಿಂದ ಮತ್ತೊಂದನ್ನು ತರಿಸಿದರು. ಪೋಲೀಸರು ನೂರು ಮೈಲಿ ವೇಗದಲ್ಲಿ ಕಾರನ್ನು ಓಡಿಸಿಕೊಂಡು ಚುಚ್ಚುಮದ್ದನ್ನು ತಂದುಕೊಟ್ಟರು. ಈ ಜೀವದಯೆ ಮಾನವೀಯತೆ ಭಾರತದಲ್ಲಿ ಎಂದು ಬಂದೀತು? ನನಗೆ ಇನ್ನೂ ನೆನಪಿದೆ, ಹಸಿರು ಹಸಿರಾಗಿ ನೆನಪಿದೆ ; ತುಂಬು ಗರ್ಭಿಣಿಯೋರ್ವಳನ್ನು ತಾಯಿ–ತಂದೆ ಹೆರಿಗೆಗೆ ಕರೆತಂದಾಗ ವೈದ್ಯಾಧಿಕಾರಿಣಿಯು ಲಂಚವನ್ನು ಕೊಡಲಿಲ್ಲವೆಂದು ರೋಗಿಯನ್ನು ಆಸ್ಪತ್ರೆಗೆ ಸೇರಿಸಿಕೊಳ್ಳದಾಗ, ಹಣವನ್ನು ತರಲು ಆಕೆಯ ತಂದೆ–ತಾಯಿ ಹಳ್ಳಿಗೆ ಹೋದಾಗ ಆಸ್ಪತ್ರೆಯ ಕಾಂಪೌಂಡಿನ ಗಿಡದ ಕೆಳಗೆ ಆ ಗರ್ಭಿಣಿ ಸತ್ತುದು, ಆ ವೈದ್ಯಾಧಿಕಾರಿಣಿ ಕೆಲಸ ಕಳೆದುಕೊಂಡುದುದು ಇನ್ನೂ ನೆನಪಿದೆ.

"ತಮ್ಮ ವೃತ್ತಿ ಅತ್ಯಂತ ಪವಿತ್ರ, ಅನೇಕ ಜೀವಗಳನ್ನು ಸಂರಕ್ಷಿಸುವ ದೈವೀ ವೃತ್ತಿ" ಎಂಬ ಅರಿವು ನಮ್ಮ ಎಲ್ಲಾ ವೈದ್ಯರುಗಳಿಗೆ ಬರುವುದೆಂದೋ !

ಮನುಷ್ಯರಿಗೆ ಕೊಡುವ ಬೆಲೆಯತ್ತ ಇರಲಿ, ಪ್ರಾಣಿಗಳನ್ನು ಸಾಕುವುದೂ ಅಷ್ಟೇ ವಿಸ್ಮಯಕಾರಕ "ಹಿಂದೂಗಳು ಹಸುವನ್ನು ಪೂಜಿಸುವರಂತೆ; ಮೇಯಲು ರಸ್ತೆಯಲ್ಲಿ ಬಿಡುವರಂತೆ ಅಹುದೇ?" ಎಂದು ಅಚ್ಚರಿಯಿಂದ ಕೇಳುವರು. ಒಮ್ಮೆ ಫೈರ್ ಎಂಜಿನ್ ವಿಭಾಗದವರಿಗೆ ಕರೆ ಹೋಯಿತಂತೆ. ಅವರು ಬಂದರು. ಆಗಿದ್ದೇನು ? ಒಂದು ಸಾಕಿದ ಬೆಕ್ಕು ಎತ್ತರವಾದ ಗಿಡ ಏರಿತ್ತು. ಕೆಳಗೆ ಬರಲಾರದೆ ಮಿಯ್ಯಾಂವ್ ಎನ್ನುತ್ತಿತ್ತು. ಏಣಿ ಹಾಕಿ ಕೆಳಗಿಳಿಸಿ ಕೊಟ್ಟರಂತೆ! ೨೨ ರ ಜುಲೈ ದಿನ, ಫೈರ್ ಎಂಜಿನ್ನಿನ ಶಬ್ದ ಭೋರ್‌ಗುಟ್ಟಿತು. ಗಾಬರಿಗೊಂಡು ಹೊರಬಂದೆವು. ಎದುರು ಮನೆಯವರು ಫೋನ್ ಮಾಡದ್ದರಂತೆ. ಮನೆಯಲ್ಲೆಲ್ಲಾ ಶೋಧಿಸಿದರು, ಏನೂ ಇಲ್ಲ. ಅಷ್ಟಕ್ಕೆ ಫೈರ್ ಎಂಜಿನ್ನಿನವರು ಹೋಗಲಿಲ್ಲ, ಅಥವಾ ಸುಮ್ಮನೆ ಕರೆಕೊಟ್ಟರೆಂದು ಮನೆಯವರನ್ನು ದೂಷಿಸಲಿಲ್ಲ. ಅರ್ಧಗಂಟೆ ಪರೀಕ್ಷಿಸಿದರು. ಅಡಿಗೆ ಗ್ಯಾಸು ಒಸರಿ ಮನೆಯಲ್ಲಿ ವಾಸನೆ ತುಂಬಿದ್ದೇ ಈ ಭಯಕ್ಕೆ ಕಾರಣ. ಗ್ಯಾಸ್ ವಿಭಾಗದವರಿಗೆ ಕರೆ ಹೋಯಿತು. ಪೋಲೀಸ್ ಇಲಾಖೆಯವರು ಬಂದರು. "ಗ್ಯಾಸ್ ಲೀಕಾದ ದೋಷವಿದು" ಎಂದು ಸರಿಪಡಿಸಿದ ಬಳಿಕವೇ ಎಲ್ಲರೂ ಚದುರಿದರು. ಎಂಥ ಕಾರ್ಯದಕ್ಷತೆ, ಜವಾಬ್ದಾರಿ! ಒಮ್ಮೆ ಹಳ್ಳಿಯವರು ಓಡಿ ಬಂದು ಬಣವೆಗೆ ಬೆಂಕಿ ಹತ್ತಿದೆ ಎಂದು ಕೇಳಿಕೊಂಡಾಗ, ಫೋನಿದ್ದ ಮನೆಯವರು ಫೋನ್ ಮಾಡಿದಾಗ "ಆ ಹಳ್ಳಿ ನಮ್ಮ ಜುರಿಸ್‌ಡಿಕ್ಷ್ನ ಅಲ್ಲರೀ ...." ಎಂದು ನಮ್ಮವರು ಉತ್ತರ ಕೊಟ್ಟ ಪ್ರಸಂಗ ಇನ್ನೂ ನೆನಪಿದೆ. ನಮ್ಮ ಜನರಲ್ಲಿ ಯಾಕೀ ಉದಾಸೀನ, ಕರ್ತವ್ಯಹೀನತೆ ಮನೆ ಮಾಡಿಕೊಂಡಿವೆಯೋ !

ಮುದ್ದು ಪ್ರಾಣಿಗಳನ್ನು ಆ ಜನ ತುಂಬ ಪ್ರೀತಿಯಿಂದ ಸಾಕುವರು. ಅವರ ಮಾನವೀಯತೆಗೆ ಒಂದು ಘಟನೆ. ರಾಯಲ್ ಆಸ್ಕಟ್ ಅರಮನೆಯಲ್ಲಿ **ಒಂದು ದೊಡ್ಡ ಸಿಂಹಾಸನದ ಕೆಳಗೆ ಪಕ್ಷಿ ದಂಪತಿಗಳು ಗೂಡು ಕಟ್ಟಿ, ಮರಿ ಮಾಡಿದವಂತೆ.** ರಾಜ ದಂಪತಿಗಳು ಅವನ್ನು ಓಡಿಸದೆ 'Don't distrub us' ಎಂದು ಒಂದು ಬೋರ್ಡ್ ನೇತುಹಾಕಿಸಿ, ತಾವೂ ಕುಳಿತುಕೊಳ್ಳುವುದನ್ನು ಬಿಟ್ಟು ಅವುಗಳಿಗೆ ಸ್ವಾತಂತ್ರ್ಯ ನೀಡಿದರಂತೆ.

ಇಂಥ ಪ್ರಸಂಗಗಳನ್ನು ವಿವರಿಸುತ್ತಾ ಹೋದಂತೆಲ್ಲ ನನ್ನ ಲೇಖನ ಮಾಲಿಕೆ ಎಂದೂ ಅಂತ್ಯವನ್ನೇ ಕಾಣದಷ್ಟು ಬೆಳೆಯುತ್ತಾಹೋದೀತೇನೋ! ನಮ್ಮ ಮೂಡಣ ಮತ್ತು ಆ ಪಡುವಣ ನಾಡುಗಳ ಹವೆ, ಜನತೆಯ ದೃಷ್ಟಿಕೋನ, ಆಚಾರ-ವಿಚಾರ, ಪರಿಸರ, ವಶೌಲ್ಯ ಎಲ್ಲವುಗಳಲ್ಲಿಯೂ ಭಿನ್ನತೆ ಇರುವುದನ್ನು ಕಂಡು ಆಶ್ಚರ್ಯವೆನಿಸುತ್ತಿತ್ತು. ಅಂತೆಯೇ ನಿಮಗೂ ತಿಳಿಸಬೇಕೆಂಬ ಅತ್ಯುತ್ಸಾಹದಿಂದ, ನನ್ನ ಭಾವನೆಯು

Digitalized by e-Sahithya Documentation Forum
Sponsored by Sarayu Foundation Trust

ಹಕ್ಕಿ ರೆಕ್ಕೆ ಬಿಚ್ಚುತ್ತ ಹೊರಟರೆ, ವಾಸ್ತವತೆಯ ಮರ್ತ್ಯಕ್ಕೆಬರಲು ಬಯಸದೆ ಅಲ್ಲೇ ಹಾರಲಾಶಿಸುತ್ತದೆ.

ಬಾಳ ಗಾಡಿ ಅಲ್ಲಲ್ಲಿ ಆಗಂತುಕರನ್ನು ಸ್ನೇಹಿತರನ್ನು ಬಂಧುಗಳನ್ನು ಇಂಬಿಟ್ಟು ಕೊಳ್ಳುತ್ತ, ಕೆಳಗಿಳಿಸುತ್ತ ಗುರಿಯು ಮುಟ್ಟುವವರೆಗೆ ಸಾಗುವಂತೆ, ನಾವು ಏರಿದ್ದ ಬಸ್ಸೂ ಸಹ ಪ್ರಯಾಣಿಕರನ್ನು ಏರಿಸಿಕೊಳ್ಳುತ್ತ, ಹತ್ತಿಸಿಕೊಳ್ಳುತ್ತ ಓಡುತ್ತಿತ್ತು. ನಾವು ಹತ್ತಿದ್ದ ಬಸ್ಸಿನಲ್ಲಿ ಓರ್ವ ಡ್ರೈವರ್ ಮಾತ್ರ. ತಾನಾಗಿ ತೆರೆಯುವ ಆಟೋ ಮ್ಯಾಟಿಕ್ ಬಾಗಿಲಿನ ಗುಂಡಿ ಅವನ ಬಳಿ. ಹತ್ತುವವರು ಮುಂಬಾಗಿಲಲ್ಲಿ ಹತ್ತಿ ಅವನ ಬಳಿ ಹೋಗಿ ತಾವು ಕ್ರಮಿಸಬೇಕಾದ ದಾರಿಗೆ ಬೇಕಾದಷ್ಟು ನಾಣ್ಯವನ್ನು ಯಂತ್ರದಲ್ಲಿ ಹಾಕಿದರೆ ಅದು ಟಿಕೆಟ್ ಉದುರಿಸುತ್ತಿತ್ತು. ತೆಗೆದುಕೊಂಡು ಹೋಗಿ ಕುಳಿತುಕೊಳ್ಳ ಬೇಕು. ಆ ಬಸ್ಸಿನಲ್ಲಿ ಹೀಟಿಂಗ್ ವ್ಯವಸ್ಥೆ, ಹೆಚ್ಚು ಸಾಮಾನು ತಂದವರು ಅವನ್ನು ಇಡಲು ಬೇರೊಂದು ಕಟ್ಟೆ-ತೊಟ್ಟಿ, ಮಕ್ಕಳ ಕೈಗಾಡಿ ಇಡಲೊಂದು ಸ್ಥಳ, ಅಂಗವಿಕ ಲರು, ಗರ್ಭಿಣಿಯರು, ಮುದುಕರು ಕುಳಿತುಕೊಳ್ಳಲು ಕಾಯ್ದಿಟ್ಟ ಜಾಗಗಳು, ತುಂಬಾ ಸ್ವಚ್ಛ ವಾತಾವರಣ. ಮೆತ್ತನೆಯ ನಮ್ಮ ಫಸ್ಟ್ ಕ್ಲಾಸ್ ರೇಲ್ವೆ ಡಬ್ಬಿಯಲ್ಲಿರುವಷ್ಟು ಮೃದುವಾದ ಸೋಫಾ ಪಯಣಿಸಲು ಮುದವೆನಿಸುತ್ತಿತ್ತು.

ಆಕ್ಸ್‌ಫರ್ಡ್ ಬೀದಿಯಲ್ಲಿ (ಲೋಕ ವಿಖ್ಯಾತ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಇರುವ ಬೀದಿಯಲ್ಲ ; ಅದರ ಹೆಸರು ಹೊಂದಿದೆ ಮಾತ್ರ. ವಿಶ್ವವಿದ್ಯಾಲಯ ಲಂಡನ್ ನಗರಕ್ಕೆ ಸಾಕಷ್ಟು ದೂರದಲ್ಲಿ ಸ್ವತಂತ್ರವಾಗಿದೆ) ಹೋಗುವಾಗ, ನೀರಭ್ರ ಆಕಾಶ, ಹಂಸ ಪಕ್ಷಿಗಳಂತೆ ವಿಹರಿಸುವ ಬಿಳಿಯ ತುಂಡು ಮೋಡಗಳು, ಅವುಗಳೊಡನೆ ಸ್ಪರ್ಧಿಸಿ ನಿಲ್ಲಲು ಸಾಹಸಗೈವ ಗಗನ ಚುಂಬಿ ಕಟ್ಟಡಗಳು ಎದ್ದು ಕಾಣುತ್ತಿದ್ದವು. ಬೆಂಕಿ ಪೊಟ್ಟಣಗಳ ಮನೆಯಂತೆ, ಪಾರಿವಾಳದ ಸಾಲುಸಾಲು ಗೂಡಿನಂತೆ ಕಾಣ ಬರುವ ಆ ಎತ್ತರದ ಕಟ್ಟಡಗಳನ್ನು ದಿಟ್ಟಿಸಿ ನೋಡುತ್ತಿದ್ದರೆ, ಮೋಡಗಳೊಡನೆ ಮುಟ್ಟಾಟವಾ ಡುತ್ತ ಮೇಲೆ ಎರಗುವವೇನೋ ಎಂದು ಆತಂಕವಾಗುತ್ತಿತ್ತು.

ವಿಜ್ಞಾನದ ದೈತ್ಯ ಬಲವನ್ನು, ಅಂಕುಶದಿಂದ ಆನೆಯನ್ನು ಮಣಿಸುವಂತೆ, ಬುದ್ಧಿಯಿಂದ ಮಣಿಸಿ ಅಸಾಮಾನ್ಯ ನಗರ ಕಟ್ಟಿರುವ ಮಾನವನ ಜಾಣ್ಮೆಗೆ ತಲೆದೂ ಗುತ್ತ ಬಸ್ಸು ಇಳಿದು, ನಾವು ಸಂದರ್ಶಿಸಬೇಕಾದ ಅತ್ಯಂತ ಲೋಕ ವಿಖ್ಯಾತ ವಿಜ್ಞಾನ, ತತ್ತ್ವಜ್ಞಾನ, ಸಾಹಿತ್ಯ ಕಲೆ, ದರ್ಮವಿಜ್ಞಾನಗಳ ದಿವ್ಯ ಹಿಮಗಿರಿಯಾದ ಕಟ್ಟಡ ನಿಂತಿತ್ತು ; ಅದುವೇ ಬ್ರಿಟಿಷ್ ಮ್ಯೂಸಿಯಮ್ ! ಹಲವು ವರುಷಗಳ ಕನಸು ಕೈಗೂಡ ಲಿದೆ ಎನಿಸಿ ಸಂಭ್ರಾಂತಳಾಗಿ ಒಳಹೊಕ್ಕೆ.

(ಸಶೇಷ)

★★★★

ವಿಶ್ವದ ಪ್ರಪಥಮ ಮಹಿಳಾ ಜಗದ್ಗುರುಗಳೂ, ಸಮತಾವಾದಿಗಳೂ, ಕ್ರಾಂತಿಯೋಗಿಣಿಯರೂ, ವಿಶ್ವಧರ್ಮ ಪ್ರಸಾರಕರೂ ಆದ ಪೂಜ್ಯ
ಶ್ರೀ ಶ್ರೀ ಜಗದ್ಗುರು ಮಾತೆಮಹಾದೇವಿ, ಎಂ.ಎ., ಅವರಿಗೆ

ಅರಸೀಕೆರೆ ಪುರಸಭೆಯವರು ಭಕ್ತಿ ಗೌರವ ಪೂರ್ವಕವಾಗಿ ಅರ್ಪಿಸಿದ

ಬಿನ್ನವತ್ತಳೆ

ಕಾರಣಿಕ ಶರಣರತ್ನವೇ:– ಇತಿಹಾಸದ ಮರುಹುಟ್ಟೊಡೆದಂತೆ ಕಾರಣಿಕ ಶರಣರತ್ನವಾಗಿ ಚಿತ್ರದುರ್ಗದ ಲಿಂಗೈಕ್ಯ ಡಾ|| ಬಸಪ್ಪ ಮತ್ತು ಗಂಗಮ್ಮನವರ ಗರ್ಭದಲ್ಲಿ ದಿನಾಂಕ ೧೩–೩–೧೯೪೬ರಲ್ಲಿ ಚಿತ್ಕಳೆಯಾಗಿ ಜನ್ಮಧಾರಣೆ ಮಾಡಿದಿರಿ, ಸರ್ವರ ಚಿತ್ಕಳೆಯಾಗಿ, ಕನ್ನಡದ ಕಣ್ಮಣಿಗಳಾಗಿದ್ದೀರಿ.

ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರುವೇ:– ಲೌಕಿಕ ಭವದಿಂದ ಮುಕ್ತರಾಗಿ ಹೊರಬಂದು ಧಾರ್ಮಿಕತೆಯ ಹೆದ್ದಾರಿ ಹಿಡಿದು ಭವರೋಗದ ವೈದ್ಯರಾಗಿ, ಅಕ್ಕನ ಹೆಸರಿನ ಅನ್ವರ್ಥತೆಯನ್ನು ಪಡೆದು ವಿಶ್ವದ ಪ್ರಪ್ರಥಮ ಮಹಿಳಾ ಜಗದ್ಗುರು ಗಳಾಗಿ ರಾರಾಜಿಸುತ್ತಿರುವಿರಿ. ಈ ನಿಮ್ಮ ಆದರ್ಶವು ನಮ್ಮ ಸಮಾಜಕ್ಕೆ ಜ್ಯೋತಿ ಸದೃಶವಾಗಿದೆ.

ಜ್ಞಾನದಾಸೋಹ ಪ್ರವೀಣರೇ:– ಹೊಸ ಚಿಗುರು ಹಳೆ ಬೇರಿನ ಸಾಮರಸ್ಯ ದಿಂದ ಬೆಳಸಿದ ಪಾರಮಾರ್ಥಿಕತೆ ಮತ್ತು ವೈಜ್ಞಾನಿಕ ನಿಲುವಿನ ತಳಹದಿಯ ಮೇಲೆ ಬೆಳೆಸಿದ ತಾರ್ಕಿಕ ಜ್ಞಾನ ಸಂಪನ್ನರಾಗಿದ್ದೀರಿ, ತಮ್ಮ ಜ್ಞಾನಾಂಬುಧಿಯು ಅನಂತ ವಾದುದು. ತಮ್ಮ ವಾಕ್ ಪ್ರತಿಭೆ ಸರ್ವರ ಹೃದಯವನ್ನು ತುಂಬಿ ಹರ್ಷಚಿತ್ತರ ನ್ನಾಗಿಸಿದೆ. ತಿರಿದು ತುಂಬಿದ ಜ್ಞಾನ ಜೋಳಿಗೆಯಿಂದ ಹಿರಿದು ಪರ್ಚುಗುಡುತ್ತಿರುವಿರಿ. ತಮ್ಮ ಈ ಮಾರ್ಗದರ್ಶನ ಸದಾ ನಮ್ಮ ಜ್ಞಾನ ದೀವಿಗೆಯಾಗಲಿ.

ಪ್ರತಿಭಾ ಜ್ಯೋತಿಗಳೇ:– " ನವನವೋನ್ಮೇಶಶಾಲಿನಿ ಪ್ರತಿಭಾ ಮಾತಾ " ಎಂಬಂತೆ ತಮ್ಮ ಸೃಜನ ಶಕ್ತಿ ಪ್ರತಿ ಹಂತದಲ್ಲೂ ಹೊಸ ಹೊಸ ಭಾವನೆಗಳನ್ನು ಕಂಡು ಸಮಾಜ–ನಾಡುಗಳನ್ನು ಕಟ್ಟುವ ಕ್ರಿಯೆಯಲ್ಲಿ ರಾರಾಜಿಸುತ್ತಿದೆ. ಇದಕ್ಕೆ ಸಾಕ್ಷಿವೆತ್ತಂತೆ ಕನ್ನಡ ಸಾಹಿತ್ಯದಲ್ಲಿ ತಮ್ಮ ಮಹಾನ್ ಕೃಷಿ ಸ್ತುತ್ಯಾರ್ಹವಾದುದು.

ವಿದ್ವತ್ತಿಯ ಪ್ರತೀಕವೇ:– ಕನ್ನಡ ಭಾಷೆಯಲ್ಲಿ ಮಾತ್ರವಲ್ಲದೆ, ಆಂಗ್ಲ ಸಾಹಿತ್ಯದಲ್ಲೂ ಪರಿಣತಿಯನ್ನು ಪಡೆದು ನಮ್ಮ ನಾಡ ಸಂಸ್ಕೃತಿ–ವಿದ್ವತ್ತುಗಳನ್ನು

Digitalized by e-Sahithya Documentation Forum
Sponsored by Sarayu Foundation Trust

ಬಿತ್ತರಿಸುತ್ತಿರುವಿರಿ. ವಿಶ್ವ ಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆಯನ್ನು ನೀಡಿದವ ರಾಗಿದ್ದೀರಿ. ಕನ್ನಡಮ್ಮನ ತೊಡುಗೆಯನ್ನು ಆಂಗ್ಲ ಸಾಹಿತ್ಯಕ್ಕೆ ತೊಡಿಸಿ ಚಿರಂತನ ವಾಗಿಸಿರುವಿರಿ.

ಕ್ರಿಯಾಶೀಲರೇ:– "ಕಾಯಕವೇ ಕೈಲಾಸ"ವೆಂದು ನಡೆದು ಧಾರ್ಮಿಕ ಸಂಘಟನೆಯ ಹೆಗ್ಗುರುತಾಗಿ, ಚಿರಂತನವಾದ ಅಮೃತ ಧಾರೆಯನ್ನು ಆತ್ಮಕ್ಕೆ ನೀಡುತ್ತಿರುವಿರಿ. "ಕಾಯಕದಿಂದ ಬಂದ ಕಾರೆಯ ಸೊಪ್ಪಾದರೂ ಶಿವನಿಗರ್ಪಿತ" ಎಂಬುದನ್ನು ಕಾರ್ಯ ತತ್ಪರರಾಗಿ ನಡೆದು ತೋರಿಸಿದ್ದೀರಿ.

ವಿಶ್ವಮಾನವರೇ:– ಈ ಸಂಕೀರ್ಣ ವೇಳೆಯಲ್ಲಿ "ವ್ಯಷ್ಟಿಯ ಹಿತದೊಂದಿಗೆ ಸಮಷ್ಟಿ" ಹಿತವನ್ನು ಸಾಧಿಸುತ್ತಿರುವುದು ಶ್ಲಾಘನೀಯ. ಇದಕ್ಕೆ ಕುರುಹಾಗಿ ತಾವು ಬೆಳೆಸುತ್ತಿರುವ 'ವಿಶ್ವ ಕಲ್ಯಾಣ' ಕೇಂದ್ರವೇ ಸಾಕು. ಮಾನವೀಯತೆಯ ಹಿನ್ನೆಲೆಯಲ್ಲಿ ತನ್ನಂತೆ ಪರರನ್ನು ಬಗೆಯುವವರಾಗಿದ್ದೀರಿ. ನಿಮ್ಮ ಸಹೃದಯ ಮನಸ್ಸು ನಮ್ಮೆಲ್ಲರ ಉಸಿರಾಗಲೆಂದು ಆಶಿಸುತ್ತೇವೆ.

ಅಭಿನವ ಅಕ್ಕಮಹಾದೇವಿಯವರೇ:– ಕನ್ನಡ ಸಾಹಿತ್ಯ ಬನದಲ್ಲಿ ಕವಿ ಕೋಗಿಲೆಯಾಗಿ ದನಿಗೈದ, ಅನುಭವ ಅರಣ್ಯದಲ್ಲಿ ಧರ್ಮ ಮಯೂರವಾಗಿ ನರ್ತಿಸಿದ ಮಹಾ ತತ್ವಜ್ಞಾನಿ, ವೀರವಿರಾಗಿಣಿ ಅಕ್ಕಮಹಾದೇವಿಯನ್ನು ಕಣ್ಣಾರೆ ಕಾಣುವ ಪುಣ್ಯ ನಮಗಿರಲಿಲ್ಲ. ಆದರೆ ಈ ಜಗನ್ಮಾತೆಯ ಕಾರುಣ್ಯ ಪಡೆದು ರೂಪ, ದೇಶ, ಕಾಲ ಬೇರೆಯಾದರೂ ಭಾವ, ಮನ, ಆದರ್ಶಗಳು ಒಂದೇ ಆಗಿ ಅಭಿನವ ಅಕ್ಕಮಹಾದೇವಿಯಾಗಿ ಕಂಗೊಳಿಸುವ ತಮ್ಮನ್ನು ಕಂಡ ನಮ್ಮ ಕಣ್ಣುಗಳೇ ಧನ್ಯ, ಅಮೃತವಾಣಿ ಕೇಳಿದ ಕಿವಿಗಳೇ ಮಾನ್ಯ.

ವೀರಸನ್ಯಾಸಿನಿಯರೇ:– ಸಂಪ್ರದಾಯ ಮೂಢಾಚಾರಗಳ ಸಂಕೋಲೆಯಲ್ಲಿ ಸಿಕ್ಕಿಬಿದ್ದ ಮಾನವನ ಮನಸ್ಸನ್ನು ಬಿಡುಗಡೆ ಮಾಡಿ ವೈಚಾರಿಕತೆಯ ಉತ್ತುಂಗ ಶಿಖರಕ್ಕೆ ಏರಿಸುವ ಕ್ರಾಂತಿ ಯೋಗಿಣಿಯರು ತಾವು. ಬಳೆ ತೊಟ್ಟು ಗೃಹೋದ್ಧಾರದ ಗುರಿ ಹೊತ್ತ ಸ್ತ್ರೀಯು ಅಷ್ಟರಲ್ಲೇ ಸೀಮಿತಳಾಗಬೇಕಿಲ್ಲ; ರುದ್ರಾಕ್ಷಿಯ ವೀರ ಕಂಕಣ ತೊಟ್ಟು ಲೋಕೋದ್ಧಾರದ ಮಣಿಹವನ್ನು ಅಷ್ಟೇ ಸಮರ್ಪಕವಾಗಿ ನಿರ್ವಹಿಸಬಲ್ಲಳು ಎಂಬುದಕ್ಕೆ ಜೀವಂತ ಸಾಕ್ಷಿಯಾಗಿದ್ದೀರಿ, ಧೀಮಂತ ಮೂರ್ತಿಯಾಗಿದ್ದೀರಿ.

ಕನ್ನಡದ ಕೀರ್ತಿವಂತ ಕುವರಿಯೇ:– ಕಿರಿದಾದ ವಯಸ್ಸಿನಲ್ಲಿಯೇ ಹಿರಿದಾದ ಜ್ಞಾನ ಗಳಿಸಿ, ಜಗತ್ ಕಲ್ಯಾಣಕ್ಕಾಗಿ ಜ್ಞಾನ ಸುಧೆಯನ್ನು ಪ್ರವಚನ, ಗ್ರಂಥಗಳ ಮೂಲಕ ಅನಂತ ಜನರ ಹೃದಯ ಬಟ್ಟಲುಗಳಿಗೆ ಧಾರೆ ಎರೆದು ಅವರ ಬದುಕನ್ನು ಚಿನ್ಮಯಗೊಳಿಸಿದ್ದೀರಿ.

"ಭಾಷಣವೆಂದರೆ ಬೇಸರದ ಬುಗ್ಗೆ" ಎಂಬ ನಂಬಿಕೆ ಜನಮನದಲ್ಲಿರುವ ಈ ಕಾಲದಲ್ಲಿ ಸಂಪೂಜ್ಯ ಗುರುಗಳಾದ ಲಿಂಗಾನಂದಸ್ವಾಮಿಗಳು ಮತ್ತು ಅವರ ದಿವ್ಯ ಹಸ್ತ ಸಂಜಾತ ಗುರು ಪುತ್ರಿಯಾದ ತಾವು "ಪ್ರವಚನವು ಪರಮಾನಂದದ ಪ್ರಶಾಂತ ಮಂದಿರ" ಎಂಬ ಭಾವ ಬೆಳೆಸಿ ಪ್ರಚಂಡ ರೀತಿಯಲ್ಲಿ ಜನರನ್ನು ಆಕರ್ಷಿಸಿ, ಮುದಗೊಳಿಸಿ, ಚೇತನಿಸಿ, ಕೈಲಾಸವನ್ನು ಭುವಿಗಿಳಿಸಿ ತೋರಿಸಿದ್ದೀರಿ.

ಇಂತಹ ಪುಣ್ಯ ಪುರುಷರಾದ ತಮಗೆ ಕೃತಜ್ಞತೆ ಅರ್ಪಿಸುವುದು ಸುಲಭ ಸಾಧ್ಯವಿಲ್ಲವಾದರೂ ನಮ್ಮ ಉತ್ಸಾಹ ಕರ್ತವ್ಯಗಳಿಗೆ ರೂಪುಗೊಡಲು ಈ ಧನ್ಯವಾದವನ್ನು ಅರ್ಪಿಸುತ್ತಿದ್ದೇವೆ. ಅರಸೀಕೆರೆ ನಗರವು ವಿದ್ಯೆ, ವ್ಯವಸಾಯ ವ್ಯಾಪಾರಗಳ ತ್ರಿವೇಣಿ ಸಂಗಮವಾಗಿದೆ. ಇಂತಹ ನಗರದ ಜನತೆಯ ಸೇವೆಯನ್ನೇ ನಮ್ಮ ಉದಾತ್ತ ಧ್ಯೇಯವಾಗಿರಿಸಿಕೊಂಡು, ಸಾರ್ವಜನಿಕರ ಹಿತರಕ್ಷಣೆ ಸೌಲಭ್ಯ–ಆರೋಗ್ಯಗಳಿಗಾಗಿ ಶ್ರಮಿಸುತ್ತಿದ್ದೇವೆ.

ದೈವೀಶಕ್ತಿಯ ಸಾಕಾರವಾಗಿ, ಸಮತವಾದದ ಪ್ರತಿನಿಧಿಯಾಗಿ, ವಚನಕಾರರ ಕ್ರಾಂತಿಕಾರಿ ಸಂದೇಶಗಳನ್ನು ಮುಟ್ಟಿಸುವ ಸುಗಂಧ ಮಾರುತವಾಗಿ, ವಿಶ್ವಧರ್ಮ ಜ್ಯೋತಿಯನ್ನು ಜನತೆಯ ಹೃದಯಪ್ರಣತೆಗೆ ಅಂಟಿಸುವ ನಾಡನಂದಾದೀಪವಾಗಿ ಕಂಗೊಳಿಸುತ್ತಿರುವ ತಮ್ಮ ಶುಭ ಹರಕೆ ನಮಗೆ ಆತ್ಮ ವಿಶ್ವಾಸವನ್ನು ನೀಡಿ, ಜನಸೇವೆ ಮಾಡುವ ಸಾಮರ್ಥ್ಯವನ್ನು ನೀಡಲೆಂದು ಕೇಳಿಕೊಳ್ಳುತ್ತಾ, ತಾವು ಹೊತ್ತ ಮಹಾ ಮಣಿಹವನ್ನು ಪೂರೈಸುವುದಕ್ಕೆ ಅವಶ್ಯಕವಾದ ಆಯುರಾರೋಗ್ಯ ಭಾಗ್ಯಗಳನ್ನು ಪರಮಾತ್ಮನು ಕರುಣಿಸಲಿ, ಎಂದು ಆ ದಯಾಮಯನಲ್ಲಿ ಪ್ರಾರ್ಥಿಸುತ್ತಾ ಜನತಾ ಪ್ರತಿನಿಧಿಗಳಾದ ನಾವು ಕೃತಜ್ಞತಾ ಪೂರ್ವಕವಾಗಿ ತಮಗೆ ಈ ನಮ್ಮ ಬಿನ್ನವತ್ತಳೆಯನ್ನು ಸಮರ್ಪಿಸುತ್ತಲಿದ್ದೇವೆ.

ದಿನಾಂಕ: ೧೫–೧೨–೭೭
ಸ್ಥಳ: ಅರಸೀಕೆರೆ.

ಪುರಸಭೆಯ ಅಧ್ಯಕ್ಷರು ಮತ್ತು
ಸದಸ್ಯರು, ಅರಸೀಕೆರೆ.

★★★★

ಜೀವನದ ದಾರಿಯಲಿ ನೂರಾರು ಮುಳ್ಳು
ನಿಜವಲ್ಲ ಈ ಜಗವು ಕನಸಂತೆ ಸುಳ್ಳು.
ಅರಿತಾಗ ನೀ ಧನ್ಯ ಈ ಅಂದ ಸೂತ್ರ
ಇಲ್ಲದಿರೆ ಹುರುಳಿಲ್ಲ ಈ ನಿನ್ನ ಪಾತ್ರ.

—ಬಿ. ಸೋಮಲಿಂಗ

Digitalized by e-Sahithya Documentation Forum
Sponsored by Sarayu Foundation Trust

ವಿಶ್ವ ಕಲ್ಯಾಣ ಮಿಷನ್ನಿಗೆ ಸಹಾಯ ಸಲ್ಲಿಸಿದ

ಅರಸೀಕೆರೆ ಸದ್ಭಕ್ತರು.

೧. ಶರಣರಾದ. ಎಸ್. ಬಸಪ್ಪ. ೨. ಶರಣೆ. ಎನ್. ಬಿ. ಶಾಂತಮ್ಮ.
೩. ಶರಣೆ. ಹೇಮಾವತಿ. ಕೆ. ಎಂ. ಚಂದ್ರಪ್ಪ. ೪. ಶರಣೆ ಶಾರದಮ್ಮ. ಪುಟ್ಟಪ್ಪ.
೫. ಶರಣ. ಓ. ಮುರುಘೇಂದ್ರಪ್ಪ. ೬. ಶರಣೆ. ಸರೋಜಮ್ಮ.
೭. ಶರಣ. ಡಾ॥ ಬಂಗಾರಿರೇಣುಕ. ೮. ಶರಣ. ಚನ್ನಬಸಪ್ಪ ಕಮದಾಳ.

ತಿಪಟೂರಿನ ಸದ್ಭಕ್ತರು.

೯. ಶರಣೆ. ಸುಶೀಲಮ್ಮ ಲಿಂಗೇಗೌಡ.
೧೦. ಶರಣೆಯರಾದ ಜಯಮ್ಮ. ಶಿವಮ್ಮ ಮತ್ತು ಚಂದ್ರಮ್ಮ.
೧೧. ಶರಣೆ. ನಾಗರತ್ನಮ್ಮ. ಎಸ್. ರಂಗಯ್ಯಶೆಟ್ಟರು.
೧೨. ಶರಣ. ಪಿ. ಕೆ. ರಾಜಶೇಖರಯ್ಯ, ಹುಲ್ಲಕಟ್ಟೆ.
೧೩. ಶರಣ. ಸಾಸಲು ಗಂಗಾಧರಪ್ಪ. ೧೪. ಶರಣ. ಕೆಂಚರಾಯಪ್ಪ, ಹಳೇಪಾಳ್ಯ.


೧೫೧ ರೂಪಾಯಿಗಳನ್ನು ಸಲ್ಲಿಸಿ ಕಲ್ಯಾಣ ಕಿರಣ ಆಜೀವ ಸದಸ್ಯರಾದವರು

ತಿಪಟೂರಿನ ಸದ್ಭಕ್ತರು.

೧. ಶರಣೆ ಶಕುಂತಲಾ, ಬಸವಲಿಂಗಪ್ಪ, ಗಾಣಧಾಳ.
೨. ಶರಣ. ಬಿ. ಎಸ್. ಸಿದ್ಧರಾಮಯ್ಯ, ಹಿಂದಿ ಪಂಡಿತರು.
೩. ಶರಣ. ಎಸ್. ಪಿ. ಗಂಗಾಧರಪ್ಪ, ಸಾಸಲು ಬ್ರದರ್ಸ್.
೪. ಶರಣ. ಹೆಚ್. ಎಂ. ಮರಿಸಿದ್ದಪ್ಪ,
೫. ಶರಣ. ರುದ್ರಾಣಮ್ಮ. ಬಿ. ಟಿ. ರಾಮೇಗೌಡರು.
೬. ಶರಣೆ. ಶಿವಮ್ಮ ರಾಜಶೇಖರಯ್ಯ, ಹುಲ್ಲಕಟ್ಟೆ.
೭. ಶರಣ. ಪರಮಶಿವಯ್ಯ, ಗೌಡನ ಕಟ್ಟೆ. ೮. ಶರಣೆ. ಪ್ರಭಾ ಶಿವಪ್ಪ. ಏ. ಇ.

ಅರಸೀಕೆರೆಯ ಸದ್ಭಕ್ತರು.

೧. ಶರಣ. ಕೆ. ಸಿ. ಹೇಮಾವತಿ ಚಂದ್ರಪ್ಪ, ಮಂಡಿ ಮರ್ಚೆಂಟ್.
೨. ಶರಣ. ಅಮೃತಕುಮಾರ, ಲಕ್ಷ್ಮಿಪುರ.
೩. ಶರಣ ಟಿ. ಎಸ್. ವಿಶ್ವನಾಥ, ಮಂಜುನಾಥ ಹಾಲ್.
೪. ಶರಣ, ಎ. ಎಸ್. ಕೃಷ್ಣಶೆಟ್ಟಿ. ೫. ಶರಣ. ಜಿ. ಉರಿಲಿಂಗಪ್ಪ, ವಕೀಲರು.
೬. ಶರಣ. ರಾಮನಾಥ ಶೆಟ್ಟಿ, ರಾಮಾವಿಲಾಸ, ೭. ಶರಣೆ ನಳಿನಿ. ಪಿ. ಬಿ. ಶಾಂತಪ್ಪ.
೮. ಎ. ಎಸ್. ನೀಲಕಂಠಯ್ಯ, ಅಗ್ಗುಂದ, ಜಿಲ್ಲಾ ; ಹಾಸನ.



ತಿಪಟೂರಿನಲ್ಲಿ ದಿ. ೧೨-೧೧-೧೯೭೭ ರಂದು ಶರಣ ಎನ್. ಎಸ್. ಮುರಿಗೆಪ್ಪ ಅವರು ವಿಶ್ವಕಲ್ಯಾಣ ಮಿಷನ್‌ನ ಪುಸ್ತಕ ಮಳಿಗೆಯನ್ನು ಉದ್ಘಾಟಿಸುತ್ತಿರುವುದು.

Digitalized by e-Sahithya Documentation Forum
Sponsored by Sarayu Foundation Trust



ಪರಮ ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರನ್ನು
ಅರಸೀಕೆರೆಯ ಪುರಸಭಾಧ್ಯಕ್ಷರು ಮತ್ತು ಪುರಪ್ರಮುಖರು
ಮೆರವಣಿಗೆಯ ಮೂಲಕ ಅದ್ದೂರಿಯಾಗಿ ಸ್ವಾಗತಿಸಿದಾಗ ತೆಗೆದ ಚಿತ್ರ
ದಿನಾಂಕ : ೫-೧೨-೧೯೭೭

Correspond to :

BASAVA MANTAPA
24, Chord Road, 2nd Block, Rajajinagar
Bangalore-560010

Digitalized by Sahithya Documentation Forum
Sponsored by Sarayu Foundation Trust